01 March 2026 Sunday

SINCE 1957

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

# ವರ್ತಮಾನ

ಸಂಪಾದಕ: ಕೆ.ಎನ್.ರವಿ

ಭವಿಷ್ಯದ ಮುನ್ನುಡಿ

**ಭಾವನಾಂತರಂಗ**

ಹೊರಟು ಜಾಗಕ್ಕೆ ಮತ್ತೆ ಬಂದು ತಲುಪುವುದು
ಗಡಿಯಾರದ ಮುಳ್ಳು ಮಾತ್ರ ಕಾಲವಲ್ಲ
ಎನ್ನುವುದು ನಮ್ಮ ಗಮನದಲ್ಲಿರಬೇಕು!

-ಸ್ನೇಹಾ ಆನಂದ್

info.varthaman@gmail.com



ಚಾ.ನಗರ ಜಿಲ್ಲೆಯಾದ್ಯಂತ ಸುಗಮವಾಗಿ ನಡೆದ ಪಿಯುಸಿ ಪರೀಕ್ಷೆ ಪುಟ ಸಂ. 2



ಒಳ ಮೀಸಲಾತಿ ಬೇಡ, ಹಳೆಯ ಮೀಸಲಾತಿ ಮುಂದುವರಿಸಲು ಆಗ್ರಹ ಪುಟ ಸಂ. 3



ಮಾ.5ರಂದು ರಾಮನಗರದಲ್ಲಿ ಜಿಲ್ಲಾ ಮಟ್ಟದ ಉದ್ಯೋಗ ಮೇಳ ಪುಟ ಸಂ. 4

9742504916 | ಮೈಸೂರು | ಮಂಡ್ಯ | ಬೆಂಗಳೂರು | ಹಾಸನ | ಚಾಮರಾಜನಗರ | ರಾಮನಗರ | ಬೆಂಗಳೂರು ಗ್ರಾಮಾಂತರ | ಕೊಡಗು | ಕಾರ್ಯನಿರ್ವಾಹಕ ಸಂಪಾದಕ - ಕೆ.ಆರ್.ಮಿಹಿರ್ ಆಕಾಶ್

VARTHAMAN | Volume: 69 | Issue: 111 | Pages: 06 | KA/SK/MYS/1098/2023-2025 | R.N.I. No.3577/1957 | www.varthaman.in | Price-3

## ಇರಾನ್ ಮೇಲೆ ಜಂಟಿ ದಾಳಿ
# ಮಧ್ಯಪ್ರಾಚ್ಯದಲ್ಲಿ ಮಹಾಯುದ್ಧ
### ಅಮೆರಿಕ– ಇಸ್ರೇಲ್ ದಾಳಿಗೆ ಇರಾನ್ ಪ್ರತಿದಾಳಿ

**ಟೆಹರಾನ್:** ಪರಮಾಣು ಒಪ್ಪಂದದ ಮಾತುಕತೆಗೆ ಸ್ಪಂದಿಸದ ಕಾರಣಕ್ಕೆ ಇರಾನ್ ಮೇಲೆ ಅಮೆರಿಕ–ಇಸ್ರೇಲ್ ಜಂಟಿಯಾಗಿ ದಾಳಿ ನಡೆಸಿವೆ. ಇಸ್ರೇಲ್ ರಾಜಧಾನಿ ಮತ್ತು ಮಧ್ಯಪ್ರಾಚ್ಯದಲ್ಲಿರುವ ಅಮೆರಿಕದ ವಾಯನೆಲೆಗಳನ್ನು ಗುರಿಯಾಗಿಸಿಕೊಂಡು ಇರಾನ್ ಪ್ರತೀಕಾರದ ದಾಳಿ ನಡೆಸಿದೆ.

ಇರಾನ್‌ನ 30ಕ್ಕೂ ಹೆಚ್ಚು ನಗರಗಳ ಮೇಲೆ ದಾಳಿ ನಡೆಸಲಾಗಿದೆ. ರಾಜಧಾನಿ ಟೆಹರಾನ್‌ನ ಜಮ್ಹೂರಿ, ಯೂನಿವರ್ಸಿಟಿ ಸ್ಟ್ರೀಟ್ ಮತ್ತು ಉತ್ತರ ಭಾಗದ ಸೈಯದ್ ಖಂದಾನ್ ಪ್ರದೇಶ, ಅಣುಶಕ್ತಿ ಸಂಶೋಧನಾ ಕೇಂದ್ರವಿರುವ ಇಸ್ಫಹಾನ್ ಮತ್ತು ನಟಾಂಜ್, ಇಸ್ಲಾಮಿಕ್ ರೆವಲ್ಯೂಷನರಿ ಗಾರ್ಡ್ ಕಾರ್ಪ್ಸ್ (ಐಆರ್‌ಜಿಸಿ) ಪ್ರಮುಖ ನೆಲೆಗಳು, ಬಂದರು ನಗರಿ ಬುಶೆಹರ್ ಸೇರಿದಂತೆ ಪ್ರಮುಖ ನಗರ ಮೇಲೆ ವೈಮಾನಿಕ ದಾಳಿ ನಡೆದಿದೆ.

**ಇರಾನ್ ಪ್ರತೀಕಾರ:** ಇಸ್ರೇಲ್ ಪುಟ 2ಕ್ಕೆ



### ಇರಾನ್ ವಿರುದ್ಧ ಕ್ಷಿಪಣಿ ದಾಳಿ

ಇಸ್ರೇಲ್ ಪ್ರಧಾನಿ ನೆತನ್ಯಾಹು ಮೊದಲ ಪ್ರತಿಕ್ರಿಯೆ ನೀಡಿದ್ದು, ಇರಾನ್ ಕೂಡ ಇಸ್ರೇಲ್ ಸೇರಿದಂತೆ ಒಟ್ಟು 8 ದೇಶಗಳ ಮೇಲೆ ದಾಳಿ ಮಾಡಿದೆ. ಇಸ್ರೇಲ್ ವಿರುದ್ಧ ಕ್ಷಿಪಣಿ ಮತ್ತು ಡ್ರೋನ್ ದಾಳಿ ನಡೆಸಿದ್ದು, ಬಹ್ರೇನ್, ಕುವೈತ್ ಮತ್ತು ಕತಾರ್ ನಲ್ಲಿ ಅಮೆರಿಕ ಮಿಲಿಟರಿ ಕಟ್ಟಡಗಳ ಮೇಲೆ ದಾಳಿ ನಡೆಸಿದೆ. ಅಬುಧಾಬಿಯಲ್ಲಿ ಇರಾನಿನ ಕ್ಷಿಪಣಿ ದಾಳಿಯಿಂದ ಬಿದ್ದಅವಶೇಷಗಳಿಂದ ಒಬ್ಬ ವ್ಯಕ್ತಿ ಸಾವನ್ನಪ್ಪಿರುವುದಾಗಿ ತಿಳಿಸಿದ್ದಾರೆ.

### ಮಕ್ಕಳು ಸೇರಿ 40ಕ್ಕೂ ಹೆಚ್ಚು ಸಾವು

ಇರಾನ್ ರಾಜಧಾನಿ ಟೆಹರಾನ್‌ನ ಪೂರ್ವ ಭಾಗದಲ್ಲಿರುವ ಶಾಲೆಯೊಂದರ ಮೇಲೆ ನಡೆದ ದಾಳಿಯಲ್ಲಿ ಕನಿಷ್ಠ ಇಬ್ಬರು ವಿದ್ಯಾರ್ಥಿಗಳು ಸಾವನ್ನಪ್ಪಿದ್ದಾರೆ ಎಂದು ಇರಾನ್ ಸುದ್ದಿ ಸಂಸ್ಥೆ ವರದಿ ಮಾಡಿದೆ. ಇದಕ್ಕೂ ಮೊದಲು, ಮಿನಾಬ್ ನಗರದಲ್ಲಿರುವ ಬಾಲ ಕಿಯರ ಶಾಲೆಯ ಮೇಲೆ ಇಸ್ರೇಲ್ ನಡೆಸಿದ ದಾಳಿಯಲ್ಲಿ ಮಕ್ಕಳು ಸೇರಿ ದಂತೆ 40 ಮಂದಿ ಮೃತಪಟ್ಟಿದ್ದಾರೆ. ಇರಾನ್ ಮೇಲಿನ ದಾಳಿಯನ್ನು ಬಲವಾಗಿ ಖಂಡಿಸಿರುವ ರಷ್ಯಾ, ಅಂತರರಾಷ್ಟ್ರೀಯ ಕಾನೂನುಗಳನ್ನು ಅಮೆರಿಕ ಮತ್ತು ಇಸ್ರೇಲ್ ಉಲ್ಲಂಘಿಸಿವೆ ಎಂದು ಹೇಳಿದೆ.

# ನೀವೇ ಮುಖ್ಯಮಂತ್ರಿ ಆಗಿ; ಇಲ್ಲವೇ ದಲಿತ ಸಿಎಂ ಮಾಡಿ
### ಎಐಸಿಸಿ ಅಧ್ಯಕ್ಷ ಖರ್ಗೆಗೆ ಪರಿಶಿಷ್ಟ ನಾಯಕರ ಒತ್ತಡ

**ಬೆಂಗಳೂರು:** ದಲಿತ ನಾಯಕರಿಗೆ ರಾಜ್ಯದ ಮುಖ್ಯಮಂತ್ರಿ ಸ್ಥಾನ ನೀಡಬೇಕು ಎಂಬ ಕೂಗು ಎದ್ದಿರುವ ನಡುವೆಯೇ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರಿಗೆ ನೀವೇ ಮುಖ್ಯಮಂತ್ರಿ ಆಗಬೇಕು ಎಂದು ಕೆಲವು ಪರಿಶಿಷ್ಟ ಸಮುದಾಯದ ಶಾಸಕರು ಮತ್ತು ಸಚಿವರು ಒತ್ತಾಯಿಸಿದ್ದಾರೆ. ನೀವು ಸಿಎಂ ಆಗಿ, ಇಲ್ಲವೇ ದಲಿತ ಸಮುದಾಯದ ಹಿರಿಯ ಸಚಿವರೊಬ್ಬರಿಗೆ ಸಿಎಂ ಸ್ಥಾನ ನೀಡಿ ಎಂದು ಒತ್ತಡ ಹಾಕಿದ್ದಾರೆ ಎನ್ನಲಾಗಿದೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಉತ್ತರಾಧಿಕಾರಿಯಾಗಿ ಡಿ.ಕೆ ಶಿವಕುಮಾರ್ ಅವರೊಬ್ಬರೇ ಅರ್ಹರಾದ ಏಕೈಕ ನಾಯಕ ಎಂದು ಬಿಂಬಿಸಲು ಡಿಸಿಎಂ ಬೆಂಬಲಿಗರು ಮುಂದಾಗಿರುವ ಹಿನ್ನೆಲೆಯಲ್ಲಿ ಹಿರಿಯ ದಲಿತ ನಾಯಕರ ಒಂದು ಗುಂಪು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರನ್ನು ಸಿಎಂ ಆಗುವಂತೆ ಮನವೊಲಿಸಲು ಮುಂದಾಗಿದೆ. ಆದರೆ, ಇದಕ್ಕೆ ಖರ್ಗೆ ಅವರು ಯಾವುದೇ ಭರವಸೆ ನೀಡಲಿಲ್ಲ ಎನ್ನಲಾಗಿದೆ.

ಗೃಹ ಸಚಿವ ಡಾ.ಜಿ.ಪರಮೇಶ್ವರ ಮತ್ತು ಆಹಾರ ಮತ್ತು ನಾಗರಿಕ ಸರಬರಾಜು ಸಚಿವ ಕೆ.ಎಚ್ ಮುನಿಯಪ್ಪ ಅವರು ಖರ್ಗೆ ಅವರನ್ನು ಭೇಟಿ ಮಾಡಿ ಮುಖ್ಯಮಂತ್ರಿಯಾಗಿ ಅಧಿಕಾರ ವಹಿಸಿಕೊಳ್ಳುವಂತೆ ಒತ್ತಾಯಿಸಿದರು. ಆದರೆ ಈ ನಿರ್ಧಾ



ರವನ್ನು ಕಾಂಗ್ರೆಸ್ ಸಂಸದೀಯ ಪಕ್ಷದ (ಸಿಪಿಪಿ) ಮುಖ್ಯಸ್ಥೆ ಸೋನಿಯಾ ಗಾಂಧಿ ಮತ್ತು ಲೋಕಸಭೆ ವಿಪಕ್ಷ ನಾಯಕ ರಾಹುಲ್ ಗಾಂಧಿ ತೆಗೆದುಕೊಳ್ಳಬೇಕಾಗಿದೆ. ಸಿಎಂ ಆಗುವುದು ನನ್ನ ಕೈಯಲ್ಲಿ ಇಲ್ಲ ಎಂದಿದ್ದಾರೆಂದು ತಿಳಿದುಬಂದಿದೆ.

ಖರ್ಗೆ ಅವರ ರಾಜ್ಯಸಭೆ ಸದಸ್ಯತ್ವದ ಅವಧಿ ಜೂನ್‌ನಲ್ಲಿ ಕೊನೆಗೊಳ್ಳುತ್ತದೆ. ಪಕ್ಷವು ಅವರನ್ನು ಮತ್ತೆ ನಾಮನಿರ್ದೇಶನ ಮಾಡಿದರೆ ರಾಷ್ಟ್ರ ರಾಜಕೀಯದಲ್ಲಿ ಮುಂದುವರಿಯುತ್ತಾರೆ. ಆದರೆ ಅವರು ಎಐಸಿಸಿ ಅಧ್ಯಕ್ಷರಾಗಿ ಉಳಿಯುತ್ತಾರೆಯೇ ಎಂದು ಕಾದು ನೋಡಬೇಕಿದೆ ಎಂದು ಕಾಂಗ್ರೆಸ್ ಹಿರಿಯ ನಾಯಕರೊಬ್ಬರು ತಿಳಿಸಿದ್ದಾರೆ.

ಈ ಹಿಂದೆ ದಲಿತ ನಾಯಕ ದಾಮೋದರಂ ಸಂಜೀವಯ್ಯ ಅವರು ಎಐಸಿಸಿ ಅಧ್ಯಕ್ಷರಾಗಿ ಇದ್ದುಕೊಂಡು (1969–62) ಪುಟ 2ಕ್ಕೆ

## ಮಾ.3ರಂದು ರಕ್ತಚಂದ್ರಗ್ರಹಣ

**ಬೆಂಗಳೂರು:** ಮಾ.3ರಂದು ಕೇತುಗ್ರಸ್ತ ರಕ್ತ ಚಂದ್ರಗ್ರಹಣ ಸಂಭವಿಸಲಿದೆ. ಹೋಳಿ ಹಬ್ಬದಂದೇ ಬಾನಂಗಳದಲ್ಲಿ ಕೆಂಬಣ್ಣದ ಚಂದಿರನ ವಿಸ್ಮಯ ಗೋಚರವಾಗಲಿದೆ. ಪಾಲ್ಗುಣ ಮಾಸದ ಹುಣ್ಣಿಮೆಯ ದಿನವೇ ಗ್ರಹಣ ಸಂಭವಿಸಲಿದೆ. ಭಾರತದಲ್ಲಿಯೂ ಗೋಚರವಾಗಲಿದೆ. ಭಾರತದಲ್ಲಿ ಮಾ.3ರಂದು ಮಧ್ಯಾಹ್ನ 3:20ಕ್ಕೆ ಗ್ರಹಣ ಆರಂಭವಾಗಿ ಸಂಜೆ 6:47ಕ್ಕೆ ಮುಕ್ತಾಯವಾಗಲಿದ್ದು. ಕರ್ನಾಟಕದಲ್ಲಿ ಒಟ್ಟು 25 ನಿಮಿಷಗಳ ಕಾಲ ಗ್ರಹಣ ಗೋಚರವಾಗಲಿದೆ.

## ರಾಜಕೀಯ ವೈರಾಗ್ಯ: ಎಚ್‌ಡಿಕೆ

**ಶ್ರೀರಂಗಪಟ್ಟಣ:** ರಾಜ್ಯದ ರಾಜಕೀಯ ಬೆಳವಣಿಗೆ ನೋಡಿ ನನಗೆ ವೈರಾಗ್ಯ ಆವರಿಸುತ್ತಿದೆ ಎಂದು ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ವ್ಯಂಗ್ಯವಾಡಿದರು.

ತಾಲ್ಲೂಕಿನ ಪಾಲಹಳ್ಳಿ ಗ್ರಾಮದಲ್ಲಿ ಜೀರ್ಣೋದ್ಧಾರ ಮಾಡಿರುವ ತಿರುಮಲ ವೆಂಕಟರಮಣ ಸ್ವಾಮಿ ದೇವಾಲಯ ಉದ್ಘಾಟನಾ ಸಮಾರಂಭದಲ್ಲಿ ಶನಿವಾರ ಮಾತನಾಡಿದರು. ರಾಜ್ಯದ ಜನರು ಐದು ವರ್ಷ ಸರ್ಕಾರ ನಡೆಸಲು ಅವಕಾಶ ನೀಡಿದರೆ ಕರ್ನಾಟಕವನ್ನು ಪುಟ 2ಕ್ಕೆ

### ಶೇ.56 ಮೀಸಲಾತಿ ಅನ್ವಯ ನೇಮಕಾತಿ ಮಾಡಲಿ: ವಿ.ಎಸ್.ಉಗ್ರಪ್ಪ ಒತ್ತಾಯ
# ಪರಿಶಿಷ್ಟರಿಗೆ ಕೇಂದ್ರ, ರಾಜ್ಯ ಸರ್ಕಾರದಿಂದ ಅನ್ಯಾಯ

**ಮೈಸೂರು:** ಪರಿಶಿಷ್ಟ ಸಮುದಾಯಗಳ ಜನಸಂಖ್ಯೆಗೆ ಅನುಗುಣವಾಗಿ ಮೀಸಲಾತಿ ಹೆಚ್ಚಳ ಮಾಡದೆ ಕೇಂದ್ರ ಮತ್ತು ರಾಜ್ಯ ಸರ್ಕಾರ ಎಸ್ಸಿ, ಎಸ್ಟಿ ಸಮುದಾಯಗಳಿಗೆ ಅನ್ಯಾಯ ಮಾಡುತ್ತಿವೆ. ಇದು ಹೀಗೆ ಮುಂದುವರೆದರೆ ರಾಜ್ಯಾದ್ಯಂತ ಹೋರಾಟ ಮಾಡುವುದು ಅನಿವಾರ್ಯ ಆಗಲಿದೆ ಎಂದು ಮಾಜಿ ಸಂಸದ ವಿ.ಎಸ್.ಉಗ್ರಪ್ಪ ಎಚ್ಚರಿಕೆ ನೀಡಿದರು.

ನಗರದಲ್ಲಿ ಶನಿವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಜನಸಂಖ್ಯೆಗೆ ಅನುಗುಣವಾಗಿ ಎಸ್ಸಿ, ಎಸ್ಟಿಗಳಿಗೆ ಮೀಸಲಾತಿ ನೀಡಬೇಕು ಎಂದು ಬಾಬಾ ಸಾಹೇಬ್ ಅಂಬೇಡ್ಕರ್ ಹೇಳಿದ್ದರೂ ರಾಜಕೀಯ ಪಕ್ಷಗಳು ಈ ಎರಡೂ ಸಮುದಾಯಗಳಿಗೆ ನ್ಯಾಯ ದೊರಕಿಸಿಕೊಡದೆ ಓಟ್ ಬ್ಯಾಂಕ್ ಆಗಿ ಬಳಸಿಕೊಳ್ಳುತ್ತಿವೆ ಎಂದು ಸ್ವಪಕ್ಷದ ವಿರುದ್ಧವೂ ಹರಿಹಾಯ್ದರು.

ರಾಜ್ಯ ಸರ್ಕಾರ ಶೇ.56 ಮೀಸಲಾತಿ ಪ್ರಕಾರ ಹೊಸ ಹುದ್ದೆಗಳಿಗೆ ನೇಮಕಾತಿ ಮಾಡಬೇಕು. ಅದಕ್ಕೆ ಬೇಕಿರುವ ಕಾನೂನಾತ್ಮಕ ಕ್ರಮಗಳನ್ನು ಮೊದಲು ಕೈಗೊಳ್ಳಬೇಕು. ಅದನ್ನು ಬಿಟ್ಟು 2022ರ ಮೀಸಲಾತಿಯಂತೆ ಹುದ್ದೆಗಳಿಗೆ ನೇಮಕ ಮಾಡಿದರೆ ಅನ್ಯಾಯವಾಗಲಿದೆ ಎಂದು ಟೀಕಿಸಿದರು.

ರಾಜ್ಯದಲ್ಲಿ 2.74 ಲಕ್ಷ ಹುದ್ದೆಗಳು ಖಾಲಿ ಇವೆ. ಪುಟ 2ಕ್ಕೆ



> ಅಧಿಕಾರ ಬೇಕಾದರೆ ದಲಿತರು ಎನ್ನುವ ಸಚಿವ ಡಾ.ಎಚ್.ಸಿ.ಮಹದೇವಪ್ಪ ಅವರು ಎಸ್ಸಿ, ಎಸ್ಟಿ ಗಳಿಗೆ ಆಗುತ್ತಿರುವ ಅನ್ಯಾಯದ ವಿರುದ್ಧ ಯಾಕೆ ಧ್ವನಿ ಎತ್ತುತ್ತಿಲ್ಲ. ಈ ಸಮುದಾಯದ ಜನ ಉಳಿಯಲಿಲ್ಲ ಎಂದರೆ ಸಾಮಾಜಿಕ ನ್ಯಾಯ ಯಕ್ಷ ಪ್ರಶ್ನೆ ಆಗುತ್ತದೆ. ಮಿಸ್ಟರ್ ಮಹದೇವಪ್ಪ ಈ ಬಗ್ಗೆ ನೀವು ಏಕೆ ಮಾತನಾಡುತ್ತಿಲ್ಲ.
>
> **ವಿ.ಎಸ್.ಉಗ್ರಪ್ಪ** ಮಾಜಿ ಸಂಸದ.

### ಪ್ರಧಾನಿ ಬಳಿಗೆ ನಿಯೋಗಕ್ಕೆ ಆಗ್ರಹ

**ಮೈಸೂರು:** ಸಾಮಾಜಿಕ ನ್ಯಾಯದ ಪರ ಎಂದು ಹೇಳುವ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ತಕ್ಷಣ ಸರ್ವ ಪಕ್ಷ ಸಭೆ ಕರೆದು ಪ್ರಧಾನಮಂತ್ರಿ ಅವರ ಬಳಿಗೆ ನಿಯೋಗ ಕರೆದೊಯ್ಯಬೇಕು. ಶೇ.56 ಮೀಸಲಾತಿಯನ್ನು ಒಂಬತ್ತನೇ ಶೆಡ್ಯೂಲ್ ಗೆ ಸೇರಿಸುವ ಪ್ರಯತ್ನ ಮಾಡಬೇಕು ಎಂದು ಮಾಜಿ ಸಂಸದ ವಿ.ಎಸ್.ಉಗ್ರಪ್ಪ ಒತ್ತಾಯಿಸಿದರು.

ಬಸವರಾಜ ಬೊಮ್ಮಾಯಿ ಮುಖ್ಯಮಂತ್ರಿ ಆಗಿದ್ದಾಗ 2022ರಲ್ಲಿ ಎಸ್ಟಿ ಸಮುದಾಯಕ್ಕೆ ಶೇ.4 ಮತ್ತು ಎಸ್ಸಿ ಸಮುದಾಯಕ್ಕೆ ಶೇ.2 ಮೀಸಲಾತಿ ಹೆಚ್ಚಳ ಮಾಡಿ ಶೇ.50ರಷ್ಟು ಇದ್ದ ಮೀಸಲಾತಿಯನ್ನು ಒಟ್ಟಾರೆ ಶೇ.56 ಕ್ಕೆ ಹೆಚ್ಚಳ ಮಾಡಿದರೂ ಸಾಂವಿಧಾನಿಕ ಸಿಂಧುತ್ವ ಕೊಡಿಸುವ ಯಾವ ಮಾರ್ಗಗಳನ್ನು ಅನುಸರಿಸಲಿಲ್ಲ ಎಂದು ಕಿಡಿಕಾರಿದರು.

ಕೇಂದ್ರ ಮತ್ತು ರಾಜ್ಯದಲ್ಲಿ ಬಿಜೆಪಿ ಸರ್ಕಾರವೇ ಇದ್ದರೂ ಶೇ.56 ಮೀಸಲಾತಿಯನ್ನು ಒಂಬತ್ತನೇ ಶೆಡ್ಯೂಲ್ ಗೆ ಸೇರಿಸಲಿಲ್ಲ. ಶೇ.56ರ ಮೀಸಲಾತಿಗೆ ಸಾಂವಿಧಾನಿಕ

## ಪಿಯು ಪರೀಕ್ಷೆ: ವಿದ್ಯಾರ್ಥಿನಿ ಹೃದಯಾಘಾತದಿಂದ ಸಾವು

**ಚಿಕ್ಕೋಡಿ:** ದ್ವಿತೀಯ ಪಿಯುಸಿ ಪರೀಕ್ಷೆಗೆ ಹೊರಟಿದ್ದ ವಿದ್ಯಾರ್ಥಿನಿ ಹೃದಯಾಘಾತದಿಂದ ಸಾವನ್ನಪ್ಪಿರುವ ಘಟನೆ ಶನಿವಾರ ಚಿಕ್ಕೋಡಿಯ ಬಂಬಲವಾಡ ಗ್ರಾಮದಲ್ಲಿ ನಡೆದಿದೆ. ಭೂಮಿಕಾ ಮಾಳಂಗಿ (17) ಮೃತಪಟ್ಟ ದುರ್ದೈವಿ.

ಭವಿಷ್ಯದ ನೂರಾರು ಕನಸು ಕಟ್ಟಿಕೊಂಡು ಪರೀಕ್ಷೆಗೆ ಹೊರಟಿದ್ದ ವಿದ್ಯಾರ್ಥಿನಿ ಪುಟ 2ಕ್ಕೆ

## ಪಿಯು ಪರೀಕ್ಷೆ ಮೊದಲ ದಿನ ಸುಸೂತ್ರ

**ಮೈಸೂರು:** ಜಿಲ್ಲೆಯಲ್ಲಿ ಶನಿವಾರ ದ್ವಿತೀಯ ಪಿಯುಸಿ ಪರೀಕ್ಷೆ ಸುಸೂತ್ರವಾಗಿ ನಡೆಯಿತು. 515 ಮಂದಿ ಗೈರಾಗಿ ಬರೋಬ್ಬರಿ ಮೊದಲ ಕನ್ನಡ ಪರೀಕ್ಷೆಯಲ್ಲಿ 28350 ಪರೀಕ್ಷೆ ಬರೆದರು. ಶೇ.98.21 ಮಂದಿ ಪರೀಕ್ಷೆ ಎದುರಿಸಿದರು. ಇನ್ನೂ ಜಿಲ್ಲೆಯಲ್ಲಿ ಇಬ್ಬರೇ ವಿದ್ಯಾರ್ಥಿಗಳು ಅರೇಬಿಕ್ ಭಾಷೆಯಲ್ಲಿ ಬರೆದು ಗಮನ ಸೆಳೆದರು.

ಜಿಲ್ಲೆಯಲ್ಲಿ ಒಟ್ಟು 51 ಪರೀಕ್ಷಾ ಕೇಂದ್ರಗಳಲ್ಲಿ ಮೈಸೂರು ನಗರ 28, ಪುಟ 2ಕ್ಕೆ

## ಪುಂಡಾನೆ ಸೆರೆ ಕಾರ್ಯಾಚರಣೆ: 6 ಸಾಕಾನೆಗಳ ಆಗಮನ



**ರಾಮನಗರ:** ಚನ್ನಪಟ್ಟಣ ಭಾಗದಲ್ಲಿ ಕಾಡಾನೆ ಉಪಟಳ ಹೆಚ್ಚಳದ ಹಿನ್ನೆಲೆ ಎರಡು ಕಾಡಾನೆಗಳ ಸೆರೆಗೆ ಸರ್ಕಾರ ಅನುಮತಿ ನೀಡಿದೆ. ಚನ್ನಪಟ್ಟಣದಲ್ಲಿ ಶನಿವಾರ ಪುಂಡಾನೆ ಸೆರೆ ಕಾರ್ಯಾಚರಣೆ ಆರಂಭಿಸಲಾಗಿದೆ. 6 ಸಾಕಾನೆಗಳು ಕಾರ್ಯಾಚರಣೆಗೆ ಆಗಮಿಸಿವೆ.

ಚನ್ನಪಟ್ಟಣದ ಬಿ.ವಿ.ಹಳ್ಳಿ ಗ್ರಾಮದ ಬಳಿಯಿಂದ ಕಾರ್ಯಾಚರಣೆ ಆರಂಭಿಸಲಾಗಿದೆ. 6 ಸಾಕಾನೆಗಳಿಂದ ಪುಂಡಾನೆ ಸೆರೆ ಆಪರೇಷನ್ ನಡೆಯಲಿದೆ. ಸುಗ್ರೀವ, ಕಂಜನ್, ಧನಂಜಯ, ಹರ್ಷ, ಈಶ್ವರ, ಅಯ್ಯಪ್ಪ ಆನೆಗಳಿಂದ ಪುಂಡಾನೆ ಸೆರೆಗೆ ಅರಣ್ಯ ಇಲಾಖೆ ಸಿದ್ಧತೆ ಆರಂಭಿಸಿದೆ. ಸಾಕಾನೆಗಳಿಗೆ ಪೂಜೆ ಸಲ್ಲಿಸಿ ಕಾರ್ಯಾಚರಣೆ ಆರಂಭಿಸಲಾಯಿತು. ಡಿಸಿಎಫ್ ರಾಮಕೃಷ್ಣಪ್ಪ ನೇತೃತ್ವ ವಹಿಸಿದ್ದಾರೆ. ಪುಟ 2ಕ್ಕೆ

## ಗ್ಯಾರಂಟಿ: ಕೊಟ್ಟಮಾತೇ ಮುಖ್ಯ
### ಮಾತು ಕೊಡೋದಕ್ಕಿಂತ ಮುನ್ನ ಯೋಚಿಸಬೇಕಿತ್ತು:

**ಬೆಂಗಳೂರು:** ಸರ್ಕಾರಕ್ಕೆ ಹೊರೆಯಾದರೂ ಕೊಟ್ಟ ಮಾತಿನಂತೆ ಗ್ಯಾರಂಟಿಗಳನ್ನು ನೀಡಬೇಕು. ಇಲ್ಲದಿದ್ದರೆ ಗ್ಯಾರಂಟಿ ಬಗ್ಗೆ ಹೇಳುವ



ಮುಂಚಿತವಾಗಿ, ಮಾತು ಕೊಡೋದಕ್ಕಿಂತ ಮುಂಚಿತವಾಗಿ ಚಿಂತನೆ ಮಾಡಬೇಕಾಗಿತ್ತು ಎಂದು ಮಾಜಿ ಸಂಸದ ಡಿ.ಕೆ.ಸುರೇಶ್ ಹೇಳಿದರು.


ಡಿಸಿಎಂ ಡಿಕೆ ಶಿವಕುಮಾರ್ ಗ್ಯಾರಂಟಿಗಳಿಂದ ಸರ್ಕಾರಕ್ಕೆ ಹೊರೆ ಆಗಿದೆ ಎಂದು ಹೇಳಿದ್ದರು. ಈ ವಿಚಾರಕ್ಕೆ ಪ್ರತಿಕ್ರಿಯಿಸಿದ ಅವರು, ಗ್ಯಾರಂಟಿ ನಮ್ಮ ವಾಗ್ದಾನ. ಕರ್ನಾಟಕದ ಜನರಿಗೆ ಕೊಟ್ಟ ವಾಗ್ದಾನ, ಆ ವಾಗ್ದಾನದಂತೆ ನಡೆಯಬೇಕು ಎಂದರು.

ಯಾರು ಚುನಾವಣೆ ಎದುರಿಸಿದ್ದಾರೆಯೋ ಅವರೆಲ್ಲ ಜನರಿಗೆ ಭರವಸೆ ಕೊಟ್ಟಿದ್ದಾರೆ. ಹೊರ ಆದರೂ ಆಗಲಿ, ಏನಾದರೂ ಆಗಲಿ ಕೊಟ್ಟ ಮಾತನ್ನ ಈಡೇರಿಸಲೇಬೇಕು. ಪುಟ 2ಕ್ಕೆ

## ಅಲ್ಪಾಯುಷಿ ಎಂದಿದ್ದ ಜ್ಯೋತಿಷಿ ಮಾತಿಗೆ ಹೆದರಿ ಯುವತಿ ಆತ್ಮಹತ್ಯೆ

**ಬೆಂಗಳೂರು:** ಅಲ್ಪಾಯುಷಿ ಎಂದು ಭವಿಷ್ಯ ಹೇಳಿದ ಜ್ಯೋತಿಷಿ ಮಾತಿಗೆ ಹೆದರಿ ಯುವತಿಯೊಬ್ಬಳು ನೇಣುಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ನಗರದ ಬಾಗಲಗುಂಟೆಯ ಎಂಇಐ ಲೇಔಟ್‌ನಲ್ಲಿ ನಡೆದಿದೆ. ವಿದ್ಯಾ ಜ್ಯೋತಿ (29) ನೇಣುಬಿಗಿದುಕೊಂಡು ಆತ್ಮಹತ್ಯೆ ಶರಣಾಗಿರುವ ಯುವತಿ.

ನಗರದ ಖಾಸಗಿ ಕಂಪನಿಯೊಂದರಲ್ಲಿ ಮಾಡುತ್ತಿದ್ದ ಆಕೆ ಸದ್ಯ ವರ್ಕ್ ಫ್ರಂ ಹೋಮ್ ಕೆಲಸದಲ್ಲಿದ್ದರು.



ವಿದ್ಯಾ ಜ್ಯೋತಿಗೆ ಜ್ಯೋತಿಷಿಯೊಬ್ಬರು ನೀನು ಅಲ್ಪಾಯುಷಿ ಎಂದು ಭವಿಷ್ಯ ನುಡಿದಿದ್ದರು. ಹೀಗಾಗಿ ಮನೆಯವರು, ಅಪ್ಪ, ಅಮ್ಮ ಮಗಳ ಆಸೆಯಂತೆ ಎಲ್ಲವನ್ನೂ ಮಾಡಿದ್ದರು. ಜೊತೆಗೆ ಕೊಡಗು ಮೂಲದ ಯುವಕನನ್ನು ಪ್ರೀತಿಸುತ್ತಿದ್ದ ವಿದ್ಯಾ ಇಷ್ಟದಂತೆ ಎರಡೂ ಮನೆಯವರು ಒಪ್ಪಿಗೆ ಸೂಚಿಸಿ ಮದುವೆ ಮಾಡಿಕೊಡಲು ಒಪ್ಪಿಕೊಂಡಿದ್ದರು.

ಅಲ್ಲದೆ, ಜ್ಯೋತಿಷಿ 9 ದಿನ ಪೂಜೆ ಮಾಡಲು ಸೂಚಿಸಿದ್ದರು. ಅದರಂತೆ ಒಂಬತ್ತನೇ ಪುಟ 2ಕ್ಕೆ

# ಸರ್ಕಾರಕ್ಕೆ ಸಾವಿರ ದಿನ ಸಾವಿರ ಗೊಂದಲ
### ಹಗರಣ, ಕುರ್ಚಿ ಕಾಳಗದ ನಡುವೆ ಅಭಿವೃದ್ಧಿ ಶೂನ್ಯ: ಆರ್.ಅಶೋಕ್ ಕಿಡಿ

**ಮಂಡ್ಯ:** ರಾಜ್ಯ ಕಾಂಗ್ರೆಸ್ ಸರ್ಕಾರ ಸಾವಿರ ಗೊಂದಲಗಳ ಸರಮಾಲೆ ನಡುವೆ ಸಾವಿರ ದಿನಗಳನ್ನು ಪೂರೈಸಿದೆ, ಹಲವು ಹಗರಣ, ಕುರ್ಚಿ ಕಾಳಗ, ಆಡಳಿತ ಪಕ್ಷದ ಶಾಸಕರ ಬ್ರೇಕ್‌ಫಾಸ್ಟ್, ಡಿನ್ನರ್ ಸಭೆಯಲ್ಲೇ ಸಾವಿರ ದಿನಗಳನ್ನು ಕಳೆದಿದೆ. ಅಭಿವೃದ್ಧಿ ಕೆಲಸದಲ್ಲಿ ಹಿಂದೆ ಉಳಿದಿದೆ ಎಂದು ವಿಪಕ್ಷ ನಾಯಕ ಆರ್.ಅಶೋಕ್ ಆರೋಪಿಸಿದರು.

ನಗರದಲ್ಲಿ ಶನಿವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಕೇವಲ ಎರಡು ಮುಕ್ಕಾಲು ವರ್ಷಗಳ ಅವಧಿಯಲ್ಲಿಯೇ ಸಿದ್ದರಾಮಯ್ಯ ಅವರು 3.15 ಲಕ್ಷ ಕೋಟಿ ಸಾಲ ಮಾಡಿದ್ದಾರೆ. ಇದೇ ರೀತಿ ಐದು ವರ್ಷಗಳಲ್ಲಿ 6 ಲಕ್ಷ ಕೋಟಿ ಸಾಲ ಮಾಡುವುದರ ಜತೆಗೆ ಪ್ರತಿ ಸಾರ್ವಜನಿಕರ ತಲೆ ಮೇಲೆ ತಲಾ 1 ಲಕ್ಷ ಸಾಲದ ಹೊರೆ ಹೊರೆಸುತ್ತಾರೆ ಎಂದು ಕಿಡಿಕಾರಿದರು.

ಮುಖ್ಯಮಂತ್ರಿ ಸಿದ್ದರಾಮಯ್ಯ ಕುರ್ಚಿ ಬಿಟ್ಟುಕೊಡುವ ರಾಮಯ್ಯ ಅಲ್ಲ. ಎರಡೂವರೆ ವರ್ಷ ಒಪ್ಪಂದ ಆಗಿದೆ ಎಂದು ಡಿಸಿಎಂ ಡಿಕೆಶಿ ಹೇಳುತ್ತಾರೆ. ಆದರೆ ಈ ಬಗ್ಗೆ ಸಿದ್ದರಾಮಯ್ಯ ಮಾತ್ರ ಬಾಯಿ ಬಿಡಲ್ಲ. ರಾಜ್ಯ ಸರ್ಕಾರ ಪುಟ 2ಕ್ಕೆ



### ಕಾಂಗ್ರೆಸ್ ವಿರುದ್ಧ ದೋಸ್ತಿ ಹೋರಾಟ

ಬಜೆಟ್ ಅಧಿವೇಶನದಲ್ಲಿ ಕಾಂಗ್ರೆಸ್ ಮಾಡಿರುವ ತಪ್ಪುಗಳ ಬಗ್ಗೆ ಚರ್ಚೆಯಾಗಲಿದೆ. ಬಿಜೆಪಿ– ಜೆಡಿಎಸ್ ಜಂಟಿಯಾಗಿ ಹೋರಾಟ ಮಾಡಲಿದೆ. ವಿದ್ಯಾರ್ಥಿಗಳ ಹೋರಾಟಕ್ಕೆ ಹೆದರಿ 56 ಸಾವಿರ ನೇಮಕಾತಿ ಮಾಡಲು ತೀರ್ಮಾನಿಸಲಾಗಿದೆ. ಆದರೆ ಬಿಜೆಪಿಯಿಂದ 2 ಲಕ್ಷ ಹುದ್ದೆಗಳ ನೇಮಕಾತಿಗೆ ಆಗ್ರಹಿಸಲಾಗಿತ್ತು ಪುಟ 2ಕ್ಕೆ

### ಸಚಿವರ ಕುರ್ಚಿಯೂ ಅಲುಗಾಟ

ಮುಖ್ಯಮಂತ್ರಿ ಕುರ್ಚಿ ಸೇರಿದಂತೆ ಮಂತ್ರಿಗಳ ಸೀಟು ಸಹ ಅಲುಗಾಡುತ್ತಿದೆ. ಈಗ ಐದು ರಾಜ್ಯಗಳ ಚುನಾವಣೆ ನಡೆಯುತ್ತಿದೆಯಲ್ಲ, ಅದಕ್ಕೆ ಹಣ ಒದಗಿಸೋಕೆ ಡಿ.ಕೆ.ಶಿವಕುಮಾರ್ ಮುಂದಾಗಿದ್ದಾರೆ. ಅವರು ಇದರಲ್ಲಿ ಎಕ್ಸ್‌ಪರ್ಟ್ ಇದ್ದಾರೆ. ಸಚಿವ ಸಂಪುಟ ಪುನರ್ ರಚನೆಯಾದರೆ, ಮಂತ್ರಿ ಸ್ಥಾನಕ್ಕೆ ರೇಟ್ ಫಿಕ್ಸ್ ಆಗುತ್ತದೆ. ತಮಿಳುನಾಡು, ಪಶ್ಚಿಮ ಬಂಗಾಳ, ಅಸ್ಸಾಂ, ಕೇರಳಕ್ಕೆ ಹಣ ಕಳುಹಿಸಲು ಜಾರ್ಜ್, ದಿನೇಶ್ ಗುಂಡೂರಾವ್ ಅವರನ್ನೇ ಉಸ್ತುವಾರಿ ಹಾಕಲಾಗಿದೆ. ಏಕೆಂದರೆ ಹಣ ಪುಟ 2ಕ್ಕೆ


### ಔಷಧ ಸಿಗದೆ ಪರದಾಟ

ಸರ್ಕಾರಿ ಆಸ್ಪತ್ರೆಗಳಲ್ಲಿ ಔಷಧ ಸಿಗುತ್ತಿಲ್ಲ. ಸರ್ಕಾರ ಟೆಂಡರ್ ಕರೆಯುತ್ತೇವೆ ಎಂದು ಹೇಳುತ್ತಿದೆ. ಆದರೆ ಕಾರ್ಯಗತವಾಗಿಲ್ಲ. ಸುಮಾರು 150 ಔಷಗಳು ಮಾತ್ರ ಸಿಗುತ್ತಿವೆ. ಯಾವ ಆಸ್ಪತ್ರೆಗೆ ಹೋದರೂ ಖಾಸಗಿ ಮೆಡಿಕಲ್‌ಗಳಿಗೆ ಚೀಟಿ ಬರೆದು ಕೊಡಲಾಗುತ್ತಿದೆ ಎಂದು ವಿಪಕ್ಷ ನಾಯಕ ಆರ್.ಅಶೋಕ್ ಕಿಡಿಕಾರಿದರು. ಮಾ.12ರಿಂದ ವೈದ್ಯರು ಪ್ರತಿಭಟನೆ ಮಾಡುವುದಾಗಿ ಎಚ್ಚರಿಕೆ ನೀಡಿದ್ದಾರೆ. ಇದೇನಾದರೂ ಆದರೆ, ಶಸ್ತ್ರಚಿಕಿತ್ಸೆಗಳನ್ನು ಮುಂದೂಡಬೇಕಾಗುತ್ತದೆ. ರೋಗಿಗಳು ಪರದಾಡುತ್ತಾರೆ. ಔಷಧ ಜೊತೆಗೆ ವೈದ್ಯರು ಇಲ್ಲದಿರುವ ಪರಿಸ್ಥಿತಿ ಎದುರಿಸಬೇಕಾಗುತ್ತದೆ. ಆರೋಗ್ಯ ಇಲಾಖೆಯು ಅನಾರೋಗ್ಯ ಇಲಾಖೆಯಾಗಿದೆ ಎಂದು ದೂರಿದರು.

## ವಾಯವ್ಯ ಸಾರಿಗೆಗೆ ರಾಣಿ ಚನ್ನಮ್ಮ ಹೆಸರು
### ಸಚಿವ ಸಂಪುಟ ಸಭೆಗೆ ಶಿಫಾರಸು: ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಘೋಷಣೆ

**ಬೆಳಗಾವಿ:** ವಾಯವ್ಯ ಕರ್ನಾಟಕ ರಸ್ತೆ ಸಾರಿಗೆ ನಿಗಮಕ್ಕೆ (ಎನ್‌ಡಬ್ಲ್ಯುಕೆಆರ್‌ಟಿಸಿ) ಕಿತ್ತೂರು ರಾಣಿ ಚನ್ನಮ್ಮ ರಸ್ತೆ ಸಾರಿಗೆ ನಿಗಮ ಎಂದು ಮರುನಾಮಕರಣ ಮಾಡಲಾಗುವುದು ಎಂದು ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಹೇಳಿದರು.

ನಗರದ ಕೇಂದ್ರೀಯ ಬಸ್ ನಿಲ್ದಾಣದಲ್ಲಿ ಶನಿವಾರ ನಡೆದ ಎನ್‌ಡಬ್ಲ್ಯುಕೆಆರ್‌ಟಿಸಿ 28ನೇ ಸಂಸ್ಥಾಪನಾ ದಿನಾಚರಣೆ, ಹೊಸ ಬಸ್‌ಗಳ ಲೋಕಾರ್ಪಣೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು. ಎನ್‌ಡಬ್ಲ್ಯು



ಕೆಆರ್‌ಟಿಸಿಗೆ ಕಿತ್ತೂರು ಚನ್ನಮ್ಮನ ಹೆಸರು ಮರುನಾಮಕರಣ ಮಾಡುವ ಸಂಬಂಧ ಪ್ರಸ್ತಾವ ಸಲ್ಲಿಕೆಯಾಗಿದೆ. ಸಚಿವ ಸಂಪುಟ ಸಭೆಯಲ್ಲಿ ಅದಕ್ಕೆ ಅನುಮೋದನೆ ಪಡೆದು ಮರುನಾಮಕರಣ ಮಾಡುತ್ತೇವೆ ಎಂದು ಹೇಳಿದರು.

ಈ ಹಿಂದೆ ಬಿಜೆಪಿ ಸರ್ಕಾರ ಅಧಿಕಾರದಲ್ಲಿ ಇದ್ದಾಗ (2019ರಿಂದ 2023ರ ಅವಧಿಯಲ್ಲಿ) ಹೊಸ ಬಸ್‌ಗಳನ್ನು ಖರೀದಿ ಮಾಡಲಿಲ್ಲ. ಕೋವಿಡ್ ಹಿನ್ನೆಲೆಯಲ್ಲಿ ಆಗ ಸಿಬ್ಬಂದಿ ವೇತನ ನೀಡಲು, ಡೀಸೆಲ್ ಖರೀದಿಗೂ ಕಷ್ಟದ ಪರಿಸ್ಥಿತಿ ಇತ್ತು. ಹಾಗಾಗಿ ಈಗ ಕೆಲವು ಮಾರ್ಗಗಳಲ್ಲಿ ಹಳೇ ಬಸ್‌ಗಳು ಓಡುತ್ತಿರಬಹುದು. ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದ ನಂತರ ಹೊಸ ಬಸ್‌ಗಳ ಖರೀದಿ ಪ್ರಕ್ರಿಯೆ ಪ್ರಗತಿಯಲ್ಲಿದೆ. ಹಂತ ಹಂತವಾಗಿ ವಿವಿಧ ಮಾರ್ಗಗಳಲ್ಲಿ ಹೊಸ ಬಸ್ ಒದಗಿಸಲಾಗುತ್ತಿದೆ ಎಂದು ತಿಳಿಸಿದರು.

ಈ ಹಿಂದೆ ನಾನು ಸಾರಿಗೆ ಸಚಿವನಾಗಿದ್ದಾಗ ಎನ್‌ಡಬ್ಲ್ಯುಕೆಆರ್‌ಟಿಸಿ ವ್ಯಾಪ್ತಿಯಲ್ಲಿ ಹಲವು ಬಸ್ ನಿಲ್ದಾಣ, ಘಟಕ ನಿರ್ಮಿಸಿದ್ದೆ. ಈ ಸಲ ಸಾರಿಗೆ ಸಚಿವನಾದ ನಂತರ ಸಾರಿಗೆ ಸಂಸ್ಥೆಯಲ್ಲಿ 9 ಸಾವಿರ ಸಿಬ್ಬಂದಿ ನೇಮಕ ಮಾಡಿಕೊಂಡಿದ್ದೇವೆ. ಅನುಕಂಪದ ಆಧಾರದಲ್ಲಿ 1 ಸಾವಿರ ಮಂದಿಗೆ ಕೆಲಸ ಪುಟ 2ಕ್ಕೆ

ವರ್ತಮಾನ

ಭಾನುವಾರ
ಮಾರ್ಚ್ 1, 2026

ಮೊದಲ ಪುಟದಿಂದ

## ಕೊಟ್ಟಮಾತೇ ಮುಖ್ಯ

ಹೊರೆ ಆಗುತ್ತೆ ಅನ್ನೋದಾದ್ರೆ ಗ್ಯಾರಂಟಿ ಬಗ್ಗೆ ಹೇಳುವ ಮುನ್ನ, ಮಾತು ಕೊಡೋದಕ್ಕಿಂತ ಮುಂಚೆ ತವಾಗಿ ಚಿಂತನೆ ಮಾಡಬೇಕಾಗಿತ್ತು. ಈಗ ಮಾತು ಕೊಟ್ಟಾಗಿದೆ. ಅದರಂತೆ ನಡೆದುಕೊಳ್ಳಬೇಕು. 5 ವರ್ಷಗಳ ಕಾಲ ಏನೇ ಕಷ್ಟ ಆದರೂ ಆ ಗ್ಯಾರಂಟಿಗಳನ್ನ ರಾಜ್ಯದ ಜನರಿಗೆ ನೀಡಬೇಕು ಎಂದು ಒತ್ತಾಯಿಸಿದರು. ಗ್ಯಾರಂಟಿ ಯೋಜನೆಯಿಂದ ಶಾಸಕರಿಗೆ ಸಮಸ್ಯೆ ಆಗುತ್ತಿದೆ ಅನ್ನೋದು ಶಾಸಕರಿಗೇ ಸಂಬಂಧಿಸಿದ್ದು. ಅದನ್ನು ಅವರ ಬಳಿಯೇ ಕೇಳಬೇಕು. ಆದರೆ ಗ್ಯಾರಂಟಿಗಳಿಂದ ಹಿಂದೆ ಸರಿಯುವ ಪ್ರಶ್ನೆಯೇ ಇಲ್ಲ ಎಂದರು.

## ಪರೀಕ್ಷೆ ಮೊದಲ ದಿನ ಸುಸೂತ್ರ

ಗ್ರಾಮಾಂತರ 23 ಪರೀಕ್ಷಾ ಕೇಂದ್ರಗಳು ಹಾಗೂ ಕೆ.ಆರ್ ನಗರ 3, ಹುಣಸೂರು 4, ನಂಜನಗೂಡು 5, ಎಚ್.ಡಿ ಕೋಟೆ 3, ಪಿರಿಯಾಪಟ್ಟಣ 4 ಮತ್ತು ಟಿ.ನರಸಿಪುರ 2 ಕೇಂದ್ರಗಳಲ್ಲಿ ಪರೀಕ್ಷೆ ನಡೆಯಿತು. ಕೊಠಡಿಗಳಲ್ಲಿ ವೆಬ್ ಕಾಸ್ಟಿಂಗ್ ವ್ಯವಸ್ಥೆ ಕಲ್ಪಿಸಿ ಡಿ.ಸಿ ಕಚೇರಿಯಲ್ಲಿ ಹಾಗೂ ಪರೀಕ್ಷಾ ಮಂಡಳಿಯಿಂದಲೂ ನೇರ ವೀಕ್ಷಣೆ ಮಾಡಲಾಯಿತು. ಪರೀಕ್ಷೆ ಹಿನ್ನೆಲೆಯಲ್ಲಿ ಕೇಂದ್ರದ ಸುತ್ತಾ ನಿಷೇದಾಜ್ಞೆ ಜಾರಿಗೊಳಿಸಿದ್ದರು. ಮಾ.17ರವರಗೆ ಪಿಯು ಪರೀಕ್ಷೆ ನಡೆಯಲಿದೆ. ಮೊದಲ ದಿನ ಪರೀಕ್ಷೆ ಸುಸೂತ್ರವಾಗಿ ನಡೆದಿದ್ದು, ವಿದ್ಯಾರ್ಥಿಗಳಿಗೆ ಕುಡಿಯುವ ನೀರು,ಶೌಚಾಲಯ ಸೇರಿ ಎಲ್ಲಾ ವ್ಯವಸ್ಥೆಯನ್ನು ಮಾಡಲಾಗಿತ್ತು ಎಂದು ಶಿಕ್ಷಣ ಇಲಾಖೆ ಪದವಿ ಪೂರ್ವ ವಿಭಾಗ ಉಪನಿರ್ದೇಶಕಿ ಎಂ.ಪಿ.ನಾಗಮ್ಮ ತಿಳಿಸಿದ್ದಾರೆ.

## ಸಾವಿರ ದಿನ ಸಾವಿರ ಗೊಂದಲ

ಈಗಾಗಲೇ ಸತ್ತು ಹೋಗಿದೆ. ಸತ್ತಿರುವ ಸರ್ಕಾರದ ಹೆಣ ಹೊರಲು ಡಿಕೆಶಿ ಮುಂದೆ ಬರುತ್ತೇನೆ ಎನ್ನುತ್ತಿದ್ದಾರೆ. ಆದರೆ ಸಿದ್ದರಾಮಯ್ಯ ಬಿಡುತ್ತಿಲ್ಲ. ಒಟ್ಟಾರೆ ಸಿದ್ದರಾಮಯ್ಯ, ಡಿ.ಕೆ. ಶಿವಕುಮಾರ್‌ಗೆ ಪಂಗನಾಮ ಹಾಕುವುದು ಗ್ಯಾರಂಟಿ ಎಂದು ಆರ್.ಅಶೋಕ್ ವ್ಯಂಗ್ಯವಾಡಿದರು. ಸ್ಥಳೀಯ ಸಂಸ್ಥೆಗಳಲ್ಲಿ ಬಿಜೆಪಿ– ಜೆಡಿಎಸ್ ಮೈತ್ರಿ ವಿಚಾರ ಹೈಕಮಾಂಡ್ ತೀರ್ಮಾನ ಮಾಡಲಿದೆ. ರಾಜ್ಯದ ಪರಿಸ್ಥಿತಿ ಬಗ್ಗೆ ಈಗಾಗಲೇ ಉಸ್ತುವಾರಿಗೆ ನಮ್ಮ ಅಭಿಪ್ರಾಯಗಳನ್ನು ಹೇಳಿದ್ದೇವೆ. ಒಂದೊಂದು ಪ್ರಾಂತ್ಯದಲ್ಲಿ ಒಂದೊಂದು ವಿಚಾರ ಇದೆ. ಎಂದು ಆರ್.ಅಶೋಕ್ ತಿರುಗೇಟು ನೀಡಿದರು.ಬಿಜೆಪಿ ಜಿಲ್ಲಾಧ್ಯಕ್ಷ ಡಾ.ಇಂದ್ರೇಶ್, ಮುಖಂಡ ಸಚ್ಚಿದಾನಂದ, ನಗರ ಘಟಕದ ಅಧ್ಯಕ್ಷ ವಸಂತ್, ರೈತ ಮೋರ್ಚಾದ ಎಚ್.ಆರ್.ಅಶೋಕ್, ಸಿ.ಟಿ.ಮಂಜುನಾಥ್, ನಾಗಾನಂದ ಇದ್ದರು.

## ಪ್ರಧಾನಿ ಬಳಿಗೆ ನಿಯೋಗಕ್ಕೆ ಆಗ್ರಹ

ಸಿಂಧುತ್ವ ದೊರಕಿಸುವ ಮೂಲಕ ನ್ಯಾಯಾಂಗ ವಿಚಕ್ಷಣೆಯಿಂದ ಈ ಕಾನೂನನ್ನು ಹೊರಗಿಡಲು ಬೇಕಾದ ಸಂಸದರ ಸಂಖ್ಯಾಬಲವಿದ್ದರೂ ಕೇಂದ್ರದ ಬಿಜೆಪಿ ಸರ್ಕಾರವಾಗಲಿ, ರಾಜ್ಯ ಬಿಜೆಪಿಯಾಗಲಿ ಇದರ ಬಗ್ಗೆ ಮುತುವರ್ಜಿ ವಹಿಸಲಿಲ್ಲ ಎಂದು ಅವರು ಟೀಕಿಸಿದರು. ನಂತರ 2023ರಲ್ಲಿ ಅಧಿಕಾರಕ್ಕೆ ಬಂದ ಸಿದ್ಧರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರ ಕೂಡ ಇದರ ಬಗ್ಗೆ ಮುತುವರ್ಜಿ ವಹಿಸಿ ಒಂಬತ್ತನೇ ಶಡ್ಯೂಲ್ ಗೆ ಸೇರಿಸುವ ಪ್ರಯತ್ನ ಮಾಡಲಿಲ್ಲ. ಇದರಿಂದ ಎಸ್ಸಿ ಮತ್ತು ಎಸ್ಟಿ ಸಮುದಾಯಗಳು ಅನ್ಯಾಯಕ್ಕೆ ಒಳಗಾಗಿವೆ ಎಂದು ಕಿಡಿಕಾರಿದರು. ಇದರ ಬಗ್ಗೆ ಧನಿಯತ್ತಬೇಕಿದ್ದ ನಮ್ಮ ಸಮುದಾಯಗಳ ಸಚಿವರು, ಶಾಸಕರು ಮೌನವಹಿಸಿರುವುದು ಅತ್ಯಂತ ದುರದೃಷ್ಟಕರ ಎಂದು ಬೇಸರ ವ್ಯಕ್ತಪಡಿಸಿದರು.

## ಸರ್ಕಾರದಿಂದ ಅನ್ಯಾಯ

ರಾಜ್ಯ ಸರ್ಕಾರ 52 ಸಾವಿರ ಹುದ್ದೆಗಳನ್ನು ಹಳೆ ಮೀಸಲಾತಿ ಅನ್ವಯ ತುಂಬು ವುದಾಗಿ ಹೇಳಿದೆ. ಇದರಿಂದ 1600 ಪರಿಶಿಷ್ಟ ಪಂಗಡ ಮತ್ತು 2 ಸಾವಿರ ಪರಿಶಿಷ್ಟ ಜಾತಿಯ ಹುದ್ದೆಗಳು ವಂಚಿತವಾಗಲಿವೆ ಎಂದು ಆರೋಪಿಸಿದರು. ಸುದ್ದಿಗೋಷ್ಠಿಯಲ್ಲಿ ಅಖಿಲಕರ್ನಾಟಕ ವಾಲ್ಮೀಕಿ ಮಹಾಸಭಾ ರಾಜ್ಯಧ್ಯಕ್ಷ ನರಸಿಂಹಯ್ಯ, ಕೇಂದ್ರ ಪರಿಹಾರ ಸಮಿತಿ ಮಾಜಿ ಅಧ್ಯಕ್ಷ ರಾಮಚಂದ್ರು, ಹಿನಕಲ್ ಕೆಂಪನಾಯಕ, ಕೆ.ಸಣ್ಣಯ್ಯ ನಾಯಕ, ಜಿಲ್ಲಾ ನಾಯಕರ ಸಂಘದ ಅಧ್ಯಕ್ಷ ದ್ಯಾವಪ್ಪ ನಾಯಕ ಉಪಸ್ಥಿತರಿದ್ದರು.

## ಮಾತಿಗೆ ಹೆದರಿ ಯುವತಿ ಆತ್ಮಹತ್ಯೆ

ದಿನದ ಪೂಜೆ ಮನೆಯಲ್ಲಿ ನಡೆಯುತ್ತಿತ್ತು. ಕೊನೆಯ ದಿನವಾದ್ದರಿಂದ ಮಾರಮ್ಮ ದೇವರಿಗೆ ತಾಳಿ ಕೊಡುವಂತೆ ಜ್ಯೋತಿಷಿ ತಿಳಿಸಿದ್ದರು. ಮನೆಯಲ್ಲಿ ಎಲ್ಲಾ ಸಿದ್ಧತೆ ಮಾಡಿಕೊಂಡಿದ್ದರು. ಊಟದ ನಂತರ ವಿದ್ಯಾ ರೂಂಗೆ ಹೋಗಿದ್ದಳು. ಸಂಜೆ ತಾಯಿ ಕೂಗಿದರೂ ಕೂಡ ವಿದ್ಯಾ ಹೊರಬಂದಿರಲಿಲ್ಲ. ಕೆಲಸ ಮಾಡುತ್ತಿರಬೇಕೆಂದು ಎಲ್ಲರೂ ಸುಮ್ಮನಾಗಿದ್ದರು. ಬಾಗಿಲನ್ನು ತೆಗೆಯದೇ ಇದ್ದಾಗ ಅನುಮಾನಗೊಂಡು ಕಿಟಕಿಯಲ್ಲಿ ನೋಡಿದಾಗ ನೇಣು ಬಿಗಿದು ಆತ್ಮಹತ್ಯೆ ಮಾಡಿಕೊಂಡಿರುವುದು ಬೆಳಕಿಗೆ ಬಂದಿದೆ. ಘಟನೆ ಸಂಬಂಧ ಬಾಗಲಗುಂಟೆ ಪೊಲೀಸರು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ.

## ಸಚಿವರ ಕುರ್ಚಿಯೂ ಅಲುಗಾಟ

**–ಕೊಡಲು ದೇಶದಲ್ಲಿ ಉಳಿದಿರುವುದೊಂದೇ ಕರ್ನಾಟಕ. ಇನ್ನುಳಿದ ರಾಜ್ಯಗಳೆಲ್ಲಾ ದಿವಾಳಿ ಆಗಿವೆ ಎಂದು ಅಶೋಕ್ ಆರೋಪಿಸಿದರು.**

## ವಾಯವ್ಯ ಸಾರಿಗೆಗೆ ಚನ್ನಮ್ಮ ಹೆಸರು

ಕೊಟ್ಟಿದ್ದೇವೆ ಎಂದು ಹೇಳಿದರು. ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವೆ ಲಕ್ಷ್ಮಿ ಹೆಬ್ಬಾಳಕರ್ ಮಾತನಾಡಿ, ಹೆಸರಿಗಷ್ಟೇ ಅಲ್ಲ. ವಾಸ್ತವದಲ್ಲೂ ಬೆಳಗಾವಿಯನ್ನು ಎರಡನೇ ರಾಜಧಾನಿಯಂತೆ ಟ್ರೀಟ್ ಮಾಡಬೇಕು. ಉತ್ತರ ಕರ್ನಾಟಕ ಅಭಿವೃದ್ಧಿಪಡಿಸಬೇಕು. ಇಲ್ಲದಿದ್ದರೆ ಮುಂದಿನ ಕಾಲದಲ್ಲಿ ಸಿ.ಎಂ, ಡಿಸಿಎಂ ಆಗುವ ಸಾಮರ್ಥ್ಯ ಹೊಂದಿದವರೂ ನಮ್ಮಲ್ಲೂ ಇದ್ದಾರೆ ಎಂದು ಹೇಳಿದರು. ಜಿಲ್ಲಾ ಉಸ್ತುವಾರಿ ಸಚಿವ ಸತೀಶ ಜಾರಕಿಹೊಳಿ ಭಾಗವಹಿಸಿದ್ದರು.

## ಸಾಕಾನೆಗಳ ಆಗಮನ

ಡ್ರೋನ್ ಮೂಲಕ ಪುಂಡಾನೆಗಳನ್ನು ಪತ್ತೆಹಚ್ಚಿ ಬಳಿಕ ಅರವಳಿಕೆ ಮದ್ದು ನೀಡಿ ಕಾಡಾನೆ ಸೆರೆ ಹಿಡಿಯಲು ತಯಾರಿ ನಡೆಸಲಾಗಿದೆ.

## ಹೃದಯಾಘಾತದಿಂದ ಸಾವು

ಹೃದಯಾಘಾತದಿಂದ ಸಾವನ್ನಪ್ಪಿದ್ದಾರೆ. ಇಂದು ಉತ್ಸಾಹದಿಂದಲೇ ಪರೀಕ್ಷೆಗೆ ಹೊರಡಲು ತಯಾರಾಗಿದ್ದರು. ಆದರೆ ವಿಧಿಯಾಟ ಬೇರೆಯೇ ಆಗಿತ್ತು. ಸ್ನಾನ ಮುಗಿಸಿ ಮನೆಯಿಂದ ಹೊರಬರುತ್ತಿದ್ದಾಗಲೇ ಹಠಾತ್ತನೇ ಹೃದಯಾಘಾತ ಸಂಭವಿಸಿದೆ. ಕೂಡಲೇ ಪೋಷಕರು ಆಕೆಯನ್ನ ಆಸ್ಪತ್ರೆಗೆ ಕರೆದೊಯ್ಯುತ್ತಿದ್ದರು. ಮಾರ್ಗ ಮಧ್ಯೆಯೇ ಅಸುನೀಗಿದ್ದಾರೆ.

# ಸ್ವಯಂ ಸೇವಾ ಸಂಸ್ಥೆಗಳ ಸೇವಾ ಮನೋಭಾವ ಅನನ್ಯ

**ಸಿವಿಲ್ ನ್ಯಾಯಾಧೀಶರಾದ ಈಶ್ವರ ಹೇಳಿಕೆ**

ಚಾಮರಾಜನಗರ, ಪ್ರತಿಫಲಾಪೇಕ್ಷೆ ಇಲ್ಲದೆ ಸ್ವಯಂ ಪ್ರೇರಿತವಾಗಿ ಸಮಾಜಮುಖಿಯಾಗಿ ಕೆಲಸ ಮಾಡುವ ಸ್ವಯಂ ಸೇವಾ ಸಂಸ್ಥೆಗಳ ಸೇವಾ ಮನೋಭಾವನೆ ಅನನ್ಯವಾಗಿದೆ ಎಂದು ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಈಶ್ವರ ಅವರು ಅಭಿಪ್ರಾಯಪಟ್ಟರು.

ನಗರದ ಜಿಲ್ಲಾಡಳಿತ ಭವನದ ಹಳೇ ಕೆಡಿಪಿ ಸಭಾಂಗಣದಲ್ಲಿಂದು ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಫೆವಾರ್ಡ್–ಕ ಚಾಮರಾಜನಗರ ಜಿಲ್ಲಾ ಒಕ್ಕೂಟ ಮತ್ತು ಜಿಲ್ಲಾ ಸ್ವಯಂ ಸೇವಾ ಸಂಸ್ಥೆಗಳ ಒಕ್ಕೂಟಗಳ ಸಂಯುಕ್ತಾಶ್ರಯದಲ್ಲಿ ಏರ್ಪಡಿಸಲಾಗಿದ್ದ 'ಅಂತರಾಷ್ಟ್ರೀಯ ಸ್ವಯಂ ಸೇವಾ ಸಂಸ್ಥೆಗಳ ದಿನಾಚರಣೆ' ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.

ಸಾಮಾಜಿಕ ಕಳಕಳಿಯ ಉದ್ದೇಶದೊಂದಿಗೆ ಕಾರ್ಯನಿರ್ವಹಿಸುವ ಸ್ವಯಂ ಸೇವಾ ಸಂಸ್ಥೆಗಳು ಸಮುದಾಯದ ಸಕಾರಾತ್ಮಕ ಬದಲಾವಣೆಗೆ ಶ್ರಮಿಸುತ್ತಿವೆ. ಶೈಕ್ಷಣಿಕ, ಆರ್ಥಿಕ ಹಾಗೂ ಆರೋಗ್ಯ



ಕ್ಷೇತ್ರಗಳ ಅಭಿವೃದ್ಧಿಗೆ ಸರ್ಕಾರದ ಸಹಭಾಗಿತ್ವದೊಂದಿಗೆ ಕೊಡುಗೆ ನೀಡುತ್ತಿವೆ. ಲಾಭರಹಿತವಾಗಿ ಕೆಲಸ ಮಾಡುವ ಸ್ವಯಂ ಸೇವಾ ಸಂಸ್ಥೆಗಳು ಸಮಾಜದ ಹಿತವನ್ನು ಬಯಸಿವೆ. ಪರಿಸರ ಸಂರಕ್ಷಣೆ, ಸ್ವಚ್ಛತೆ, ವನ್ಯಜೀವಿಗಳ ರಕ್ಷಣೆ, ಮಹಿಳೆಯರ, ದುರ್ಬಲ ವರ್ಗದವರ ಸಬಲೀಕರಣಕ್ಕಾಗಿ ದುಡಿಯುತ್ತಿರುವ ಸೇವಾ ಸಂಸ್ಥೆಗಳ ಸೇವಾ ಮನೋಭಾವ ಮಾದರಿಯಾಗಿದೆ ಎಂದರು.

ಬರ, ಪ್ರವಾಹ, ನೈಸರ್ಗಿಕ ವಿಕೋಪಗಳಂತಹ ತುರ್ತು ಪರಿಸ್ಥಿತಿಯಲ್ಲಿ ಜನರಿಗೆ ಕುಡಿಯುವ ನೀರು ಸೇರಿದಂತೆ ಅಗತ್ಯ ಮೂಲಸೌಕರ್ಯಗಳನ್ನು ಒದಗಿಸಿ ಸೇವಾ ಕಾರ್ಯ ತತ್ಪರತೆಯನ್ನು ಪ್ರದರ್ಶಿಸಿವೆ. ಬಡತನ, ಸಾಮಾಜಿಕ ಪಿಡುಗುಗಳ ವಿರುದ್ಧ ಜನಸಾಮಾನ್ಯರಿಗೆ ಜಾಗೃತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಿವೆ. ಮಕ್ಕಳ ಹಕ್ಕುಗಳ ರಕ್ಷಣೆಯಲ್ಲಿ ಪ್ರಮುಖ ಪಾತ್ರ ವಹಿಸಿವೆ. ಸ್ವಯಂ ಸೇವಾ ಸಂಸ್ಥೆಗಳು ಸಮಾಜಕ್ಕೆ ಉತ್ತಮ ಕೊಡುಗೆ ನೀಡಿ ಜನರು ಸ್ವಾವಲಂಬಿಗಳಾಗಲು ನೆರವಾಗಿವೆ ಎಂದು ತಿಳಿಸಿದರು. ಮೈಸೂರು ವಿಭಾಗೀಯ ಫೆವಾರ್ಡ್–ಕ ನಿರ್ದೇಶಕರಾದ ವಿ.ಎನ್. ಮೂರ್ತಿ ಅವರು ಮಾತನಾಡಿ 2010ರಲ್ಲಿ ಭಾರತ ಸರ್ಕಾರ ಸ್ವಯಂ ಸೇವಾ ಸಂಸ್ಥೆಗಳ ದಿನ ಆಚರಿಸುವಂತೆ ಘೋಷಿಸಿದೆ. ಸಮಾಜದ ಉತ್ತಮ ಭವಿಷ್ಯಕ್ಕಾಗಿ ಶ್ರಮಿಸುವ ಸ್ವಯಂ ಸೇವಾ ಸಂಸ್ಥೆಗಳ ದಿನಾಚರಣೆಯನ್ನು ಇಂದು ವಿಶ್ವಾದ್ಯಂತ ಆಚರಿಸಲಾಗುತ್ತಿದೆ. ಮಾನವೀಯ ನೆರವು ಹಾಗೂ ಮಾನವ ಹಕ್ಕುಗಳ ರಕ್ಷಣೆಯ ಸದುದ್ದೇಶ ಹೊಂದಿರುವ ಸ್ವಯಂ ಸೇವಾ ಸಂಸ್ಥೆಗಳು ನಾಗರಿಕ ಹಕ್ಕು ಮತ್ತು ಸೌಲಭ್ಯಗಳನ್ನು ಜನರಿಗೆ ತಲುಪಿಸಲು ಸರ್ಕಾರ ಮತ್ತು ಸಮಾಜದ ಕೊಂಡಿಯಾಗಿ ಕಾರ್ಯನಿರ್ವಹಿಸುತ್ತಿವೆ ಎಂದರು.

ಫೆವಾರ್ಡ್–ಕ ಚಾಮರಾಜನಗರ ಸಂಸ್ಥೆಯ ಜಿಲ್ಲಾಧ್ಯಕ್ಷರಾದ ಕೆ.ಎನ್. ಮಂಟೇಲಿಂಗಯ್ಯ ಅವರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಗೌರವಾಧ್ಯಕ್ಷರಾದ ಗಂಗಾಧರಸ್ವಾಮಿ ಹಾಗೂ ಉದ್ಯಮಿ ಶ್ರೀನಿಧಿ ಕುದರ್ ಅವರು ಕಾರ್ಯಕ್ರಮದಲ್ಲಿ ಸ್ವಯಂ ಸೇವಾ ಸಂಸ್ಥೆಗಳ ಮಹತ್ವದ ಕುರಿತು ಮಾತನಾಡಿದರು.

ಇದೇ ವೇಳೆ ಜಾನಪದ ಗಾಯಕರಾದ ಸಿ.ಎಂ. ನರಸಿಂಹಮೂರ್ತಿ, ಚಲನಚಿತ್ರ ನಟ ಎಸ್. ಮಂಜು ಹಾಗೂ ಮೈಸೂರಿನ ಅನುಬಂಧ ಸೇವಾ ಟ್ರಸ್ಟ್ ಅಧ್ಯಕ್ಷೆ ಸುಧಾಮಣಿ ಅವರನ್ನು ಸನ್ಮಾನಿಸಲಾಯಿತು. ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪನಿರ್ದೇಶಕರಾದ ಎಚ್.ಆರ್. ಸುರೇಶ್, ಫೆವಾರ್ಡ್–ಕ ಮೈಸೂರು ವಿಭಾಗೀಯ ಉಪಾಧ್ಯಕ್ಷರಾದ ಡಾ.ಎ.ಎಸ್.ಪ್ರೇಮ, ಕಾರ್ಯಕ್ರಮ ವ್ಯವಸ್ಥಾಪಕ ಎಂ.ಎಸ್. ಕೃಷ್ಣಮೂರ್ತಿ, ಎಸ್.ಪಿ. ಬಾಲಸುಬ್ರಹ್ಮಣ್ಯಂ ಗಾನ ಗಂಧರ್ವ ಸಾಂಸ್ಕೃತಿಕ ಕಲಾ ವೇದಿಕೆಯ ಶಿವಣ್ಣ, ಇತರರು ಉಪಸ್ಥಿತರಿದ್ದರು.

# ಪ್ರತಿಭೆಗಳ ಬೆಳೆಯಲು ಚಿಗುರು

## ಮಹಮದ್ ಅಸ್ಗರ್ ಮುನ್ನಾ ಹೇಳಿಕೆ । ಮಕ್ಕಳ ಹಬ್ಬ 'ಚಿಗುರು–2026'

ಚಾಮರಾಜನಗರ: ಬಾಲ ಪ್ರತಿಭೆಗಳು ಹೆಮ್ಮರವಾಗಿ ಬೆಳೆಯಲು ಚಿಗುರು ಕಾರ್ಯಕ್ರಮ ಸಹಕಾರಿಯಾಗಿದೆ ಎಂದು ಚಾಮರಾಜನಗರ–ರಾಮಸಮುದ್ರ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾದ ಮಹಮದ್ ಅಸ್ಗರ್ ಮುನ್ನಾ ಅವರು ತಿಳಿಸಿದರು.

ನಗರದ ಪಿ.ಡಬ್ಲ್ಯೂಡಿ ಕಾಲೋನಿಯಲ್ಲಿರುವ ಉನ್ನತೀಕರಿಸಿದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲಾ ಅವರಣದಲ್ಲಿಂದು ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಯೋಗದಲ್ಲಿ ಆಯೋಜಿಸಿದ್ದ ಮಕ್ಕಳಲ್ಲಿರುವ ಕಲಾಪ್ರತಿಭೆಯನ್ನು ಪ್ರೋತ್ಸಾಹಿಸುವ ಮಕ್ಕಳ ಹಬ್ಬ 'ಚಿಗುರು–2026' ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಜಾನಪದ ಕಲೆಗಳ ತವರೂರು ಚಾಮರಾಜನಗರ ಜಿಲ್ಲೆಯಲ್ಲಿ ಸಾಕಷ್ಟು ಕಲಾಪ್ರತಿಭೆಗಳಿದ್ದಾರೆ. ರಾಜ್ಯ, ರಾಷ್ಟ್ರ, ಅಂತರಾಷ್ಟ್ರೀಯ ಮಟ್ಟದಲ್ಲಿಯೂ ಹೆಸರು ಮಾಡಿದ ಕಲಾವಿದರಿದ್ದಾರೆ. ಅವರುಗಳನ್ನು ಮಾದರಿಯಾಗಿಸಿಕೊಂಡು ಬಾಲ ಪ್ರತಿಭೆಗಳು ಬೆಳೆಯಬೇಕು. ಉನ್ನತ ಸಾಧನೆ ಮಾಡಿ ಜಿಲ್ಲೆಗೆ ಕೀರ್ತಿ ತರಬೇಕು. ಜಿಲ್ಲೆಯಲ್ಲಿ ಬಾಲ ಪ್ರತಿಭೆಗಳು ಹೆಮ್ಮರವಾಗಿ ಬೆಳೆಯಲು ಇಲಾಖೆ ಆಯೋಜಿತ ಚಿಗುರು ಕಾರ್ಯಕ್ರಮ ಉತ್ತಮ ವೇದಿಕೆಯಾಗಿದೆ ಎಂದರು.

ದೈನಂದಿನ ಪಾಠ, ಪ್ರವಚನಗಳ ಜೊತೆಗೆ ಪ್ರಾಥಮಿಕ ಹಂತದಿಂದಲೇ ಪಠ್ಯೇತರ ಚಟುವಟಿಕೆಗಳಲ್ಲಿ ಹೆಚ್ಚಾಗಿ ತೊಡಗಿಸಿಕೊಳ್ಳಲು ಮಕ್ಕಳನ್ನು ಶಾಲಾ ಶಿಕ್ಷಕರು ಹಾಗೂ ಪೋಷಕರು ಪ್ರೇರೇಪಿಸ







ಬೇಕು. ಮಕ್ಕಳಲ್ಲಿರುವ ಕಲಾಪ್ರತಿಭೆಯನ್ನು ಹೊರತರಲು ರಾಜ್ಯಸರ್ಕಾರ ಪ್ರೋತ್ಸಾಹದಾಯಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಿದೆ. ಮಕ್ಕಳು ಇದನ್ನು ಸದ್ಬಳಕೆ ಮಾಡಿಕೊಳ್ಳಬೇಕು ಎಂದು ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾದ ಮಹಮದ್ ಅಸ್ಗರ್ ಮುನ್ನಾ ಅವರು ತಿಳಿಸಿದರು. ಶಾಲಾ ಶಿಕ್ಷಣ ಇಲಾಖೆಯ ಸಿ.ಆರ್.ಪಿ. ಶಿವಕುಮಾರ್ ಅವರು ಕಾರ್ಯಕ್ರಮದಲ್ಲಿ ಮಾತನಾಡಿದರು. ಇದೇ ವೇಳೆ ಆರಂಭದಲ್ಲಿ ಗಾಯನ ಕಾರ್ಯಕ್ರಮ ನಡೆಸಿಕೊಟ್ಟ ಸರಿಗಮಪ ಜ್ಯೂರಿ ಜಿಲ್ಲೆಯ ಆರ್. ಮಹೇಂದರ್ ಅವರ ಶಿಷ್ಯ ಬಾಲ ಪ್ರತಿಭೆ ಪುಣ್ಯಚ ರಣ್ ಮತ್ತು ತಂಡದವರಿಗೆ ಪ್ರಮಾಣಪತ್ರ ನೀಡಿ ಗೌರವಿಸಲಾಯಿತು. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕರಾದ ರಾಜು, ಉನ್ನತೀಕರಿಸಿದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಮುಖ್ಯ ಶಿಕ್ಷಕರಾದ ಮಾಲಿನಿ, ವಾರ್ತಾ ಇಲಾಖೆಯ ವಾರ್ತಾ ಸಹಾ ಯಕರಾದ ಸುರೇಶ್‌ಕುಮಾರ್, ಶಾಲಾ ಅಭಿವೃದ್ಧಿ ಸಮಿತಿ ಅಧ್ಯಕ್ಷರಾದ ಸುಂದರ್, ಕಲೆ ನಟರಾಜು, ಇತರರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು. ವೇದಿಕೆ ಕಾರ್ಯಕ್ರಮದ ಬಳಿಕ ಬಾಲ ಪ್ರತಿಭೆಗ ಳಿಂದ ಶಾಸ್ತ್ರೀಯ ಸಂಗೀತ, ಸುಗಮ ಸಂಗೀತ, ನಾಟಕ, ಜನಪದ ಗೀತೆ, ಸಮೂಹ ನೃತ್ಯ ಕಾರ್ಯಕ್ರಮಗಳು ನಡೆದವು.

### ಗಡಿಜಿಲ್ಲೆಯ ಕಲಾವಿದರ ಪ್ರೋತ್ಸಾಹ

**ಜಾನಪದ ಗಾಯಕರಾದ ಸಿ.ಎಂ. ನರಸಿಂಹ ಮೂರ್ತಿ ಅವರು ಮಾತನಾಡಿ ಕನ್ನಡ ಸಂಸ್ಕೃತಿ ಇಲಾಖೆ ಜಿಲ್ಲೆಯಲ್ಲಿ ಕಲೆ, ಸಾಹಿತ್ಯ, ಸಂಸ್ಕೃತಿ ವೃದ್ಧಿಸಲು ಸಾಕಷ್ಟು ಕಾರ್ಯಕ್ರಮಗಳನ್ನು ಜಿಲ್ಲಾದ್ಯಂತ ಏರ್ಪಡಿಸುತ್ತಿದೆ. ಸರ್ಕಾರವು ಚಿಗುರು ಕಾರ್ಯಕ್ರಮ ಆಯೋಜನೆ ಮೂಲಕ ಗಡಿ ಜಿಲ್ಲೆಯ ಕಲಾವಿದರನ್ನು ಪ್ರೋತ್ಸಾಹಿಸುತ್ತಿದೆ. ಮಲೆ ಮಹದೇಶ್ವರ, ಮಂಟೇಸ್ವಾಮಿಯವರಂತಹ ಸಿದ್ಧ ಪುರುಷರು ನಡೆದಾಡಿದ ಈ ನೆಲದಲ್ಲಿ ಅನೇಕ ಕಲಾ ಪ್ರತಿಭೆಗಳಿವೆ. ಪೋಷಕರು ಬೆಳೆ ಯುವ ಪೈರನ್ನು ಮೊಳಕೆಯಲ್ಲಿ ಗುರುತಿಸಿ ಪ್ರತಿಭೆಗೆ ಪೂರಕವಾಗಿ ಮಕ್ಕಳನ್ನು ಪ್ರೋತ್ಸಾಹಿಸಬೇಕು ಎಂದರು.**

ಮೊದಲ ಪುಟದಿಂದ

## ರಾಜಕೀಯ ವೈರಾಗ್ಯ

ದೇಶದಲ್ಲೇ ಮಾದರಿ ರಾಜ್ಯ ಮಾಡುತ್ತೇನೆ ಎಂದು ಅವರು ಹೇಳಿದರು.

ನಾನು ಐದು ಬಾರಿ ಸಾವಿನ ಮನೆಯ ಕದ ತಟ್ಟಿ ಬಂದಿದ್ದೇನೆ. ದೇವರ ಕೃಪೆಯಿಂದ ಬದುಕಿ ಉಳಿದಿದ್ದೇನೆ. ರಾಜ್ಯ ಸರ್ಕಾರ ಜನರ ಹಣವನ್ನು ಲೂಟಿ ಮಾಡುತ್ತಿದೆ. ಗ್ಯಾರಂಟಿ ಯೋಜನೆಗಳಿಗೆ ಹಣ ಹೊಂದಿಸಲು ಜನರ ಜೇಬಿಗೆ ಕತ್ತರಿ ಹಾಕುತ್ತಿದೆ. ಮದ್ಯ, ವಿದ್ಯುತ್ ಹಾಗೂ ಅಗತ್ಯ ವಸ್ತುಗಳ ಬೆಲೆ ಏರಿಕೆ ಮಾಡುತ್ತಿದೆ ಎಂದು ಟೀಕಿಸಿದರು.

## ದಲಿತ ಸಿಎಂ ಮಾಡಿ

ಆಂಧ್ರಪ್ರದೇಶದ ಎರಡನೇ ಮುಖ್ಯಮಂತ್ರಿಯಾಗಿದ್ದರು. ಈಗ, ಖರ್ಗೆ ಅವರಿಗೆ ಆ ಸಾಧನೆ ಮಾಡಲು ಅವಕಾಶವಿದೆ ಎಂದು ನಾಯಕರು ಖರ್ಗೆ ಅವರಿಗೆ ತಿಳಿಸಿದ್ದಾರೆ. ಆದರೆ, ಕಾಂಗ್ರೆಸ್ ಹೈಕಮಾಂಡ್ ಯಾವುದೇ ವಿಚಾರಕ್ಕೂ ಪ್ರತಿಕ್ರಿಯೆ ನೀಡಿಲ್ಲ.

## ದೋಸ್ತಿ ಹೋರಾಟ

**ಎಂದು ಅಶೋಕ್ ಹೇಳಿದರು. ಬಿಜೆಪಿ ಸರ್ಕಾರದಲ್ಲಿ ಶೇ.40ರಷ್ಟು ಭ್ರಷ್ಟಾಚಾರವೆಂದು ನಮ್ಮ ಮೇಲೆ ಆರೋಪ ಮಾಡಿದ್ದರು. ಆದರೆ ಅದ್ಯಾವುದೂ ನ್ಯಾಯಾಲಯದದಲ್ಲಿ ಸಾಬೀತಾಗಲಿಲ್ಲ. ಆದರೀಗ ಕಾಂಗ್ರೆಸ್ ಸರ್ಕಾರ ಮೂರು ಪಟ್ಟು ಭ್ರಷ್ಟಾಚಾರದಲ್ಲಿ ತೊಡಗಿದೆ ಎಂದು ಗುತ್ತಿಗೆದಾರರೇ ದೂರಿದ್ದಾರೆ ಎಂದು ಹೇಳಿದರು.**

## ಯುದ್ಧ ಭೀತಿ

ರಾಜಧಾನಿ ಟೆಲ್ ಅವೀವ್ ಅನ್ನು ಗುರಿಯಾಗಿಸಿಕೊಂಡು ಇರಾನ್ ಕ್ಷಿಪಣಿ ದಾಳಿ ನಡೆಸಿದೆ. ಅಲ್ಲದೇ ಆಪರೇಷನ್ ಟ್ರೂ ಪ್ರಾಮಿಸ್ 4 ಹೆಸರಿನಲ್ಲಿ ಅಮೆರಿಕ ಮತ್ತು ಅದರ ಮಿತ್ರರಾಷ್ಟ್ರಗಳ ಮೂಲಸೌಕರ್ಯ ನೆಲೆಗಳನ್ನು ಗುರಿಯಾಗಿಸಿಕೊಂಡು ಇರಾನ್ ಪ್ರತೀಕಾರದ ದಾಳಿ ನಡೆಸಿದೆ. ಬಹ್ರೇನ್‌ನ ಮನಾಮಾದಲ್ಲಿರುವ ಅಮೆರಿಕ ನೌಕಾಪಡೆಯ 5ನೇ ಫ್ಲೀಟ್ ಪ್ರಧಾನ ಕಚೇರಿ, ಯುನೈಟೆಡ್ ಅರಬ್ ಎಮಿರೇಟ್ಸ್ನ ಅಬುಧಾಬಿಯಲ್ಲಿರುವ ಅಲ್ ದಫ್ರಾ ವಾಯುನೆಲೆ, ಕತಾರ್‌ನಲ್ಲಿರುವ ವಾಯುನೆಲೆಯನ್ನು ಗುರಿಯಾಗಿಸಿಕೊಂಡ ಇರಾನ್ ದಾಳಿ ನಡೆಸಿದೆ.

ಸಂವಿಧಾನ ಸಂರಕ್ಷಣಾ ಹೋರಾಟ ಸಮಿತಿ ರಾಜ್ಯಾಧ್ಯಕ್ಷ ಎನ್.ಭಾಸ್ಕರ್ ಸಲಹೆ

# ಪದವೀಧರರು ಶಿಷ್ಯವೇತನ ಸದ್ಬಳಕೆ ಮಾಡಿಕೊಳ್ಳಿ

ಮೈಸೂರು: ಕಾನೂನು ಪದವೀಧರರು ಶಿಷ್ಯವೇತನವನ್ನು ತಮ್ಮ ಶಿಕ್ಷಣಕ್ಕೆ ಸದ್ವಿನಿಯೋಗ ಮಾಡಿಕೊಳ್ಳುವಂತೆ ಸಂವಿಧಾನ ಸಂರಕ್ಷಣಾ ಹೋರಾಟ ಸಮಿತಿ ರಾಜ್ಯಾಧ್ಯಕ್ಷ ಎನ್.ಭಾಸ್ಕರ್ ಸಲಹೆ ನೀಡಿದರು.

ನಾಲ್ಕು ವರ್ಷಗಳಿಂದ ನೆನಗುದಿಗೆ ಬಿದ್ದಿದ್ದ ಕಾನೂನು ಪದವೀಧರರ ಶಿಷ್ಯವೇತನವನ್ನು ಬಿಡುಗಡೆ ಮಾಡಿಸಿದ್ದರಿಂದ ಮೈಸೂರು ವಕೀಲ ಪದಾಧಿಕಾರಿಗಳಿಂದ ಜಲದರ್ಶಿನಿ ಅತಿಥಿಗೃಹದಲ್ಲಿ ಸನ್ಮಾನ ಸ್ವೀಕರಿಸಿ ಮಾತನಾಡಿ, ಸಮಾಜ ಕಲ್ಯಾಣಾ ಇಲಾಖೆ ಸಚಿವ ಡಾ.ಎಚ್.ಸಿ. ಮಹದೇವಪ್ಪ ನಮ್ಮ ಮನವಿಗೆ ಒಗೊಟ್ಟು ಸಾಮಾಜಿಕ ಕಳಕಳಿಯಿಂದ 1 ಕೋಟಿ 30 ಲಕ್ಷ ರೂ.ಗಳನ್ನು ಒಂದೇ ಕಂತಿನಲ್ಲಿ ಬಿಡುಗಡೆ ಮಾಡಿ ಪದವೀಧರರ ಶಿಕ್ಷಣಕ್ಕೆ ನೆರವಾಗಿದ್ದಾರೆ ಎಂದು ಹೇಳಿದರು.

ಪರಿಶಿಷ್ಟ ಜಾತಿಯ ಪರಿಶಿಷ್ಟ ಪಂಡಗಳ



ಕಾನೂನು ಪದವೀಧರರಿಗೆ ನ್ಯಾಯವಾದಿ ವೃತ್ತಿಯ ಪ್ರಾಯೋಜಿತ ಕಾರ್ಯಕ್ರಮದಡಿಯಲ್ಲಿ ಪ್ರಸ್ತುತ ಜಾರಿಯಲ್ಲಿರುವ ತರಬೇತಿ ಅವಧಿಯನ್ನು ನಾಲ್ಕು ವರ್ಷಗಳಿಂದ 2 ವರ್ಷಗಳಿಗೆ ಕಡಿತಗೊಳಿಸಿ ಮಾಸಿಕ ತರಬೇತಿ ಭತ್ಯೆಯನ್ನು ಮಾಹೆಯಾನ ರೂ. 5 ಸಾವಿರದಿಂದ 10 ಸಾವಿರ ರೂ.ಗಳ ಹೆಚ್ಚಿಸಿ ಸರ್ಕಾರ ಆದೇಶ ಹೊರಡಿಸಲಾಗಿದೆ ಎಂದರು.

ಎಡಿಜಿಪಿ ತಿಮ್ಮಯ್ಯ, ಮನೋನ್ಮಣಿ, ವಕೀಲರಾದ ಗಂಗಾಧರ್ ಕೆ, ಮಂಜುಳಾ, ಜಯಶಂಕರ್, ಪರಂಜ್ಯೋತಿ, ಸುರೇಶ್ ಮೌರ್ಯ, ವಕೀಲರ ಸಂಘದ ಉಪಾಧ್ಯಕ್ಷ ಎಂ.ವಿ.ಚಂದ್ರಶೇಖರ್, ಜಂಟಿ ಕಾರ್ಯದರ್ಶಿ ಚರಣ್ ರಾಜ್, ಜಿಲ್ಲಾ ಕಾಂಗ್ರೆಸ್ ಕಿಸಾನ್ ಘಟಕದ ಅಧ್ಯಕ್ಷ ಜಿ.ಮಹದೇವ್, ಗುಂಡ್ಲುಪೇಟೆ ಎಪಿಎಂಸಿ ಸದಸ್ಯರಾದ ಎಸ್.ಶಿವರಾಜಪ್ಪ, ಮಡಿವಾಳ ಸಮಾಜದ ಸತ್ಯನಾರಾಯಣ ನೂರಾರು ವಕೀಲರು ಹಾಜರಿದ್ದರು.

### ಸಿಎ ನಿವೇಶನಕ್ಕೆ ಮನವಿ

**ಎಸ್ಸಿ, ಎಸ್ಟಿ ವಕೀಲರ ಸಂಘಕ್ಕೆ ಮೈಸೂರು ನಗರದಲ್ಲಿ ನಿವೇಶನ ಕೊಡಿಸಬೇಕೆಂದು ವಕೀಲರು ಕೆಪಿಸಿಸಿ ವಕ್ತಾರ ಎಂ.ಲಕ್ಷ್ಮಣ್ ಮತ್ತು ಎನ್.ಭಾಸ್ಕರ್ ಅವರಿಗೆ ಮನವಿ ಮಾಡಿದರು. ಈ ಸಂಬಂಧ ಮುಡಾದಲ್ಲಿ ಸಿಎ ನಿವೇಶನಕ್ಕೆ ಅರ್ಜಿ ಸಲ್ಲಿಸಿದ್ದೇವೆ. ಅದನ್ನಾದರೂ ಕೊಡಿಸುವಂತೆ ಕೋರಿದರು. ಈ ಬಗ್ಗೆ ಪ್ರತಿಕ್ರಿಯಿಸಿದ ಎಂ. ಲಕ್ಷ್ಮಣ್ ಮತ್ತು ಎನ್.ಭಾಸ್ಕರ್ ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಜಿಲ್ಲಾ ಉಸ್ತುವಾರಿ ಸಚಿವ ಡಾ.ಎಚ್.ಸಿ. ಮಹದೇವಪ್ಪ ಅವರ ಗಮನಕ್ಕೆ ತಂದು ನಿವೇಶನ ಕೊಡಿಸುವ ಭರವಸೆ ನೀಡಿದರು.**

ಮೊದಲನೇ ದಿನ 6173 ವಿದ್ಯಾರ್ಥಿಗಳು ಹಾಜರು

# ಚಾ.ನಗರ ಜಿಲ್ಲೆಯಾದ್ಯಂತ ಸುಗಮವಾಗಿ ನಡೆದ ಪಿಯುಸಿ ಪರೀಕ್ಷೆ

ಚಾಮರಾಜನಗರ, ಜಿಲ್ಲೆಯಾದ್ಯಂತ ಶನಿವಾರ ಆರಂಭ ಗೊಂಡಿರು ದ್ವಿತೀಯ ಪಿಯುಸಿ ಪರೀಕ್ಷೆಯಯಲ್ಲಿ ಮೊದ ಲನೇ ದಿನ 6173 ವಿದ್ಯಾರ್ಥಿಗಳು ಪರೀಕ್ಷಾ ಕೇಂದ್ರಗಳಿಗೆ ಹಾಜರಾಗಿ ಪರೀಕ್ಷೆ ಬರೆದರು. ಚಾಮರಾಜನಗರ ಸೇರಿದಂತೆ ಜಿಲ್ಲೆಯ ಕೊಳ್ಳೇಗಾಲ, ಗುಂಡ್ಲುಪೇಟೆ, ಹನೂರು, ಯಳಂದೂರು ತಾಲ್ಲೂಕು ವ್ಯಾಪ್ತಿಯಲ್ಲಿ 17 ಪರೀಕ್ಷಾ ಕೇಂದ್ರಗಳನ್ನು ತೆರೆಯಲಾಗಿತ್ತು. ಬೆಳಗ್ಗೆ ಪರೀಕ್ಷಾ ಕೇಂದ್ರಗಳಿಗೆ ತೆರಳಿ ಪರೀಕ್ಷೆ ಬರೆದರು. ಮೊದಲ ದಿನ ಕನ್ನಡ ಪರೀಕ್ಷೆ ಸುಗಮ ವಾಗಿ ನಡೆಯಿತು.

ಜಿಲ್ಲೆಯಾದ್ಯಂತ 6293 ವಿದ್ಯಾರ್ಥಿಗಳು ಪರೀಕ್ಷೆ ನೋಂದಾಯಿಸಿಕೊಂಡಿದ್ದರು. ಮೊದಲನೇ ದಿನದ ಕನ್ನಡ ವಿಷಯ ಪರೀಕದಷೆಗೆ 6173 ವಿದ್ಯಾರ್ಥಿಗಳು ಹಾಜರಾದರೆ, 120 ವಿದ್ಯಾರ್ಥಿಗಳು ಗೈರಾಗಿದ್ದರು. ಪರೀಕ್ಷೆಗೆ ಹಾಜರಾ



ಗುವ ವಿದ್ಯಾರ್ಥಿಗಳಿಗೆ ನೆರವಾಗುವಂತೆ ರಾಜ್ಯ ರಸ್ತೆ ಸಾರಿಗೆ ಬಸ್ ಗಳಲ್ಲಿ ಉಚಿತವಾಗಿ ಪ್ರಯಾಣಿ ಸಲು ಅವಕಾಶ ಕಲ್ಪಿಸಲಾಗಿತ್ತು. ನಕಲು ನಡೆಯದಂತೆ ಎಚ್ಚರವಹಿ ಸಲು ಪರೀಕ್ಷಾ ಕೇಂದ್ರಗಳಲ್ಲಿ ಸಿಸಿ ಕ್ಯಾಮರಾ ಅಳವಡಿಸಲಾಗಿತ್ತು. ಅಹಿತಕರ ಘಟನೆ ನಡೆದಂತೆ ಪೊಲೀಸ್ ಬಂದ್ ಬಸ್ತ್ ಏರ್ಪಡಿಸಲಾಗಿತ್ತು.

ವಿಚಕ್ಷಣದಳದವರು ಪರೀಕ್ಷಾ ಕೊಠಡಿಗಳಿಗೆ ತೆರಳಿ ವೀಕ್ಷಿಸಿದರು. ಜಿಲ್ಲಾಧಿಕಾರಿ ಶ್ರೀ ರೂಪ, ಪೊಲೀಸ್ ವರಿಷ್ಠಾಧಿಕಾರಿ ಮುತ್ತುರಾಜು ಹಾಗೂ ಪಿಯು ಡಿಡಿ ಗೌರಮ್ಮ ಭೇಟಿ ನೀಡಿ ಪರಿಶೀಲಿಸಿದರು.

### ಪರೀಕ್ಷಾ ಕೇಂದ್ರಕ್ಕೆ ಜಿಲ್ಲಾಧಿಕಾರಿ ಶ್ರೀರೂಪ ಭೇಟಿ

ಚಾಮರಾಜನಗರ, ದ್ವಿತೀಯ ಪಿಯುಸಿ ಪರೀಕ್ಷೆ ಆರಂಭಗೊಂಡಿದ್ದು, ಮೊದಲ ದಿನವಾದ ಇಂದು ಜಿಲ್ಲಾಧಿಕಾರಿ ಶ್ರೀರೂಪ ಅವರು ಪರೀಕ್ಷಾ ಕೇಂದ್ರಗಳಿಗೆ ಭೇಟಿ ನೀಡಿ ಪರಿಶೀಲಿಸಿದರು.

ನಗರದ ಜೆ.ಎಸ್.ಎಸ್. ಮಹಿಳಾ ಪದವಿ ಪೂರ್ವ ಕಾಲೇಜಿನ ಪರೀಕ್ಷಾ ಕೇಂದ್ರಕ್ಕೆ ಭೇಟಿ ನೀಡಿದ ಜಿಲ್ಲಾಧಿಕಾರಿ ಶ್ರೀರೂಪ ಅವರು ಪರೀಕ್ಷೆಗೆ ಹಾಜರಾಗಿರುವ ವಿದ್ಯಾರ್ಥಿಗಳ ಸಂಖ್ಯೆಯ ವಿವರ ಪಡೆದರು. ಪರೀಕ್ಷಾ ಕೇಂದ್ರದಲ್ಲಿ ಪರೀಕ್ಷಾ ಕಾರ್ಯಕ್ಕೆ ನಿಯೋಜಿತರಾಗಿರುವ ಸಿಬ್ಬಂದಿಗಳ ಹಾಜರಾತಿಯನ್ನು ಪರಿಶೀಲಿಸಿದರು.

ಪರೀಕ್ಷಾ ಕೇಂದ್ರದಲ್ಲಿ ಕುಡಿಯುವ ನೀರು, ಇನ್ನಿತರ ಮೂಲ ಸೌಲಭ್ಯಗಳನ್ನು ಕಲ್ಪಿಸಿರುವ ಬಗ್ಗೆ ವೀಕ್ಷಿಸಿದರು. ಸಿಸಿ ಕ್ಯಾಮರಾ ಅಳವಡಿಕೆ ಹಾಗೂ ಇದರ ಕಾರ್ಯನಿರ್ವಹಣೆ ಬಗ್ಗೆ ಜಿಲ್ಲಾಧಿಕಾರಿಗಳು ಪರಿಶೀಲನೆ ನಡೆಸಿದರು. ಪರೀಕ್ಷಾ ಕೇಂದ್ರದಲ್ಲಿ



ಆರೋಗ್ಯ ಇಲಾಖೆ, ಪೊಲೀಸ್ ಸಿಬ್ಬಂದಿ ನಿಯೋಜನೆ ಬಗ್ಗೆಯೂ ಪರಿಶೀಲಿಸಿ ವಿವರ ಪಡೆದುಕೊಂಡರು. ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಮೋನಾ ರೋತ್ ಅವರು ಪರೀಕ್ಷಾ ಸಂಬಂಧ ಜಿಲ್ಲಾ ಪಂಚಾಯತ್‌ನಲ್ಲಿ ಸ್ಥಾಪಿಸಿರುವ ವೆಬ್‌ಕಾಸ್ಟಿಂಗ್ ಕಾರ್ಯವೈಖರಿಯನ್ನು ಪರಿಶೀಲಿಸಿದರು. ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಮುತ್ತುರಾಜು ಅವರು ಸಹ ಪರೀಕ್ಷಾ ಕೇಂದ್ರಗಳಿಗೆ ಭೇಟಿ ನೀಡಿದರು. ಪದವಿಪೂರ್ವ ಶಿಕ್ಷಣ ಇಲಾಖೆಯ ಉಪನಿರ್ದೇಶಕರಾದ ಪುಟ್ಟಗೌರಮ್ಮ, ನಗರದ ಬಾಲಕರ ಸರ್ಕಾರಿ ಪದವಿ ಪೂರ್ವ ಕಾಲೇಜು, ಜೆ.ಎಸ್.ಎಸ್ ಮಹಿಳಾ ಪದವಿಪೂರ್ವ ಕಾಲೇಜು, ಬಾಲಕಿಯರ ಸರ್ಕಾರಿ ಪದವಿಪೂರ್ವ ಕಾಲೇಜು ಪರೀಕ್ಷಾ ಕೇಂದ್ರಗಳಿಗೆ ಭೇಟಿ ನೀಡಿ ಪರಿಶೀಲಿಸಿದರು. ಮೊದಲ ದಿನವಾದ ಇಂದು ಕನ್ನಡ ವಿಷಯ ಪರೀಕ್ಷೆ ಸುಗಮವಾಗಿ ನಡೆದಿದೆ. ಒಟ್ಟು 6293 ವಿದ್ಯಾರ್ಥಿಗಳು ಪರೀಕ್ಷೆಗೆ ನೊಂದಾಯಿಸಿದ್ದು, ಇವರಲ್ಲಿ 6173 ವಿದ್ಯಾರ್ಥಿಗಳು ಪರೀಕ್ಷೆಗೆ ಹಾಜರಾಗಿದ್ದಾರೆ. 120 ವಿದ್ಯಾರ್ಥಿಗಳು ಗೈರುಹಾಜರಾಗಿದ್ದಾರೆ ಎಂದು ಪದವಿಪೂರ್ವ ಶಿಕ್ಷಣ ಇಲಾಖೆಯ ಉಪನಿರ್ದೇಶಕರಾದ ಪುಟ್ಟಗೌರಮ್ಮ ಅವರು ಮಾಹಿತಿ ನೀಡಿದ್ದಾರೆ.

# ಜಿಲ್ಲಾಮಟ್ಟದ ಉದ್ಯೋಗ ಮೇಳ: ಅಭ್ಯರ್ಥಿಗಳಿಗೆ ನೇಮಕಾತಿ ಪತ್ರ ವಿತರಣೆ

ಚಾಮರಾಜನಗರ, ಜಿಲ್ಲಾ ಪಂಚಾಯತ್, ಸಂಜೀವಿನಿ-ಕರ್ನಾಟಕ ಗ್ರಾಮೀಣ ಜೀವನೋಪಾಯ ಸಂವರ್ಧನಾ ಸಂಸ್ಥೆ, ಇನ್ನಿತರ ಇಲಾಖೆ, ನಿಗಮ ಆಶ್ರಯದಲ್ಲಿ ದೀನ್ ದಯಾಳ್ ಉಪಾಧ್ಯಾಯ ಗ್ರಾಮೀಣ ಕೌಶಲ್ಯ ಯೋಜನೆಯಡಿ ಜಿಲ್ಲಾ ಕೇಂದ್ರದಲ್ಲಿಂದು ಆಯೋಜಿಸಲಾಗಿದ್ದ ಜಿಲ್ಲಾ ಮಟ್ಟದ ಉದ್ಯೋಗ ಮೇಳದಲ್ಲಿ ಉದ್ಯೋಗಕ್ಕೆ ಆಯ್ಕೆಯಾದ ಅಭ್ಯರ್ಥಿಗಳಿಗೆ ಲೋಕಸಭಾ ಸದಸ್ಯ ಸುನೀಲ್ ಬೋಸ್ ಅವರು ಉದ್ಯೋಗ ನೇಮಕಾತಿ ಪತ್ರ ವಿತರಿಸಿದರು.

ನಗರದ ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿಂದು ಲೋಕಸಭಾ ಸದಸ್ಯರಾದ ಸುನೀಲ್ ಬೋಸ್ ಅವರು ಉದ್ಯೋಗ ಮೇಳದಲ್ಲಿ ಪಾಲ್ಗೊಂಡು ಸ್ಥಳದಲ್ಲಿಯೇ ಉದ್ಯೋಗಕ್ಕೆ ಆಯ್ಕೆಗೊಂಡ ಅಭ್ಯರ್ಥಿಗಳಿಗೆ ಉದ್ಯೋಗ ನೇಮಕ ಪತ್ರ ನೀಡಿ ಶುಭ ಹಾರೈಸಿದರು.

ಜಿಲ್ಲಾ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷ ಹೆಚ್.ವಿ. ಚಂದ್ರು, ಚೂಡಾ ಅಧ್ಯಕ್ಷರಾದ ಮಹಮ್ಮದ್ ಅಸ್ಗರ್ ಮುನ್ನಾ, ಜಿಲ್ಲಾಧಿಕಾರಿ ಶ್ರೀರೂಪ, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಮೋನಾ ರೋತ್, ಹೆಚ್ಚುವರಿ ಜಿಲ್ಲಾಧಿಕಾರಿ ಟಿ. ಜವರೇಗೌಡ, ಹೆಚ್ಚುವರಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಎಂ.ಎನ್. ಶಶಿಧರ್, ಉಪವಿಭಾಗಾಧಿಕಾರಿ ದಿನೇಶ್ ಕುಮಾರ್ ಮೀನಾ, ಜಿಲ್ಲಾ ಪಂಚಾಯತ್



ಉಪ ಕಾರ್ಯದರ್ಶಿ ಶೃತಿ. ಡಿ.ಸಿ, ಗ್ಯಾರಂಟಿ ಯೋಜನೆಯ ತಾಲೂಕು ಅಧ್ಯಕ್ಷ ಸೋಮೇಶ್ವರ, ಇತರರು ಈ ಸಂದರ್ಭದಲ್ಲಿ ಹಾಜರಿದ್ದರು. ಇಂದು ನಡೆದ ಉದ್ಯೋಗ ಮೇಳಕ್ಕೆ ಆನ್ ಲೈನ್ ನಲ್ಲಿ 668, ಆಫ್ ಲೈನ್ ನಲ್ಲಿ 602 ಅಭ್ಯರ್ಥಿಗಳು ಸೇರಿದಂತೆ ಒಟ್ಟು 1290 ಅಭ್ಯರ್ಥಿಗಳು ನೊಂದಣಿಯಾಗಿ ದ್ದರು. ಇವರಲ್ಲಿ 495 ಪುರುಷರು, 790 ಮಹಿಳೆಯರು ಸೇರಿದ್ದಾರೆ. ಉದ್ಯೋಗ ಮೇಳದಲಿ 101 ಉದ್ಯೋಗದಾತ ಕಂಪನಿಗಳು ಭಾಗವಹಿಸಿದ್ದವು. 85 ಪುರುಷರು, 108 ಮಹಿಳೆಯರು ಸೇರಿದಂತೆ ಒಟ್ಟು 193 ಅಭ್ಯರ್ಥಿಗಳು ಸ್ಥಳದಲ್ಲಿಯೇ ಉದ್ಯೋಗಕ್ಕೆ ಆಯ್ಕೆಯಾಗಿದ್ದಾರೆ.

190 ಪುರುಷರು, 290 ಮಹಿಳೆಯರು ಸೇರಿದಂತೆ ಒಟ್ಟು 480 ಅಭ್ಯರ್ಥಿಗಳು ಉದ್ಯೋಗಕ್ಕಾಗಿ 2ನೇ ಹಂತದ (ಶಾರ್ಟ್ ಲಿಸ್ಟ್) ಸಂದರ್ಶನಕ್ಕೆ ಆಯ್ಕೆಯಾಗಿದ್ದಾರೆ. ಜಿಲ್ಲಾಮಟ್ಟದ ಉದ್ಯೋಗ ಮೇಳವನ್ನು ಜಿಲ್ಲಾ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷ ಹೆಚ್.ವಿ. ಚಂದ್ರು ಉದ್ಘಾಟಿಸಿದರು. ನಂತರ ಮಾತನಾಡಿದ ಅವರು ಸ್ಥಳೀಯ ನಿರುದ್ಯೋಗಿ ಯುವಜನರು ಸ್ವಾವಲಂಬಿ ಬದುಕು ಕಟ್ಟಿಕೊಳ್ಳಬೇಕೆಂಬ ಉದ್ದೇಶದಿಂದ ಆಯೋಜಿಸಲಾಗುವ ಉದ್ಯೋಗ ಮೇಳದಂತಹ ಅವಕಾಶವನ್ನು ಸದ್ಬಳಕೆ ಮಾಡಿಕೊಳ್ಳಬೇಕು ಎಂದು ಸಲಹೆ ಮಾಡಿದರು. ಪ್ರತಿ ಯೊಬ್ಬರು ಸರ್ಕಾರಿ ಉದ್ಯೋಗ ಪಡೆಯಲು ಸಾಧ್ಯವಾ ಗುವುದಿಲ್ಲ. ಖಾಸಗಿ ಕ್ಷೇತ್ರಗಳಲ್ಲೂ ಸಾಕಷ್ಟು ಉತ್ತಮ ಉದ್ಯೋಗಗಳು ಇವೆ.

### ಕಳೆದ ಬಾರಿ 500ಕ್ಕೂ ಹೆಚ್ಚು ಜನರಿಗೆ ಉದ್ಯೋಗ

**ಅಧ್ಯಕ್ಷತೆ ವಹಿಸಿ ಮಾತನಾಡಿದ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಕ ಅಧಿಕಾರಿ ಮೋನಾ ರೋತ್ ಯುವ ಜನರಿಗೆ ಉದ್ಯೋಗ ಪಡೆಯಲು ನೆರವಾಗುವ ಉದ್ದೇಶದಿಂದ ಕಳೆದ ವರ್ಷವು ಉದ್ಯೋಗ ಮೇಳ ಆಯೋಜಿಸಲಾಗಿತ್ತು. ಅಂದಿನ ಉದ್ಯೋಗ ಮೇಳದಲ್ಲಿ 500ಕ್ಕೂ ಹೆಚ್ಚು ಜನರಿಗೆ ಉದ್ಯೋಗ ಲಭಿಸಿತ್ತು. ಈ ಬಾರಿ 100ಕ್ಕೂ ಹೆಚ್ಚು ಕಂಪನಿಗಳು ಉದ್ಯೋಗ ಮೇಳದಲ್ಲಿ ಪಾಲ್ಗೊಂಡಿವೆ. ಕಳೆದ ಬಾರಿಗಿಂತಲೂ ಹೆಚ್ಚು ಅಭ್ಯರ್ಥಿಗಳಿಗೆ ಉದ್ಯೋಗ ಪಡೆಯಲು ಎಲ್ಲ ಅನುಕೂಲಗಳನ್ನು ಕಲ್ಪಿಸಲಾಗಿದೆ ಎಂದರು.**

### ನಿರುದ್ಯೋಗಿಗಳು ಉತ್ತಮ ಭವಿಷ್ಯ ರೂಪಿಸಿಕೊಳ್ಳಿ

**ಚೂಡಾ ಅಧ್ಯಕ್ಷ ಮಹಮ್ಮದ್ ಅಸ್ಗರ್ ಮುನ್ನ ಮಾತನಾಡಿ ಉದ್ಯೋಗ ಮೇಳವನ್ನು ಅಚ್ಚುಕಟ್ಟಾಗಿ ಆಯೋಜಿಸುತ್ತಾ ಬರಲಾಗುತ್ತಿದೆ. ಅರ್ಹರೆಲ್ಲರೂ ಉದ್ಯೋಗವಂತರಾಗಲು ವಿವಿಧ ಕಂಪನಿಗಳನ್ನು ಉದ್ಯೋಗ ಮೇಳದಲ್ಲಿ ಆಹ್ವಾನಿಸಿ ಅವಕಾಶಗಳನ್ನು ಕಲ್ಪಿಸಲಾಗುತ್ತಿದೆ. ಜಿಲ್ಲೆಯ ಯುವ ಜನರು ಇಂತಹ ಉದ್ಯೋಗ ಮೇಳಗಳನ್ನು ಬಳಸಿಕೊಂಡು ಉತ್ತಮ ಭವಿಷ್ಯ ರೂಪಿಸಿಕೊಳ್ಳಬೇಕು ಎಂದು ತಿಳಿಸಿದರು.**

ಅರ್ಹತೆಕ್ಕನುಗುಣವಾಗಿ ಉದ್ಯೋಗ ಪಡೆಯಲು ನೆರವಾಗಬೇಕೆಂಬ ಉದ್ದೇಶದಿಂದ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಇನ್ನಿತರ ಇಲಾಖೆಗಳು ಸ್ಥಳೀಯವಾಗಿ ಉದ್ಯೋಗ ಮೇಳವನ್ನು ಏರ್ಪಡಿಸುತ್ತಿವೆ. ಇಂತಹ ಅವಕಾಶವನ್ನು ಯುವಜನರು ಬಳಸಿಕೊಳ್ಳಬೇಕು ಎಂದು ತಿಳಿಸಿದರು.

ಹೆಚ್ಚುವರಿ ಜಿಲ್ಲಾಧಿಕಾರಿ ಟಿ. ಜವರೇಗೌಡ, ಜಿಲ್ಲಾ ಪಂಚಾಯತ್ ಉಪ ಕಾರ್ಯದರ್ಶಿ ಶೃತಿ. ಡಿ.ಸಿ, ಜಿಲ್ಲಾ ಉದ್ಯೋಗಾಧಿಕಾರಿ ಮಹಮ್ಮದ್ ಅಕ್ಬರ್ ಉದ್ಘಾಟನಾ ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

---

**ಮಾ. 1ರಂದು ಕರ್ನಾಟಕ ಪೊಲೀಸ್ ರನ್ ಅಭಿಯಾನದಡಿ ಬೃಹತ್ ಮ್ಯಾರಾಥಾನ್ ಸ್ಪರ್ಧೆ**

## ವಿಜೇತರಿಗೆ ಸೈಕಲ್, ನಗದು ಬಹುಮಾನ

ಚಾಮರಾಜನಗರ, ಜಿಲ್ಲಾ ಪೊಲೀಸ್ ವತಿಯಿಂದ ಕರ್ನಾಟಕ ಪೊಲೀಸ್ ರನ್ ಅಭಿಯಾನದಡಿ ಸೈಬರ್ ಅಪರಾಧಗಳ ಕುರಿತು ಅರಿವು ಮೂಡಿಸುವ ಸಂಬಂಧ ಬೃಹತ್ ಮಟ್ಟದ 5 ಕಿ.ಮೀ. ಮ್ಯಾರಾಥಾನ್ ಸ್ಪರ್ಧೆಯನ್ನು ಮಾರ್ಚ್ 1ರಂದು ಬೆಳಿಗ್ಗೆ 6 ಗಂಟೆಗೆ ನಗರದ ಜಿಲ್ಲಾ ಪೊಲೀಸ್ ಕವಾಯತು ಮೈದಾನದಲ್ಲಿ ಆಯೋಜಿಸಲಾಗಿದೆ.

ನಮ್ಮ ಪೊಲೀಸ್-ನಮ್ಮ ಹೆಮ್ಮೆ, ಎಲ್ಲರಿಗೂ ಫಿಟ್ನೆಸ್-ಮಾದಕ ಮುಕ್ತ ಕರ್ನಾಟಕ ಘೋಷಣೆಯೊಂದಿಗೆ ಮ್ಯಾರಾಥಾನ್ ನಡೆಯಲಿದೆ. ನಗರದ ಜಿಲ್ಲಾ ಪೊಲೀಸ್ ಕಚೇರಿ ಕವಾಯತು ಮೈದಾನದಿಂದ ಆರಂಭವಾಗುವ ಮ್ಯಾರಾಥಾನ್ ಬಿ. ರಾಚಯ್ಯ ಜೋಡಿರಸ್ತೆ-ಭುವನೇಶ್ವರಿ ವೃತ್ತ-ಸಂತೇಮರಹಳ್ಳಿ ವೃತ್ತ-ಪಾಲಿಟೆಕ್ನಿಕ್ ಕಾಲೇಜು (ಯೂ ಟರ್ನ್) ನಿಂದ ಪುನಹ- ಸಂತೇಮರಹಳ್ಳಿ ವೃತ್ತ-ಭುವನೇಶ್ವರಿ ವೃತ್ತ-ಜೋಡಿರಸ್ತೆ ಮಾರ್ಗವಾಗಿ ವಾಪಸ್ಸು ಬಂದು ಜಿಲ್ಲಾ ಪೊಲೀಸ್ ಕವಾಯತು ಮೈದಾನದಲ್ಲಿ ಮುಕ್ತಾಯಗೊಳ್ಳಲಿದೆ.

ಮ್ಯಾರಾಥಾನ್‌ನಲ್ಲಿ ಜಿಲ್ಲೆಯ ಎಲ್ಲಾ ಸಾರ್ವಜನಿಕರು, ವಿದ್ಯಾರ್ಥಿಗಳು, ಸಂಘ ಸಂಸ್ಥೆಗಳು ಮುಕ್ತವಾಗಿ ಬಾಗವಹಿಸಲು ಅವಕಾಶ ಕಲ್ಪಿಸಲಾಗಿದ್ದು, ವಿಜೇತರಿಗೆ ಬಹುಮಾನ ನೀಡಲಾಗುತ್ತಿದೆ. ಪುರುಷರಿಗೆ ಹಾಗೂ ಮಹಿಳೆಯರಿಗೆ ಪ್ರತ್ಯೇಕವಾಗಿ ಬಹುಮಾನ ನಿಗದಿ ಮಾಡಲಾಗಿದೆ. ಪ್ರಥಮ ಬಹುಮಾನವಾಗಿ ಸೈಕಲ್, ದ್ವಿತೀಯ ಬಹುಮಾನವಾಗಿ 5 ಸಾವಿರ ರೂ. ನಗದು, ತೃತೀಯ ಬಹುಮಾನವಾಗಿ 3 ಸಾವಿರ ರೂ. ನಗದು ಬಹುಮಾನ ನೀಡಲಾಗುತ್ತದೆ. ಜೊತೆಗೆ ವಿಜೇತರಿಗೆ ಪದಕ, ಪ್ರಮಾಣಪತ್ರವನ್ನು ವಿತರಿಸಲಾಗುತ್ತದೆ. ಮೊದಲು ಗುರಿ ತಲುಪುವ 10 ಓಟಗಾರರಿಗೆ ಪದಕ, ಪ್ರಮಾಣಪತ್ರವನ್ನು ನೀಡಲಾಗುತ್ತದೆ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಮುತ್ತುರಾಜು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

---

# ಸಂಸದರಿಂದ ಕುಂದು ಕೊರತೆ ಆಲಿಕೆ

## ಜನಸ್ಪಂದನಾ ಸಭೆಯಲ್ಲಿ ಸುನೀಲ್ ಬೋಸ್ ಕ್ರಮ ವಹಿಸಲು ಸೂಚನೆ

ಚಾಮರಾಜನಗರ, ಸಂಸತ್ ಸದಸ್ಯ ಸುನೀಲ್ ಬೋಸ್ ಚಾಮರಾಜನಗರ ತಾಲೂಕಿಗೆ ಸಂಬಂಧಿಸಿದಂತೆ ಜನಸ್ಪಂದನ ಸಭೆ ನಡೆಸಿ ಸಾರ್ವಜನಿಕರ ಕುಂದು ಕೊರತೆಗಳನ್ನು ಆಲಿಸಿ ಸಂಬಂಧಪಟ್ಟ ಅಧಿಕಾರಿಗಳಿಗೆ ಸಮಸ್ಯೆಗಳನ್ನು ಪರಿಹರಿಸಲು ಸೂಚಿಸಿದರು.

ನಗರದ ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿ ಇಂದು ನಡೆದ ಜನಸ್ಪಂದನ ಸಭೆಯಲ್ಲಿ ತಾಲೂಕಿನ ವಿವಿಧ ಗ್ರಾಮಗಳಿಂದ ಜನತೆ ಗುಂಪಾಗಿ ಬಂದು ತಮ್ಮ ಊರಿನ ಸಮಸ್ಯೆಗಳನ್ನು ನಿವೇದಿಸಿಕೊಂಡರು. ಇನ್ನೂ ಹಲವರು ತಮ್ಮ ಅಹವಾಲುಗಳನ್ನು ಲೋಕಸಭಾ ಸದಸ್ಯರ ಮುಂದೆ ಹೇಳಿಕೊಂಡರು.

ಬಿ.ಆರ್. ಹಿಲ್ಸ್ ರಸ್ತೆಯ ಮಾರ್ಗವಾಗಿ ಕೋಡಿಮೋಳೆ ಗ್ರಾಮವು ಇದ್ದು ಇಲ್ಲಿ ಹಲವು ವರ್ಷಗಳಿಂದ ಚರಂಡಿ ಹದಗೆಟ್ಟಿದೆ. ಮಳೆ ಬಂದ ಸಂದರ್ಭದಲ್ಲಿ ಶಾಲಾ ಆವರಣಕ್ಕೆ ನೀರು ನುಗ್ಗುತ್ತಿದ್ದು, ರಸ್ತೆಯ ಎರಡು ಬದಿಯಲ್ಲಿ ಚರಂಡಿ ನಿರ್ಮಿಸಿಕೊಡುವಂತೆ ಅಲ್ಲಿನ ಸ್ಥಳೀಯರು ಮನವಿ ಮಾಡಿಕೊಂಡರು. ಸಭೆಯಲ್ಲಿಯೇ ಇದ್ದ ಅಧಿಕಾರಿಗಳನ್ನು ಕರೆಸಿ ಇದಕ್ಕೆ ಕೂಡಲೇ ಕ್ರಮವಹಿಸುವಂತೆ ಸಂಸದರು ನಿರ್ದೇಶನ



ನೀಡಿದರು.

ಪಣ್ಯದಹುಂಡಿ ಹತ್ತಿರ ಬಸ್ ನಿಲ್ದಾಣ, ಅಂಡರ್ ಪಾಸ್ ರಸ್ತೆ, ಸೇರಿದಂತೆ ಇನ್ನಿತರ ಸೌಲಭ್ಯಗಳಿಗೆ ಸ್ಥಳೀಯ ಹಾಗೂ ಸುತ್ತಮುತ್ತಲ ಗ್ರಾಮಸ್ಥರು ಮನವಿ ಸಲ್ಲಿಸಿದರು. ಹೊಂಡರಬಾಳು ಸುತ್ತಮುತ್ತಲ ಪ್ರದೇಶದಲ್ಲಿ ಆನೆ ಹಾವಳಿ ಹೆಚ್ಚಾಗಿದ್ದು, ಹಾಕಲಾಗಿರುವ ಬೇಲಿಯನ್ನು ಹಾಳು ಮಾಡುತ್ತಿದೆ. ಇದಕ್ಕೆ ಕಡಿವಾಣ ಹಾಕಬೇಕು ಎಂದು ಸ್ಥಳೀಯರು ಮನವಿ ಮಾಡಿದರು. ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗಗಳ ಹಿತರಕ್ಷಣಾ ಸಮಿತಿ ಸಭೆಯನ್ನು ಒಂದು ವರ್ಷದಿಂದ ಕರೆಯ ಲಾಗಿಲ್ಲ. ಈ ಬಗ್ಗೆ ಅಧಿಕಾರಿಗಳಿಗೆ ಸೂಚಿಸಬೇಕು ಎಂದು ಸಭೆಯಲ್ಲಿ ಮುಖಂಡರು ಗಮನಕ್ಕೆ ತಂದರು. ಸಿಂಧುತ್ವ ಪ್ರಮಾಣ ಪತ್ರ ವಿಳಂಬವಾಗುತ್ತಿರುವ ಬಗ್ಗೆಯೂ ಪ್ರಸ್ತಾಪಿಸಲಾಯಿತು.

ಹೆಚ್.ಡಿ. ಫಾರೆಸ್ಟ್ ಸಂಬಂಧ ಇರುವ ಸಮಸ್ಯೆಗಳನ್ನು ಪರಿಹರಿಸಿ ಕೊಡಬೇಕೆಂದು ಸಹ ಸಭೆಯಲ್ಲಿ ಗಮನ ಸೆಳೆಯಲಾಯಿತು. ಪ್ರತಿ ಸಮಸ್ಯೆಯನ್ನು ವಿವರವಾಗಿ ಆಲಿಸಿದ ಸಂಸದರು ಕೂಡಲೇ ಆಗಬೇಕಿರುವ ಕೆಲಸಗಳಿಗೆ ವಿಳಂಬ ಮಾಡದಂತೆ ಕಟ್ಟುನಿಟ್ಟಿನ ಸೂಚನೆ ನೀಡಿದರು.

ಸಭೆಯಲ್ಲಿ ವಿವಿಧ ಸಮಸ್ಯೆಗಳಿಗೆ ಸಂಬಂಧಿಸಿದಂತೆ ಹಲವು ಅರ್ಜಿಗಳು ಸಲ್ಲಿಕೆಯಾದವು. ಹಲವರು ನೇರವಾಗಿ ಸಂಸದರ ಮುಂದೆ ಸಮಸ್ಯೆ ಹೇಳಿಕೊಂಡು ಪರಿಹರಿಸಲು ಮನವಿ ಮಾಡಿಕೊಂಡರು.

ಕಾಡಾ ಅಧ್ಯಕ್ಷರಾದ ಪಿ. ಮರಿಸ್ವಾಮಿ, ಜಿಲ್ಲಾ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷರಾದ ಹೆಚ್.ವಿ. ಚಂದ್ರು, ಚೂಡಾ ಅಧ್ಯಕ್ಷರಾದ ಮಹಮ್ಮದ್ ಅಸ್ಗರ್ ಮುನ್ನಾ, ಜಿಲ್ಲಾಧಿಕಾರಿ ಶ್ರೀರೂಪ, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಮೋನಾ ರೋತ್, ಹೆಚ್ಚುವರಿ ಜಿಲ್ಲಾಧಿಕಾರಿ ಟಿ. ಜವರೇಗೌಡ, ಹೆಚ್ಚುವರಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಎಂ.ಎನ್. ಶಶಿಧರ್, ಉಪವಿಭಾಗಾಧಿಕಾರಿ ದಿನೇಶ್ ಕುಮಾರ್ ಮೀನಾ, ಜಿಲ್ಲಾ ಪಂಚಾಯತ್ ಉಪ ಕಾರ್ಯದರ್ಶಿ ಶೃತಿ. ಡಿ.ಸಿ, ಗ್ಯಾರಂಟಿ ಯೋಜನೆಯ ತಾಲೂಕು ಅಧ್ಯಕ್ಷರಾದ ಸೋಮೇಶ್ವರ, ಇತರರು ಹಾಜರಿದ್ದರು..

### ಹೆದ್ದಾರಿಯಲ್ಲಿ ರಸ್ತೆ ಡುಬ್ಬ ನಿರ್ಮಿಸಿ

**ಮಾದಾಪುರ ಗ್ರಾಮದ ಹೆದ್ದಾರಿಯಲ್ಲಿ ರಸ್ತೆ ಡುಬ್ಬ ನಿರ್ಮಿಸಬೇಕು. ಇಲ್ಲಿ ವಾಹನಗಳು ಅತಿ ವೇಗವಾಗಿ ಸಂಚರಿಸುತ್ತಿರುವುದರಿಂದ ವಿದ್ಯಾರ್ಥಿಗಳು ಹಾಗೂ ಗ್ರಾಮಸ್ಥರಿಗೆ ಓಡಾಡಲು ತೊಂದರೆಯಾಗುತ್ತಿದೆ ಎಂದು ಗ್ರಾಮಸ್ಥರು ಮಾಡಿಕೊಂಡ ಮನವಿಗೆ ಲೋಕಸಭಾ ಸದಸ್ಯರು ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ಅಧಿಕಾರಿಗಳು ಇದಕ್ಕೆ ಅಗತ್ಯವಿರುವ ಮುಂದಿನ ಕೆಲಸಕ್ಕೆ ಕ್ರಮವಹಿಸುವಂತೆ ಸೂಚಿಸಿದರು.**

### ಜಲಾಶಯಗಳ ಉದ್ಯಾನವನ ಅಭಿವೃದ್ದಿಗೆ ಒತ್ತಾಯ

**ತಾಲೂಕಿನ ಸುವರ್ಣಾವತಿ ಹಾಗೂ ಚಿಕ್ಕಹೊಳೆ ಜಲಾಶಯಗಳ ಮುಂಗಭಾಗದಲ್ಲಿರುವ ಉದ್ಯಾನವನ ಸಾಕಷ್ಟು ವರ್ಷಗಳಿಂದ ಪಾಳು ಬಿದಿದ್ದೆ. ಇಲ್ಲಿಗೆ ಸಾಕಷ್ಟು ಜನರು ಭೇಟಿ ಕೊಡುತ್ತಿದ್ದಾರೆ. ಪ್ರವಾಸೋದ್ಯಮ ದೃಷ್ಟಿಯಿಂದ ಇದನ್ನು ಅಭಿವೃದ್ದಿಪಡಿಸಿದರೆ ಉತ್ತಮ ಪ್ರವಾಸಿ ತಾಣವಾಗುತ್ತದೆ ಎಂಬ ಸಲಹೆ ಜನಸ್ಪಂದನ ಸಭೆಯಲ್ಲಿ ವ್ಯಕ್ತವಾಯಿತು. ಈ ಸಂಬಂಧ ಪ್ರತಿಕ್ರಿಯಿಸಿದ ಲೋಕಸಭಾ ಸದಸ್ಯರಾದ ಸುನೀಲ್ ಬೋಸ್ ಈ ಕುರಿತು ಅಧಿಕಾರಿಗಳೊಂದಿಗೆ ವಿವರವಾಗಿ ಚರ್ಚಿಸಿ ಅಭಿವೃದ್ಧಿ ಸಂಬಂಧ ಮುಂದಿನ ಕ್ರಮ ತೆಗೆದುಕೊಳ್ಳಲಾಗುವುದು ಎಂದು ತಿಳಿಸಿದರು.**

---

## ಕ್ರಿಕೆಟ್ ಆಟದಿಂದ ಆರೋಗ್ಯ ವೃದ್ಧಿ: ಎಂ.ರಾಮಚಂದ್ರ

**ಶ್ರೀಮಹರ್ಷಿ ವಾಲ್ಮೀಕಿ ಕ್ರಿಕೆಟ್ ಕಪ್‌ಗೆ ಚಾಲನೆ**




ಚಾಮರಾಜನಗರ, ಕ್ರಿಕೆಟ್ ಆಟವು ಆರೋಗ್ಯಕರ ಜೀವನಶೈಲಿಯನ್ನು ಕಾಪಾಡಿಕೊಳ್ಳಲು ಉತ್ತಮ ಹಾದಿಯಾಗಿದೆ ಎಂದು ಕೇಂದ್ರ ಪರಿಹಾರ ಸಮಿತಿ ಮಾಜಿ ಅಧ್ಯಕ್ಷ ಎಂ.ರಾಮಚಂದ್ರ ಹೇಳಿದರು.

ನಗರದ ಮಹದೇಶ್ವರ ಬಡಾವಣೆಯಲ್ಲಿ ಫ್ರೆಂಡ್ ಬಾಯ್ ವತಿಯಿಂದ ನಡೆದ ಶ್ರೀಮಹರ್ಷಿ ವಾಲ್ಮೀಕಿ ಕ್ರಿಕೆಟ್ ಕಪ್ ಪಂದ್ಯಾವಳಿಗೆ ಚಾಲನೆ ನೀಡಿ ಮಾತನಾಡಿದರು. ಕ್ರೀಡೆಯಿಂದ ದೈಹಿಕ, ಮಾನಸಿಕ ಆರೋಗ್ಯ ಸುಧಾರಿಸುತ್ತದೆ. ಒಳ ಡವನ್ನು ಕಡಿಮೆ ಮಾಡಲು ಸಹಾಯ ಮಾಡುತ್ತದೆ ಎಂದರು.

ನಾವು ಶಾಲೆಯಲ್ಲಿ ಓದುವ ಸಂದರ್ಭದಲ್ಲಿ ಗ್ರಾಮೀಣ ಕ್ರೀಡೆಗಳಾದ ಕಬ್ಬಡಿ, ಖೋಖೋ, ವಾಲಿಬಾಲ್, ಪುಟ್‌ಬಾಲ್, ಬ್ಯಾಡ್ಮಿಂಟನ್ ಸೇರಿದಂತೆ ಅನೇಕ ಕ್ರೀಡೆಗಳು ಪ್ರಸಿದ್ಧಿ ಪಡೆದಿದ್ದವು. ಆದರೆ ಇಂದು ಕ್ರಿಕೆಟ್ ಪ್ರತಿಯೊಂದು ಹಳ್ಳಿಯಲ್ಲೂ ಮನೆಮನೆಯಲ್ಲೂ ಕ್ರಿಕೆಟ್ ಆಟಗಾರರು ಇದ್ದಾರೆ. ಕ್ರಿಕೆಟ್‌ನ್ನು ಬಹಳ ಅಹಕ್ತಿಯಿಂದ ಆಟವಾಡುತ್ತಿದ್ದಾರೆ. ಪಂದ್ಯಾವಳಿಯಲ್ಲಿ ಭಾಗವಹಿಸಿರುವ ಎಲ್ಲ ಕ್ರೀಡಾಪಟುಗಳಿಗೂ ಒಳ್ಳೆಯದಾಗಲಿ ಎಂದು ಶುಭಕೋರಿದರು. ಮುಖಂಡ ಪು.ಶ್ರೀನಿವಾಸನಾಯಕ ಮಾತನಾಡಿ, ಕ್ರೀಡೆಯಲ್ಲಿ ಸೋಲು-ಗೆಲುವು ಮುಖ್ಯವಲ್ಲ. ಭಾಗವಹಿಸುವುದು ಮುಖ್ಯವಾಗಿದೆ ಎಂದು ಕ್ರಿಕೆಟ್ ಆಟಗಾರರಿಗೆ ಶುಭ ಕೋರಿದರು. ಕಾರ್ಯಕ್ರಮದಲ್ಲಿ ಕ್ರಿಕೆಟ್ ಆಟಗಾರರು ಭಾಗವಹಿಸಿದ್ದರು.

### ಮಾ.2ಕ್ಕೆ ಚಲನಚಿತ್ರ ಗೀತೆ




ಮೈಸೂರು: ಸೌಂಡ್ ಎನ್ ರಿಥಂ ವತಿಯಿಂದ ಮಾ.2ರಂದು ಸಂಜೆ.6 ರಿಂದ ರಾತ್ರಿ.9.30ರವರೆಗೆ ಬಾಳೊಂದು ಭಾವಗೀತೆ-6 ಶೀರ್ಶಿಕೆಯಡಿಯಲ್ಲಿ ಚಲನಚಿತ್ರ ಗೀತಗಾಯನ ನಡೆಯಲಿದೆ ಎಂದು ಸಂಸ್ಥೆಯ ಅಧ್ಯಕ್ಷ ರವಿಶಂಕರ್ ತಿಳಿಸಿದರು.

ನಗರದ ಜಿಲ್ಲಾ ಪತ್ರಕರ್ತ ಭವನದ ಸುದ್ಧಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅಂದು ಚಲನಚಿತ್ರ ಗೀತೆಗಳ ಗಾಯನವನ್ನು ನಗರದ ನಂಜುಮಳಿಗೆಯಲ್ಲಿರುವ ನಾದ ಬ್ರಹ್ಮ ಸಭಾದಲ್ಲಿ ನಡೆಯಲಿದೆ. ಬಾಳೊಂದು ಭಾವಗೀತೆ-6 ಶೀರ್ಶಿಕೆಯಡಿ ಸಂಗೀತ ನಾದಬ್ರಹ್ಮ ಡಾ.ಹಂಸಲೇಖ ಅವರ ರಾಗ ಸಂಯೋಜನೆಯಲ್ಲಿ ಮೂಡಿ ಬಂದಿರುವ ಚಲನಚಿತ್ರ ಗೀತೆಗಳನ್ನು ಪ್ರಸ್ತುತಪಡಿಸಲಾಗುತ್ತದೆ ಎಂದರು. 10 ಗಾಯಕರಿಂದ ಒಟ್ಟು 24 ಗಾಡುಗಳನ್ನು ಹಾಡಲಿದ್ದು, ಯಾವುದೇ ಸಭಾ ಕಾರ್ಯಕ್ರಮಗಳಿರುವುದಿಲ್ಲ. ಉಚಿತ ಪ್ರವೇಶವಿದ್ದು, ಸಂಗೀತ ಪ್ರೇಕ್ಷಕರು, ಸಾರ್ವಜನಿಕರು ಆಗಮಿಸಬಹುದು. ಹೆಚ್ಚಿನ ಸಂಖ್ಯೆಯಲ್ಲಿ ಜನರು ಆಗಮಿಸಬೇಕೆಂದು ಕೋರಿದರು. ರುದ್ರೇಶ್, ಮುತ್ತುರಾಜ್, ಡಾ.ಶಿವಕುಮಾರ್, ರೋಜ ಶಿವಸ್ವಾಮಿ, ಮಂಜುಳದೇವಿ ಇದ್ದರು.

ವರ್ತಮಾನ
ಜಾಹಿರಾತಿಗೆ ಉತ್ತಮ ಮಾಧ್ಯಮ

---

## ಬಜೆಟ್ ಎಲ್ಲರಿಗೂ ಸಾಮಾಜಿಕ ನ್ಯಾಯ ಸಿಗಲಿ



ಮೈಸೂರು: ಸಿಎಂ ಸಿದ್ದರಾಮಯ್ಯ ದಾಖಲೆ ಎಂಬಂತೆ ಈ ಬಾರಿ ಮಂಡಿಸಲಿರುವ 17 ನೇ ಬಜೆಟ್ ಸರ್ವರಿಗೂ ಸಮಪಾಲು, ಸಾಮಾಜಿಕ ನ್ಯಾಯದ ಅಡಿಯಲ್ಲಿರಲಿ ಎಂದು ಎಸ್‌ಡಿಪಿಐ ರಾಜ್ಯಾಧ್ಯಕ್ಷ ಅಬ್ದುಲ್ ಮಜೀದ್ ಮನವಿ ಮಾಡಿದರು.

ನಗರದಲ್ಲಿ ಸುದ್ದಿಗಾರರೊಡನೆ ಮಾತನಾಡಿ, ಇದುವರೆಗೂ ರಾಜ್ಯದಲ್ಲಿ ಶಿಕ್ಷಣಕ್ಕೆ ಬಜೆಟ್‌ನ ಅತಿ ಕಡಿಮೆ ಶೇಕಡಾಂಶ ನಿಗದಿ ಪಡಿಸಲಾಗುತ್ತಿದೆ. ರಾಷ್ಟ್ರದ ಮಟ್ಟವೇ ಶೇ. 17 ರಷ್ಟಿದ್ದು, ಈ ಬಾರಿ ಅದು ಶೇ. 20 ರಷ್ಟು ಇರಲಿ. ಇದಲ್ಲದೆ, ಭೂಮಿ, ವಸತಿ ಹಕ್ಕು ನೀಡಬೇಕು, ಭೂಹೀನ ಎಸ್‌ಸಿ, ಎಸ್‌ಟಿ, ಓಬಿಸಿ ಮತ್ತು ಅಲ್ಪಸಂಖ್ಯಾತರಿಗೆ ವಸತಿ, ಭೂಮಿ ಹಂಚಿಕೆ ಮಾಡಬೇಕು, ಬೆಂಗಳೂರಿನ ಕೋಗಿಲು, ಥಣಿಸಂದ್ರದಲ್ಲಿ ಬುಲ್ಡೋಜರ್ ದಾಳಿಯಿಂದ ನಿರಾಶ್ರಿತರಾದವರಿಗೆ ಪರ್ಯಾಯ ಮನೆ ಕಲ್ಪಿಸಬೇಕು, ವಸತಿ ಯೋಝನೆ ವಿಸ್ತರಿಸುವ ಮೂಲಕ ಸಹಾಯಧನವನ್ನು ಈಗಿನ 5 ಲಕ್ಷದಿಂದ 7 ಲಕ್ಷಕ್ಕೆ ಏರಿಸಬೇಕು ಎಂದು ಕೂರಿದರು.

ಕಾರ್ಮಿಕ ಕಲ್ಯಾಣಕ್ಕಾಗಿ ಹೆಚ್ಚು ಆದ್ಯತೆ ನೀಡಬೇಕು, ರಾಜ್ಯ ವಿಪತ್ತು ಪರಿಹಾರ ನಿಧಿ ದ್ವಿಗುಣಗೊಳಿಸಬೇಕು, ಯುವನಿಧಿ ಯೋಜನೆ ವಿಸ್ತರಿಸಬೇಕು, ಪ್ರಕೃತಿ ವಿಕೋಪಕ್ಕೆ ಉಂಟಾಗುವ ಬೆಳೆ ನಷ್ಟ ಹೆಕ್ಟೇರ್‌ಗೆ 50 ಸಾವಿರ, ಮನೆ ನಷ್ಟಕ್ಕೆ 5 ಲಕ್ಷ ರೂ. ಪರಿಹಾರ ನೀಡಬೇಕೆಂದು ಮನವಿ ಮಾಡಿದರು. ಜಿಲ್ಲಾಧ್ಯಕ್ಷ ರಫತ್‌ಖಾನ್, ಅಮ್ಜದ್ ಖಾನ್, ಎಸ್. ಸ್ವಾಮಿ, ಶಫಿ ಉಲ್ಲಾ ಇದ್ದರು.

## 2ನೇ ದಿನವೂ ಮುಂದುವರೆದ ಹೋರಾಟ



ಮೈಸೂರು: ನಂಜನಗೂಡು ತಾಲೂಕು ಇಮ್ಮಾವು ಗ್ರಾಮದ ಸರ್ವೆ ನಂ.390 ರಿಂದ 430ರವರೆಗಿನ ಜಮೀನು ಗೇಣಿದಾರರಿಗೆ ಪರಿಹಾರ ಪಾವತಿಸುವಂತೆ ಹಾಗೂ ಕಾನೂನು ಬಾಹಿರವಾಗಿ ಪರಿಹಾರ ಪಡೆದವರ ವಿರುದ್ಧ ಕಾನೂನು ಕ್ರಮಕ್ಕೆ ಆಗ್ರಹಿಸಿ ಕರ್ನಾಟಕ ರಾಜ್ಯ ರೈತ ಸಂಘದ ವತಿಯಿಂದ ಜಿಲ್ಲಾಧಿಕಾರಿ ಕಚೇರಿ ಎದುರು ಕೈಗೊಂಡಿರುವ ಅನಿರ್ದಿಷ್ಟಾವಧಿ ಧರಣಿ ಎರಡನೇ ದಿನಕ್ಕೆ ಕಾಲಿಟ್ಟಿದೆ.

ಸರ್ಕಾರ ಹಾಗೂ ಕೆಐಎಡಿಬಿ(ಕರ್ನಾಟಕ ಕೈಗಾರಿಕಾ ಪ್ರದೇಶ ಅಭಿವೃದ್ಧಿ ಮಂಡಳಿ) ವಿರುದ್ಧ ದಿಕ್ಕಾರ ಕೂಗುತ್ತಾ ಆಕ್ರೋಶ ಹೊರಹಾಕುತ್ತಿರುವ ಪ್ರತಿಭಟನಾಕಾರರು, ಚಿತ್ರನಗರಿಗಾಗಿ ಭೂಮಿ ಕಳೆದುಕೊಂಡು ಅನ್ಯಾಯಕ್ಕೊಳಗಾದ ನೈಜ ರೈತರಿಗೆ ನ್ಯಾಯ ಒದಗಸಬೇಕು ಹಾಗೂ ಗಾಲ್ಫ್ ಕಂಪನಿಗೆ ಭೂಮಿ ಕಳೆದುಕೊಂಡ ಕೋಚನಹಳ್ಳಿ ರೈತರಿಗೆ ಉದ್ಯೋಗ ಮತ್ತು ನಿವೇಶನ ನೀಡುವಂತೆ ಆಗ್ರಹಿಸಿದರು. ಕರ್ನಾಟಕ ರಾಜ್ಯ ರೈತ ಸಂಘದ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಪಿ.ಮರಂಕಯ್ಯ, ಯುವ ಘಟಕದ ಅಧ್ಯಕ್ಷ ಪ್ರೇಮ್‌ರಾಜ್, ತಾಲೂಕು ಯುವ ಘಟಕದ ಅಧ್ಯಕ್ಷ ಮೈದನಹಳ್ಳಿ ಮಹೇಶ್, ಕೋಚನಹಳ್ಳಿ ಮತ್ತು ಇಮ್ಮಾವು ರೈತರು ಹಾಗೂ ರೈತ ಮಹಿಳೆಯರು ಭಾಗವಹಿಸಿದ್ದರು.

---

**ಅವೈಜ್ಞಾನಿಕ ಒಳಮೀಸಲಾತಿ ಜಾರಿ ಮಾಡಿದರೆ ಉಗ್ರ ಹೋರಾಟ: ಆಯ್ಯನಪುರ ಶಿವಕುಮಾರ್**

# ಒಳ ಮೀಸಲಾತಿ ಬೇಡ, ಹಳೆಯ ಮೀಸಲಾತಿ ಮುಂದುವರಿಸಲು ಆಗ್ರಹ

ಚಾಮರಾಜನಗರ, ಪರಿಶಿಷ್ಟ ಜಾತಿಗೆ ಒಳಮೀಸಲಾತಿ ಬೇಡ, ಹಳೆಯ ಮೀಸಲಾತಿ ಮುಂದುವರಿಸಬೇಕು ಎಂದು ಬಲಗೈ ಸಮುದಾಯಗಳ ಒಕ್ಕೂಟ ಹಾಗೂ ಚಾಮರಾಜನಗರ ತಾಲೂಕು ಆದಿಕರ್ನಾಟಕ ಅಭಿವೃದ್ಧಿ ಸಂಘದ ಆಸ್ತಿ ಸಂರಕ್ಷಣಾ ಸಮಿತಿ ಅಧ್ಯಕ್ಷ ಅಯ್ಯನಪುರಶಿವಕುಮಾರ್ ಆಗ್ರಹಿಸಿದರು.

ನಗರದ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಭವನದಲ್ಲಿ ಕರೆದಿದ್ದ ಪತ್ರಿಕಾಗೋಷ್ಠಿಯಲ್ಲಿ ಅವರು ಮಾತನಾಡಿದರು. ಈಗ ಒಳ ಮೀಸಲಾತಿ ಬೇಕಾಗಿಲ್ಲ ಹಳೆಯ ಮೀಸಲಾತಿ ಮುಂದುವರಿಸುವಂತೆ ರಾಜ್ಯಾದ್ಯಂತ ಕೂಗು ಬರುತ್ತಿದೆ. ಒಳಮೀಸಲಾತಿಯ ಬಿ ಮತ್ತು ಸಿ ಗುಂಪಿನ ವರ್ಗದಲ್ಲಿರುವ ಸಮುದಾಯದವರು ಒಳ ಮೀಸಲಾತಿ ಬೇಡ, ಹಳೆಯ ಮೀಸಲಾತಿ ಮುಂದುವರಿಸುವಂತೆ ಒತ್ತಾಯ ಮಾಡುತ್ತಿವೆ. ಸರ್ಕಾರವು ಅದೇ ತೀರ್ಮಾನ ತೆಗೆದುಕೊಂಡಿದೆ. ಆದರೆ ಮಂತ್ರಿಗಳಾದ ಕೆ. ಎಚ್. ಮುನಿಯಪ್ಪ, ಆರ್.ಬಿ.ತಿಮ್ಮಾಪುರ್ ಪತ್ರಿಕಾ ಹೇಳಿಕೆಗಳಲ್ಲಿ ಗೊಂದಲ ಉಂಟು ಮಾಡುತ್ತಿದ್ದಾರೆ. ಅದರಲ್ಲಿ ಒಳಮೀಸಲಾತಿ ಮಾಡುತ್ತೇನೆ ಎಂದು ಹೇಳಿಕೆ ನೀಡುತ್ತಿದ್ದಾರೆ. ಅದರಲ್ಲಿ ಒಳಮೀಸಲಾತಿ ಮಾಡಲು ಅವಕಾಶವೇ ಇಲ್ಲ ಒಂದು ಹೇಳಿ ಸರ್ಕಾರ ಅವರ ಒತ್ತಡಕ್ಕೆ ಮಣಿದು ಶೇ. 15ರಲ್ಲಿ ಒಳ ಮೀಸಲಾತಿ ಮಾಡಿದರೆ ರಾಜ್ಯಾದ್ಯಂತ ಒಳಮೀಸಲಾತಿಯ ಬಿ ಮತ್ತು ಸಿ ಗುಂಪಿನ



ಸಮುದಾಯಗಳ ಉಗ್ರ ಹೋರಾಟವನ್ನು ಸರ್ಕಾರ ಎದುರಿಸಬೇಕಾಗುತ್ತದೆ ಎಂದು ಎಚ್ಚರಿಸಿದರು.

ಮೀಸಲಾತಿ ಮಾಡುವ ಸಂದರ್ಭದಲ್ಲಿ ಮಾಡಿರುವ ಬಿಂದುಗಳು ಒಳಮೀಸಲಾತಿಗೆ ಅನ್ವಯಿಸಲ್ಲ. 100 ಬಿಂದುಗಳಿಗೆ ಶೇ. 15 ರಷ್ಟು ಎಸ್‌ಸಿ. ಸಮುದಾಯಗಳಿತ್ತು. ಶೇ. 3 ರಷ್ಟು ಎಸ್‌ಟಿ ಸಮುದಾಯಗಿತ್ತು ಶೇ 32. ಓಬಿಸಿ ಇತ್ತು 1 ಬಿಂದುಗೆ ಎಸ್ ಸಿ ಸಮುದಾಯಕ್ಕೆ ನೀಡಿದರು. 1991ರಲ್ಲಿ 9 ಬಿಂದು ಗೆ ಹಾಕಿದರು. ಆಗಲು ನಾವು ತಾಕರಾರು ಮಾಡಿಲ್ಲ. ಏಕೆಂದರೆ ಎಲ್ಲರಿಗೂ ಸಮನವಾಗಿ ಹಂಚಿಕೆಯಾಗಲಿ ಎಂದು ಒಳಮೀಸಲಾತಿ ಮಾಡಿ ಎಬಿಸಿ ವರ್ಗೀಕರಣ ಮಾಡಿದರೆ ಅದು ನಮಗೆ ಅನ್ವಯಿಸಲ್ಲ. ಆದರಿಂದ ಅನ್ಯಾಯವಾಗಿದೆ. ಪರಿಶಿಷ್ಟ ಜಾತಿಯ ಎ ವರ್ಗ ಕ್ಕೆ ಒಂದು ಉದ್ಯೋಗ ಕೊಟ್ಟಾಗ ಎರಡನೆಯದು ಎಸ್‌ಟಿ ಗೆ ಬರುತ್ತದೆ. ನಂತರ ಕೆಟಗರಿ 1, 2. ಆನಂತರ ಸಾಮಾನ್ಯ ವರ್ಗ ಬರುತ್ತದೆ. 9ನೆಯದು ನಮಗೆ ಬಂದಾಗ ಬಲಗೈ ಸಮುದಾಯ ಎಲ್ಲ ಸಮುದಾಯಗಳಿಂತ ಉನ್ನತ ಸಮುದಾಯವಾದಂತೆ ಆಗುತ್ತದೆ. ಇದರಿಂದ ನಮಗೆ ಅನ್ಯಾಯ ಆಗುತ್ತದೆ ಎಂದರು. ಬೆಳಗಾವಿ ಚಳಿಗಾಲದ ಅಧಿವೇಶನದಲ್ಲಿ ಒಳಮೀಸಲಾತಿ ಚರ್ಚೆಗೆ ಅವಕಾಶ ಕೊಡಬೇಕಾಗಿತ್ತು. ಪರಿಶಿಷ್ಠ ಜಾತಿಯ 101 ಸಮುದಾಯಗಳಿಗೆ ಸೇರಿದ ಒಳ ಮೀಸಲಾತಿ ಬಿಲ್ ಕೂಲಂಕುಷವಾಗಿ ಚರ್ಚೆಗೆ ಇಟ್ಟು ನಂತರ ಬಿಲ್ ಪಾಸ್ ಮಾಡಬೇಕಿತ್ತು. ಅ ಬಿಲ್ ಪಾಸ್ ಮಾಡುವ ಸಂದರ್ಭದಲ್ಲಿ ಯಾರಿಗೆ ಅನ್ಯಾಯವಾಗುತ್ತದೆ. ಎಂಬ ಅರಿವು ಇಲ್ಲ. ಒಳ ಮೀಸಲಾತಿಯಲ್ಲಿ ಅನ್ಯಾಯವಾಗಿರುವುದು ಸರ್ಕಾರಕ್ಕೂ ಮನದಟ್ಟಾಗಿದೆ ಆದರಿಂದ ಒಳ ಮೀಸಲಾತಿ ಬೇಕಾಗಿಲ್ಲ. ಸುಪ್ರೀಂಕೋರ್ಟ್ ನಲ್ಲಿ ನಿರ್ಧಾರವಾದ ಮೇಲೆ ಪರಿಶಿಷ್ಟ ಜಾತಿಯ 101 ಸಮುದಾಯಗಳ ಚಿಂತಕರನ್ನು ಆಹ್ವಾನಿಸಿ ಕೂಲಂಕುಷವಾಗಿ ಚರ್ಚಿಸಿ ಯಾವ ಸಮುದಾಯಕ್ಕೂ ಅನ್ಯಾಯವಾಗದ ರೀತಿಯಲ್ಲಿ ಜಾರಿಗೊಳಿಸಿಬೇಕು ಎಂದು ಒತ್ತಾಯಿಸಿದರು. ಈಗಿನ ಒಳಮೀಸಲಾತಿಯಿಂದ ಉದ್ಯೋಗ, ಶಿಕ್ಷಣದಲ್ಲಿ ಬಲಗೈ ಸಮುದಾಯಕ್ಕೆ ಅನ್ಯಾಯವಾಗಿದೆ. ಬೆಂಗಳೂರು ಬಿಬಿಎಂಸಿ ಹಾಗೂ ಧಾರಾವಾಡ ವಿಶ್ವವಿದ್ಯಾಲಯ ನೇರನೇಮಕಾತಿಯಲ್ಲಿ ಎಲ್ಲ ಹುದ್ದೆಗಳು ಒಳಮೀಸಲಾತಿಯ ಎ ಗುಂಪಿಗೆ ಸಿಕ್ಕಿದ್ದು, ಬಿ ಮತ್ತು ಸಿ ಗುಂಪಿನ ಸಮುದಾಯಗಳಿಗೆ ಅನ್ಯಾಯವಾಗಿದೆ. ಆದರಿಂದ ಹಳೆ ಮೀಸಲಾತಿಯನ್ನು ಮುಂದುವರಿಸಿ ಪರಿಶಿಷ್ಟ ಜಾತಿಯ 101 ಸಮದಾಯಗಳಿಗೂ ನ್ಯಾಯ ಒದಗಿಸಿಕೊಡಬೇಕು ಎಂದು ಆಗ್ರಹಿಸಿದರು. ಪತ್ರಿಕಾಗೋಷ್ಠಿಯಲ್ಲಿ ತಾಲೂಕು ಗ್ಯಾರಂಟಿ ಯೋಜನೆಗಳ ಸಮಿತಿ ಅಧ್ಯಕ್ಷ ನಲ್ಲೂರು ಸೋಮೇಶ್ವರ, ನಗರಸಭಾ ಮಾಜಿ ಸದಸ್ಯ ಆರ್.ಪಿ.ನಂಜುಂಡಸ್ವಾಮಿ, ಮುಖಂಡರಾದ ನಾಗಯ್ಯ, ಸೋಮಣ್ಣ, ಗೋವಿಂದರಾಜು, ನಲ್ಲೂರು ಮಹಾದೇವಸ್ವಾಮಿ, ಜನಾರ್ದನ ಹಾಜರಿದ್ದರು.

## ಕ್ರೀಡೆಯಲ್ಲಿ ಸೋಲು-ಗೆಲುವಿಗಿಂತ ಭಾಗವಹಿಸುವಿಕೆ ಮುಖ್ಯ

**ಪ್ರೊ. ಎಂ.ಆರ್. ಗಂಗಾಧರ್**



ಚಾಮರಾಜನಗರ: ವಿದ್ಯಾರ್ಥಿಗಳ ದೈಹಿಕ, ಮಾನಸಿಕ ಬೆಳವಣಿಗೆಗೆ ಸಹಕಾರಿಯಾಗಿರುವ ಕ್ರೀಡೆಯಲ್ಲಿ ಸೋಲು-ಗೆಲುವು ಮುಖ್ಯವಲ್ಲ, ಭಾಗವಹಿಸುವಿಕೆ ಪ್ರಮುಖವಾಗಿದೆ ಎಂದು ಚಾಮರಾಜನಗರ ವಿಶ್ವವಿದ್ಯಾನಿಲಯದ ಕುಲಪತಿಗಳಾದ ಪ್ರೊ. ಎಂ.ಆರ್. ಗಂಗಾಧರ್ ತಿಳಿಸಿದರು.

ನಗರದ ಡಾ. ಬಿ.ಆರ್. ಅಂಬೇಡ್ಕರ್ ಕ್ರೀಡಾಂಗಣದಲ್ಲಿಂದು ಚಾಮರಾಜನಗರ ವಿಶ್ವವಿದ್ಯಾನಿಲಯ ದೈಹಿಕ ಶಿಕ್ಷಣ ವಿಭಾಗ ಹಾಗೂ ನಗರದ ಸರ್ಕಾರಿ ಪ್ರಥಮ ದರ್ಜೆ ಮಹಿಳಾ ಕಾಲೇಜು ಸಹಯೋಗದಲ್ಲಿ ಆಯೋಜಿಸಲಾಗಿದ್ದ ಅಂತರ ಕಾಲೇಜುಗಳ ಪುರುಷರ ಕ್ರೀಡಾಕೂಟ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಚಾಮರಾಜನಗರ ವಿಶ್ವವಿದ್ಯಾಲಯವು 2023ರಲ್ಲಿ ಆರಂಭವಾಗಿದ್ದು, ಅಂದಿನಿಂದ ಈವರೆಗೂ ವಿದ್ಯಾರ್ಥಿಗಳ ಶೈಕ್ಷಣಿಕ ಬೆಳವಣಿಗೆಗೆ ಪೂರಕ ವಾತಾವರಣ ಕಲ್ಪಿಸಿದೆ. ಕ್ರೀಡಾ ಚಟುವಟಿಕೆಗಳಿಗೆ ಹೆಚ್ಚಿನ ಆದ್ಯತೆ ನೀಡಿ ವಿಶ್ವವಿದ್ಯಾನಿಲಯ ವ್ಯಾಪ್ತಿಯ ಸಾಕಷ್ಟು ವಿದ್ಯಾರ್ಥಿಗಳು ರಾಜ್ಯ ಹಾಗೂ ರಾಷ್ಟ್ರಮಟ್ಟದ ಕ್ರೀಡೆಗಳಲ್ಲಿ ಸಾಧನೆಗೈಯ್ಯಲು ನೆರವಾಗಿದೆ. ವಿದ್ಯಾರ್ಥಿಗಳು ಈ ಅವಕಾಶವನ್ನು ಸದ್ಬಳಕೆ ಮಾಡಿಕೊಂಡು ಹೆಚ್ಚಾಗಿ ಕ್ರೀಡೆಯಲ್ಲಿ ಪಾಲ್ಗೊಳ್ಳಬೇಕು ಎಂದರು. ಮಾನಸಿಕ ಹಾಗೂ ದೈಹಿಕ ಸುಸ್ಥಿರತೆ ಕಾಪಾಡಿಕೊಳ್ಳಲು ವಿದ್ಯಾರ್ಥಿಗಳಿಗೆ ವಿದ್ಯಾಭ್ಯಾಸದ ಜೊತೆಗೆ ಕ್ರೀಡೆಯೂ ಅತೀ ಮುಖ್ಯವಾಗಿದೆ. ಚಾಮರಾಜನಗರ ವಿಶ್ವವಿದ್ಯಾನಿಲಯಕ್ಕೆ ಕ್ರೀಡೆಗಳು ನಡೆಸಲು ಸುಸಜ್ಜಿತ ಮೈದಾನದ ಅವಶ್ಯವಿದೆ. ಮುಂದಿನ ದಿನಗಳಲ್ಲಿ ವಿಶ್ವವಿದ್ಯಾನಿಲಯ ಕ್ಯಾಂಪಸ್‌ನಲ್ಲಿಯೇ ಉತ್ತಮ ಕ್ರೀಡಾ ಮೈದಾನ ನಿರ್ಮಾಣವಾಗಲಿದೆ. ಅಲ್ಲದೆ ನಶಿಸಿ ಹೋಗುತ್ತಿರುವ ಕ್ರೀಡೆಗಳನ್ನು ಉಳಿಸಿ ಬೆಳೆಸಲು ವಿಶ್ವವಿದ್ಯಾನಿಲಯ ಒತ್ತು ನೀಡಲಿದೆ. ಆ ಮೂಲಕ ಜಿಲ್ಲೆಯಿಂದ ಹೆಚ್ಚಿನ ಕ್ರೀಡಾಪಟುಗಳನ್ನು ದೇಶಕ್ಕೆ ಕೊಡುಗೆಯಾಗಿ ನೀಡಬೇಕಿದೆ ಎಂದು ತಿಳಿಸಿದರು.

ಕಾರ್ಯಕ್ರಮ ಉದ್ಘಾಟಿಸಿದ ಹಾವೇರಿ ವಿಶ್ವವಿದ್ಯಾನಿಲಯ ಕುಲಪತಿ ಪ್ರೊ. ಸುರೇಶ್ ಎಚ್. ಜಂಗಮಶೆಟ್ಟಿ ಮಾತನಾಡಿ ವಿದ್ಯಾರ್ಥಿ ಜೀವನದಲ್ಲಿ ಕ್ರೀಡೆಗಳು ವಿದ್ಯಾರ್ಥಿಗಳಿಗೆ ಆತ್ಮಬಲ ತುಂಬಲಿವೆ. ಕ್ರೀಡೆಯಿಂದ ವಿದ್ಯಾರ್ಥಿಗಳಿಗೆ ಶಾರೀರಿಕ ಸುಸ್ಥಿತಿಯೊಂದಿಗೆ ಕ್ರೀಡಾಸ್ಫೂರ್ತಿ ಮೆರೆಯುವ ಮನೋಭಾವ ಮೂಡಲಿದೆ. ಕ್ರೀಡೆಗಳಿಂದ ಉತ್ತಮ ಆರೋಗ್ಯವನ್ನು ಹೊಂದಬಹುದಾಗಿದೆ ಎಂದರು.

ಕ್ರೀಡಾ ಧ್ವಜಾರೋಹಣ ನೆರವೇರಿಸಿದ ಕೊಡಗು ವಿಶ್ವವಿದ್ಯಾನಿಲಯ ಕುಲಪತಿಗಳಾದ ಪ್ರೊ. ಆಶೋಕ ಸಂ ಆಲೂರ ಅವರು ಮಾತನಾಡಿ ಕ್ರೀಡೆ ವಿದ್ಯಾರ್ಥಿಗಳಿಗೆ ಕೇವಲ ಭೌತಿಕ ಶಕ್ತಿ ವೃದ್ಧಿಸುವುದಲ್ಲ ಹಾಗೂ ಕೇವಲ ಆಟವಲ್ಲ, ಬದಲಾಗಿ ಧೈರ್ಯ, ಏಕತಾ ಮನೋಭಾವ, ಹೋರಾಟ ಸಾಮರ್ಥ್ಯವನ್ನು ಹೆಚ್ಚಿಸಲಿದೆ. ಒತ್ತಡ ನಿವಾರಣೆಗೂ ಕ್ರೀಡೆ ಸಹಕಾರಿಯಾಗಿದೆ. ಎಲ್ಲಾ ಬಗೆಯ ವೈಪರಿತ್ಯಗಳನ್ನು ದಾಟಿ ಕ್ರೀಡೆ ವಿದ್ಯಾರ್ಥಿಗಳನ್ನು ಒಂದುಗೂಡಿಸಲಿದೆ ಎಂದರೇ ತಪ್ಪಾಗಲಾರದು ಎಂದು ತಿಳಿಸಿದರು. ಚಾಮರಾಜನಗರ ವಿಶ್ವವಿದ್ಯಾನಿಲಯದ ದೈಹಿಕ ಶಿಕ್ಷಣ ವಿಭಾಗದ ನಿರ್ದೇಶಕರಾದ ಡಾ. ಶಾಂತರಾಜು ಅವರು ಕಾರ್ಯಕ್ರಮದಲ್ಲಿ ಸ್ವಾಗತಿಸಿ, ಕಾರ್ಯಕ್ರಮದ ಉದ್ದೇಶ ಕುರಿತು ಪ್ರಾಸ್ತಾವಿಕವಾಗಿ ಮಾತನಾಡಿದರು. ಸರ್ಕಾರಿ ಪ್ರಥಮ ದರ್ಜೆ ಮಹಿಳಾ ಕಾಲೇಜಿನ ಪ್ರಾಂಶುಪಾಲರಾದ ಪ್ರೊ. ಬಿ.ಎಸ್. ಮಹದೇವಸ್ವಾಮಿ, ಚಾಮರಾಜನಗರ ವಿಶ್ವವಿದ್ಯಾನಿಲಯದ ಕುಲಸಚಿವರಾದ (ಮೌಲ್ಯಮಾಪನ) ಪ್ರೊ. ಕೆ.ಎಂ. ಮಹದೇವನ್, ಕ್ರೀಡಾ ಸಲಹಾ ಸಮಿತಿ ಸದಸ್ಯರಾದ ಜಿ. ಬಂಗಾರು, ಇತರರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು. ವೇದಿಕೆ ಕಾರ್ಯಕ್ರಮಕ್ಕೂ ಮೊದಲು ಜಿಲ್ಲೆಯ ಎಲ್ಲಾ ತಾಲೂಕುಗಳಿಂದ ಕ್ರೀಡಾಕೂಟದಲ್ಲಿ ಪಾಲ್ಗೊಳ್ಳಲು ಆಗಮಿಸಿದ್ದ ವಿವಿಧ ಕಾಲೇಜುಗಳ ಕ್ರೀಡಾತಂಡಗಳ ನಾಯಕರನ್ನು ಗಣ್ಯರು ಪರಿಚಯ ಮಾಡಿಕೊಂಡರು. ಕ್ರೀಡಾಜ್ಯೋತಿ ಸ್ವೀಕರಿಸಿದರು.

## ಬಿಜೆಪಿ ಗೆಲ್ಲಿಸಲು ಒಗ್ಗಟ್ಟಿನಿಂದ ಶ್ರಮಿಸು



ಗುಂಡ್ಲುಪೇಟೆ: ಮುಂಬರುವ ಸ್ಥಳೀಯ ಚುನಾವಣೆಗಳಲ್ಲಿ ಬಿಜೆಪಿ ಅಭ್ಯರ್ಥಿಗಳನ್ನು ಗೆಲ್ಲಿಸಲು ಒಗ್ಗಟ್ಟಿನಿಂದ ಶ್ರಮಿಸಬೇಕು ಎಂದು ಬಿಜೆಪಿ ಮಂಡಲ ಅಧ್ಯಕ್ಷ ಸಿ.ಮಹದೇವಪ್ರಸಾದ್ ಮನವಿ ಮಾಡಿದರು.

ಪಟ್ಟಣದಲ್ಲಿ ನಡೆದ ಬಿಜೆಪಿ ಯುವ ಮೋರ್ಚಾ ಪದಾಧಿಕಾರಿಗಳ ಸಭೆಯಲ್ಲಿ ಮಾತನಾಡಿದ ಅವರು, ಗ್ಯಾರಂಟಿ ಯೋಜನೆಗಳ ಹೆಸರಿನಲ್ಲಿ ಅಧಿಕಾರಕ್ಕೆ ಬಂದ ಕಾಂಗ್ರೆಸ್ ಪಕ್ಷದಿಂದ ಯಾವುದೇ ಅಭಿವೃದ್ಧಿ ಕಾಣದೇ ಸ್ಥಳೀನರು ಬೇಸರಗೊಂಡಿದ್ದಾರೆ. ಬಲಗೈನಲ್ಲಿ ಕೊಟ್ಟಿದ್ದನ್ನು ಎಡಗೈನಲ್ಲಿ ಕಸಿದುಕೊಳ್ಳುತ್ತಿದ್ದಾರೆ. ಹಾಗೂ ದಿನಕ್ಕೊಂದು ಗೊಂದಲದ ಬಗ್ಗೆ ಜನರಲ್ಲಿ ಬೇಸರವಿದೆ. ಈ ಕಾರಣಕ್ಕೆ ಕಾಂಗ್ರೆಸ್ ಪಕ್ಷವನ್ನು ಸೋಲಿಸಲು ಜನರು ತೀರ್ಮಾನಿಸಿದ್ದಾರೆ. ಆದ್ದರಿಂದ ಕಾಂಗ್ರೆಸ್ ಸರ್ಕಾರದ ನಿರ್ಲಕ್ಷದ ಬಗ್ಗೆ ಜನರಿಗೆ ತಿಳಿಸುವ ಕೆಲಸ ಮಾಡಿ ಎಂದು ಕಿವಿಮಾತು ಹೇಳಿದರು. ಈ ಸಂದರ್ಭದಲ್ಲಿ ಯುವ ಮೋರ್ಚಾ ಅಧ್ಯಕ್ಷ ಶಿವಪ್ರಸಾದ್, ಯುವ ಮೋರ್ಚಾ ರಾಜ್ಯ ಸಂಚಾಲಕ ಪ್ರಣಯ್, ಪ್ರಧಾನ ಕಾರ್ಯದರ್ಶಿ ಸುನೀಲ್ ಮೂಡ್ಲು, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಮೂಡ್ನಾಕೂಡು ಪ್ರಕಾಶ್, ಯುವ ಮೋರ್ಚಾ ಜಿಲ್ಲಾಧ್ಯಕ್ಷ ಸೂರ್ಯಕುಮಾರ್, ಪ್ರಧಾನ ಕಾರ್ಯದರ್ಶಿ ಕಿರಣ್, ಮುಖಂಡರಾದ ಆನಂದ ಭಗೀರಥ, ಮಹೇಂದ್ರ, ಗುರು, ಸಾಗರ್, ನಾಗೇಂದ್ರ(ಪಾನು), ಮಹೇಶ್, ಮನೋಜ್, ಲೋಕೇಶ್ ಇತರರು ಹಾಜರಿದ್ದರು.

## ಮಾ.7ರಿಂದ ಕಬ್ಬಡಿ ಪಂದ್ಯಾವಳಿ



ಮೈಸೂರು: ಮೈಸೂರು ನಗರ ಬಿಜೆಪಿ ಯುವ ಮೋರ್ಚಾ ಅಧ್ಯಕ್ಷ ಆರ್.ರಾಕೇಶ್‌ಗೌಡ ಹುಟ್ಟು ಹಬ್ಬದ ಅಂಗವಾಗಿ ಮಾ.7ಮತ್ತು 8ರಂದು ರಾಜ್ಯಮಟ್ಟದ 30 ಯಾರ್ಡ್ ಹೊನಲು ಬೆಳಕಿನ ಕ್ರಿಕೆಟ್ ಪಂದ್ಯಾವಳಿಯನ್ನು ಆಯೋಜಿಸಲಾಗಿದೆ ಎಂದು ಅಭಿಮಾನಿ ಬಳಗದ ಅಧ್ಯಕ್ಷ ಲೋಹಿತ್ ತಿಳಿಸಿದರು.

ನಗರದ ಪತ್ರಕರ್ತ ಭವನದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅಟಲ್ ಜೀ ಪ್ರೀಮಿಯರ್ ಲೀಗ್ ಕನ್ನೇಗೌಡನ ಟೈಗರ್ಸ್ ವತಿಯಿಂದ, ಎರಡು ದಿನಗಳ ಕ್ರಿಕೆಟ್ ಪಂದ್ಯಾವಳಿ ಹಮ್ಮಿಕೊಳ್ಳಲಾಗಿದೆ. ನಗರದ ಕುವೆಂಪುನಗರದ ಆದಿಚುಂಚನಗಿರಿ ರಸ್ತೆಯಲ್ಲಿ ರುವ ಶ್ರೀ ಮರುಳೇಶ್ವರ ದೇವಸ್ಥಾನದ ಮೈದಾನದಲ್ಲಿ ಪಂದ್ಯಾವಳಿಗಳು ನಡೆಯಲಿವೆ. ಪಂದ್ಯಾವಳಿಯಲ್ಲಿ ವಿಜೇತ ತಂಡಗಳಿಗೆ ನಗದು ಹಾಗೂ ಟ್ರೋಫಿ ಬಹುಮಾನವಿದ್ದು, ಪ್ರಥಮ ಸ್ಥಾನಕ್ಕೆ 75.ಸಾವಿರ ರೂ., ದ್ವಿತೀಯ 50. ಸಾವಿರ ರೂ., ತೃತೀಯ ಬಹುಮಾನವಾಗಿ 25.ಸಾವಿರ ರೂ. ಗಳನ್ನು ನೀಡಲಾಗುವುದು. ಪ್ರತಿ ತಂಡಕ್ಕೆ 5000ರೂ. ಪ್ರವೇಶ ಶುಲ್ಕವಿರುತ್ತದೆ. ನಿಯಮ ಮತ್ತು ಸೂಚನೆಗಳಿದ್ದು, 5 ಓವರ್ ಪಂದ್ಯಾವಳಿಯಾಗಿದ್ದು, ಒಬ್ಬರಿಗೆ 2 ಓವರ್, ಇನ್ನುಳಿದ ಮೂರು ಓವರ್‌ಗಳು ತಲಾ ಒಬ್ಬರಿಗೆ ಒಂದು , ಒಂದು ತಂಡಕ್ಕೆ 7 ಆಟಗಾರರಿಗೆ ಅವಕಾಶ, ತಂಡ ತಡವಾಗಿ ಪಂದ್ಯಾವಳಿಗೆ ತಡವಾಗಿ ಆಗಮಿಸಿದಲ್ಲಿ ವಾಕ್ ಓವರ್ ನೀಡಲಾಗುತ್ತದೆ. 20ಕ್ಕೂ ಹೆಚ್ಚು ತಂಡಗಳು ಭಾಗವಸುವ ನಿರೀಕ್ಷೆಗಳಿವೆ. ಹೆಚ್ಚಿನ ಮಾಹಿತಿಗಾಗಿ. 8095860195, 9880414702 ಸಂಪರ್ಕಿಸಬಹುದು.

ಸುದ್ದಿಗೋಷ್ಠಿಯಲ್ಲಿ ಸಚ್ಚಿನ್, ಮೋಹನ್, ಕಿರಣ್, ಅನಿಲ್, ಪ್ರವೀನ್, ಕಾರ್ತಿಕ್, ರವಿ ಮತ್ತಿತರರಿದ್ದರು.

# ಮಾ.5ರಂದು ಜಿಲ್ಲಾ ಮಟ್ಟದ ಉದ್ಯೋಗ ಮೇಳ

## ರಾಮನಗರ ಶಾಸಕ ಇಕ್ಬಾಲ್ ಹುಸೇನ್ ಮಾಹಿತಿ | ಪೂರ್ವಭಾವಿ ಸಭೆ

ರಾಮನಗರ: ಇದೇ ಮಾ.5ರ ಗುರುವಾರ ಜಿಲ್ಲಾ ಕೇಂದ್ರ ರಾಮನಗರದಲ್ಲಿ ಜಿಲ್ಲಾ ಮಟ್ಟದ ಬೃಹತ್ ಉದ್ಯೋಗ ಮೇಳವನ್ನು ಹಮ್ಮಿಕೊಂಡಿರುವುದಾಗಿ ಶಾಸಕ ಎಚ್.ಎ.ಇಕ್ಬಾಲ್ ಹುಸೇನ್ ತಿಳಿಸಿದರು.

ನಗರದಲ್ಲಿರುವ ಜಿಪಂ ಭವನದ ಮಿನಿ ಸಭಾಂಗಣದಲ್ಲಿ ನಡೆದ ಪೂರ್ವ ಭಾವಿ ಸಭೆಯಲ್ಲಿ ಅವರು ಮಾತನಾಡಿದರು. ರಾಮನಗರದ ಸರ್ಕಾರಿ ಪದವಿ ಕಾಲೇಜಿನಲ್ಲಿ ಉದ್ಯೋಗ ಮೇಳ ನಡೆಯಲಿದೆ. ವ್ಯಾಪಕ ಪ್ರಚಾರ ನೀಡಿ ಹೆಚ್ಚಿನ ಸಂಖ್ಯೆಯ ಉದ್ಯೋಗಾಕಾಂಕ್ಷಿಗಳು ಮೇಳದಲ್ಲಿ ಭಾಗವಹಿಸಿ ಉದ್ಯೋಗ ಪಡೆದುಕೊಳ್ಳಲು ಸಂಬಂಧಿಸಿದ ಇಲಾಖೆಗಳು ಸಹಕಾರ ನೀಡಬೇಕು ಎಂದು ಸೂಚಿಸಿದರು.

ನಿರುದ್ಯೋಗಿಗಳಿಗೆ ಉದ್ಯೋಗ ಒದಗಿಸಿಕೊಡುವ ನಿಟ್ಟಿನಲ್ಲಿ ಉದ್ಯೋಗ ಮೇಳ ಹಮ್ಮಿಕೊಳ್ಳಲಾಗುತ್ತಿದೆ. ಎಲ್ಲಾ ತಾಲೂಕು ಪಂಚಾಯತ್‌ಗಳ ಕಾರ್ಯನಿರ್ವಹಣಾ ಅಧಿಕಾರಿಗಳು ಪಂಚಾಯತ್ ಮಟ್ಟದಲ್ಲಿ ಆಟೋ ಸೇರಿದಂತೆ ವಿವಿಧ ಮಾಧ್ಯಮಗಳ ಮೂಲಕ ವ್ಯಾಪಕ ಪ್ರಚಾರ ಕೈಗೊಳ್ಳಬೇಕು. ಪ್ರತಿ ಮನೆ ಮನೆಗೂ ಈ ಕುರಿತ ಪೋಸ್ಟರ್ ತಲುಪಿಸುವ ವ್ಯವಸ್ಥೆ ಮಾಡಬೇಕು. ಜಿಲ್ಲೆಯ ಎಲ್ಲಾ ಕಾಲೇಜುಗಳಲ್ಲೂ ಈ ಕುರಿತಂತೆ ಪ್ರಚಾರ ನೀಡಿ ಅಭ್ಯರ್ಥಿಗಳು ಅರ್ಜಿ ಸಲ್ಲಿಸಿ, ನೋಂದಾಯಿಸಿಕೊಳ್ಳುವಂತೆ ಮನವೊಲಿಸಬೇಕು. ಶಿಕ್ಷಣ ಇಲಾಖೆ ಅಧಿಕಾರಿಗಳು ಈ ನಿಟ್ಟಿನಲ್ಲಿ ಸೂಕ್ತ ಕ್ರಮಗಳನ್ನು ಕೈಗೊಳ್ಳಬೇಕು ಎಂದು ಹೇಳಿದರು.

**ಆಶಾ, ಅಂಗನವಾಡಿ ಕಾರ್ಯಕರ್ತೆಯರಿಗೂ ಸೂಚನೆ**

ಜಿಲ್ಲೆಯ ಗ್ರಾಮೀಣ ಭಾಗದಲ್ಲಿ ಆಶಾ ಹಾಗೂ ಅಂಗನವಾಡಿ ಕಾರ್ಯಕರ್ತೆಯರು ಮನೆಮನೆಗೆ ತೆರಳಿ ಉದ್ಯೋಗ ಮೇಳದ ಮಾಹಿತಿ ಹಾಗೂ ಪೋಸ್ಟರ್ ತಲುಪಿಸಬೇಕು ಎಂದು ಹೇಳಿದರು.

ಗ್ರೇಟರ್ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾದ ನಟರಾಜ್ ಗಾಣಕಲ್, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಣಾಧಿಕಾರಿ ಅನ್ಮೋಲ್ ಜೈನ್ ಮಾತನಾಡಿದರು.

ಜಿಲ್ಲಾ ಗ್ಯಾರಂಟಿ ಯೋಜನೆ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷರಾದ ಕೆ. ರಾಜು ಅವರು ಮಾತನಾಡಿದರು.

https://docs.google.com/forms/d/e/1FAIpQLSc07MZrMxk3jOe8ggmCSRJe2b67VljqDe3 L05tB8I1OS14Gg/viewform ಈ ಫಾರಂ ಮೂಲಕ ಆಸಕ್ತ ಅಭ್ಯರ್ಥಿಘಳು ತಮ್ಮ ಹೆಸರುಗಳನ್ನು ನೋಂದಾಯಿಸಿಕೊಳ್ಳಬೇಕು ಎಂದರು.



### ಜಿಲ್ಲೆಯಲ್ಲಿ 171 ಕಂಪನಿಗಳು ನೋಂದಣಿ

ಈ ಉದ್ಯೋಗ ಮೇಳಕ್ಕೆ ಈಗಾಗಲೇ ಜಿಲ್ಲೆಯಲ್ಲಿ 171 ಕಂಪನಿಗಳು ನೋಂದಣಿಯಾಗಿವೆ, ಈ ಕಂಪನಿಗಳ ಸಂಖ್ಯೆಯನ್ನು ಹೆಚ್ಚಿಸಲು ಮತ್ತಷ್ಟು ಕ್ರಮ ಕೈಗೊಳ್ಳಲಾಗುತ್ತಿದೆ, ಮೇಳದಲ್ಲಿ ಭಾಗವಹಿಸುವ ಕಂಪನಿಗಳ ಅನುಕೂಲಕ್ಕಾಗಿ ಕಾಲೇಜು ಆವರಣ ಹಾಗೂ ಮೈದಾನದಲ್ಲಿ 200 ಮಳಿಗೆಗಳನ್ನು ತೆರೆಯಲಾಗುವುದು, ಉದ್ಯೋಗಾಕಾಂಕ್ಷಿಗಳ ನೆರವಿಗಾಗಿ ಅಗತ್ಯ ಸಂಖ್ಯೆಯ ಹೆಲ್ಪ್ ಡೆಸ್ಕ್‌ಗಳನ್ನು ತೆರೆಯಲಾಗುವುದು, ಈ ಕೆಲಸದಲ್ಲಿ ಆಸಕ್ತಿ ಇರುವವರನ್ನು ಮಾತ್ರ ಅಲ್ಲಿ ನಿಯೋಜಿಸಬೇಕು. ಕೆಲಸ ಕೇಳಿಕೊಂಡು ಬಂದ ಆಕಾಂಕ್ಷಿಗಳಿಗೆ ಉತ್ತಮ ಮಾಹಿತಿ ಒದಗಿಸಬೇಕು. ಅದೇ ರೀತಿ ಶೌಚಾಲಯಗಳು, ಬೇಸಿಗೆ ಕಾಲವಾಗಿರುವುದರಿಂದ ಕುಡಿಯುವ ನೀರಿನ ವ್ಯವಸ್ಥೆಯನ್ನು ಮಾಡಬೇಕು. ಬೆಳಗಿನ ಉಪಹಾರ ಹಾಗೂ ಮಧ್ಯಾಹ್ನ ಭೋಜನದ ವ್ಯವಸ್ಥೆ ಮಾಡಲಾಗುವುದು. ರಾಮನಗರ ನಗರ ಸಭೆಯಿಂದ ಸ್ವಚ್ಛತಾ ಕಾರ್ಯ ಕೈಗೊಳ್ಳುವಂತೆ ತಿಳಿಸಿದ ಅವರು, ಉದ್ಯೋಗ ಮೇಳ ನಡೆಯುವ ಆವರಣದ ಮಧ್ಯದಲ್ಲಿ ಸಣ್ಣ ವೇದಿಕೆಯೊಂದನ್ನು ನಿರ್ಮಿಸಬೇಕು ಅಲ್ಲಿ ಉದ್ಯೋಗಾಕಾಂಕ್ಷಿಗಳು ಹಾಗೂ ಕಂಪನಿಯವರು ಅಭಿಪ್ರಾಯಗಳನ್ನು ಹೇಳಿಕೊಳ್ಳಲು ಅನುಕೂಲವಾಗಲಿದೆ, ಆರೋಗ್ಯ ಇಲಾಖೆಯಿಂದ ಸ್ಥಳದಲ್ಲಿ ಎರಡು ಆಂಬುಲೆನ್ಸ್‌ಗಳ ವ್ಯವಸ್ಥೆ ಮಾಡಬೇಕು, ಸಂಜೆಗೆ ಲೈಟಿಂಗ್ ವ್ಯವಸ್ಥೆ, ಕಾರ್ಯಕ್ರಮ ಅಚ್ಚುಕಟ್ಟಾಗಿ ನಡೆಯಲು ಆಸನಗಳು ಹಾಗೂ ಟೇಬಲ್‌ಗಳ ವ್ಯವಸ್ಥೆ ಮಾಡಲಾಗುವುದು ಮೇಳದಲ್ಲಿ ನೇರವಾಗಿ ನೇಮಕ ಮಾಡಿಕೊಳ್ಳಬೇಕೆಂದು ಉದ್ಯೋಗಾಸಕ್ತ ಕಂಪನಿಗಳಿಗೆ ಮನವಿ ಮಾಡಲಾಗಿದೆ. ಜಿಲ್ಲೆಯಲ್ಲಿರುವ ಎಲ್ಲಾ ಕೈಗಾರಿಕೆಗಳು ಈ ಮೇಳದಲ್ಲಿ ಭಾಗವಹಿಸಿ ಸ್ಟಾಲ್ ಹಾಕಬೇಕೆಂದು ಕೋರಲಾಗಿದೆ ಎಂದವರು ಹೇಳಿದರು.

### 20 ಸಾವಿರ ಉದ್ಯೋಗಳಿಗೆ ಅವಕಾಶ


**ಡಿಸಿ ಯಶವಂತ್ ವಿ. ಗುರುಕರ್**

ಮಾ.5ರ ಗುರುವಾರ ಬೆಳಿಗ್ಗೆ 9ಗಂಟೆಯಿಂದ ಸಂಜೆ 6ರವರೆಗೆ ಉದ್ಯೋಗ ಮೇಳ ನಡೆಯಲಿದೆ. ಈಗಾಗಲೆ 171 ಕಂಪನಿಗಳು ಮೇಳದಲ್ಲಿ ಭಾಗವಹಿಸಲು ನೋಂದಾಯಿಸಿಕೊಂಡಿವೆ. 200 ಕ್ಕೂ ಹೆಚ್ಚಿನ ಪ್ರತಿಷ್ಠಿತ ಉದ್ಯೋಗದಾತ ಕಂಪನಿಗಳು ಭಾಗವಹಿಸಲಿವೆ, 20,000ಕ್ಕೂ ಹೆಚ್ಚು ಉದ್ಯೋಗಗಳು ಲಭ್ಯವಿರಲಿವೆ. ಎಲ್ಲಾ ರೀತಿಯ ವಿದ್ಯಾರ್ಹತೆಗೆ ತಕ್ಕಂತೆ ಉತ್ಪಾದನಾ ವಲಯ, ಬ್ಯಾಂಕಿಂಗ್ ಕ್ಷೇತ್ರ, ಮಾರಾಟ ವಲಯ, ಮಾಹಿತಿ ತಂತ್ರಜ್ಞಾನ ಕ್ಷೇತ್ರ, ಗಾರ್ಮೆಂಟ್ಸ್, ಸೇವಾ ಮತ್ತು ಪ್ರವಾಸೋದ್ಯಮಗಳ ಕ್ಷೇತ್ರ, ಹಣಕಾಸು ಮತ್ತು ನಿರ್ವಹಣಾ ಕ್ಷೇತ್ರ ಹಾಗು ಇತರೆ ಕ್ಷೇತ್ರಗಳಲ್ಲಿ ಉದ್ಯೋಗಗಳು ಲಭ್ಯವಿರುತ್ತವೆ ಎಂದು ಅವರು ತಿಳಿಸಿದ್ದಾರೆ. ಎಸ್‌ಎಸ್‌ಎಲ್‌ಸಿ ಹಾಗೂ ಪಿಯುಸಿ ಉತ್ತೀರ್ಣ/ಅನುತ್ತೀರ್ಣರಾದ 1221 ಮಂದಿಗೆ, ಎಸ್‌ಎಸ್‌ಎಲ್‌ಸಿ ಹಾಗೂ ಪಿಯುಸಿ ಪಾಸ್ ಆದ 3118 ಮಂದಿಗೆ, ಐಟಿಐ ಪೂರ್ಣಗೊಳಿಸುರವ 3482 ಅಭ್ಯರ್ಥಿಗಳು, ಡಿಪ್ಲೊಮಾ (ಮೆಕ್ಯಾನಿಕಲ್/ಎಲೆಕ್ಟ್ರಿಕಲ್) 503, ಡಿಪ್ಲೊಮಾ (ಸೇಫ್ಟಿ) 16, ಐಟಿಐ ಹಾಗೂ ಡಿಪೊಮಾ 2,793, ಬಿಸಿಎ, ಎಂಸಿಎ, ಬಿಕಾಂ, ಬಿಎಸ್‌ಸಿ,ಎಂಎಸ್‌ಸಿ 217, ಎಸ್‌ಎಸ್‌ಎಲ್‌ಸಿ ಯಿಂದ ಪದವಿ ವರೆಗೆ 8,200, ಯಾವುದೇ ಪದವಿ ವಿದ್ಯಾರ್ಹತೆಗೆ 7,022, ಬಿಇ (ಮೆಕ್ಯಾನಿಕಲ್/ಎಲೆಕ್ಟ್ರಿಕಲ್) 270, ಬಿಇ (ಕೆಮಿಕಲ್) 10, ಬಿ-ಟೆಕ್/ಎಂಬಿಎ 01, ಇತರೆ 2,963, ಡೈರಿ ಟೆಕ್ನಾಲಜಿ 4, ಡಿಪ್ಲೊಮಾ ಇನ್ ಪ್ರಿಂಟಿಂಗ್ 26, ಎಂಎಸ್‌ಸಿ ಕೆಮಿಸ್ಟ್ 20 ಉದ್ಯೋಗಾವಕಾಶಗಳಿವೆ ಎಂದು ಮಾಹಿತಿ ನೀಡಿದರು.

ಸಂಬಂಧಪಟ್ಟ ಜಿಲ್ಲಾ ಹಾಗೂ ತಾಲೂಕು ಮಟ್ಟದ ಅಧಿಕಾರಿಗಳು ಸಭೆಯಲ್ಲಿದ್ದರು.

## ಒಳ ಮೀಸಲಾತಿ ಅನ್ಯಾಯದ ಸಮಸ್ಯೆ ಬಗೆಹರಿಸಲು ಪ್ರಾಮಾಣಿಕ ಪ್ರಯತ್ನ

ಹನೂರು : ಬಂಜಾರ ಸಮುದಾಯದ ಜನತೆಗೆ ಒಳ ಮೀಸಲಾತಿಯಲ್ಲಿ ಆಗಿರುವ ಅನ್ಯಾಯದ ಬಗ್ಗೆ ಮುಖ್ಯಮಂತ್ರಿ ಸಿದ್ದರಾಮಯ್ಯರವರ ಜೊತೆ ಚರ್ಚೆ ನಡೆಸಿ ಸಮಸ್ಯೆಯನ್ನು ಬಗೆಹರಿಸಲು ಪ್ರಾಮಾಣಿಕ ಪ್ರಯತ್ನ ಮಾಡುವುದಾಗಿ ಬಿಜೆಪಿ ಒ.ಬಿ ಸಿ ಮೋರ್ಚಾ ಜಿಲ್ಲಾಧ್ಯಕ್ಷ ಜನಧ್ವನಿ ವೆಂಕಟೇಶ್ ತಿಳಿಸಿದರು.



ಮಾಧ್ಯಮದವರೊಂದಿಗೆ ಮಾತನಾಡಿದ ಅವರು ಅನ್ಯ ಕಾರ್ಯ ನಿಮಿತ್ತ ಹನೂರು ಪಟ್ಟಣದಲ್ಲಿ ಆಯೋಜಿಸಲಾಗಿದ್ದ ಸಂತ ಸೇವಾಲಾ ಲರ ಜಯಂತಿ ಕಾರ್ಯಕ್ರಮಕ್ಕೆ ಆಗಮಿಸಲು ಸಾಧ್ಯವಾಗಿಲ್ಲ ಆದರೂ ಅವರ ಕಾರ್ಯಕ್ರಮಕ್ಕೆ ಎಲ್ಲಾ ರೀತಿಯ ಸಹಕಾರ ನೀಡಲಾಗಿದೆ. ಮುಂದಿನ ದಿನಗಳಲ್ಲಿಯೂ ಬಂಜಾರ ಸಮುದಾಯದವರ ಜೊತೆಗೆ ಸದಾ ಬೆಂಬಲವಾಗಿರುತ್ತೇನೆ ಅವರು ಮಾಡುವ ಎಲ್ಲಾ ಕಾರ್ಯಕ್ರಮಗಳಿಗೂ ಎಲ್ಲ ರೀತಿಯ ಸಹಕಾರ ನೀಡುವುದಾಗಿ ತಿಳಿಸಿದರು. ಬಂಜಾರ ಸಮುದಾಯದ ತಾಂಡಗಳಿಗೆ ಹಲವು ವರ್ಷಗಳಿಂದ ಮೂಲಭೂತ ಸೌಲಭ್ಯ ಇಲ್ಲದೆ ಇರುವುದು ಗಮನಕ್ಕೆ ಬಂದಿದ್ದು ಸಂಬಂಧ ಪಟ್ಟ ಸಚಿವರ ಜೊತೆ ಚರ್ಚೆ ನಡೆಸಿ ಬಂಜಾರ ಸಮುದಾಯಕ್ಕೆ ವಿಶೇಷ ಅನುದಾನ ಕೊಡಿಸಲು ಬದ್ಧನಾಗಿದ್ದೇನೆ ಅದೇ ರೀತಿ ಬಂಜಾರ ಸಮುದಾಯದವರಿಗೆ ವೈಯಕ್ತಿಕವಾಗಿಯು ಸಹಾಯ ಮಾಡುವುದಾಗಿ ತಿಳಿಸಿದರು. ಬಂಜಾರ ಸಮುದಾಯದವರು ಸಮುದಾಯದ ಜನರಿಗೆ ಅನುಕೂಲ ಕಲ್ಪಿಸುವ ನಿಟ್ಟಿನಲ್ಲಿ ಹನೂರು ತಾಲೂಕು ಕೇಂದ್ರದಲ್ಲಿ ಸಮುದಾಯ ಭವನ ಹಾಗೂ ಬಂಜಾರ ಸಮುದಾಯದವರಿಗೆ ಸ್ಮಶಾನ ಇಲ್ಲದೆ ಇರುವ ಬಗ್ಗೆ ಜನಪ್ರತಿನಿಧಿಗಳಿಗೆ ಮನವಿ ಸಲ್ಲಿಸಿರುವುದರಿಂದ ಅವರಿಗೆ ಅನುಕೂಲ ಕಲ್ಪಿಸುವ ನಿಟ್ಟಿನಲ್ಲಿ ತಾಲೂಕು ಆಡಳಿತಕ್ಕೆ ಮನವಿ ಮಾಡಲಾಗುವುದು ಎಂದರು.

## ವ್ಯಕ್ತಿಯೊಬ್ಬನಿಗೆ ಚಾಕು ಇರಿತ

ಗುಂಡ್ಲುಪೇಟೆ: ಹಳೇ ದ್ವೇಷದ ಹಿನ್ನೆಲೆ ವ್ಯಕ್ತಿಯೊಬ್ಬನಿಗೆ ಚಾಕು ಇರಿದ ಘಟನೆ ಪಟ್ಟಣದ ಮಹದೇವಪ್ರಸಾದ್ ನಗರದಲ್ಲಿ ನಡೆದಿದೆ.



ಪಟ್ಟಣದ ಮಹದೇವಪ್ರಸಾದ್ ನಗರದ ನಿವಾಸಿ ಸುಹೇಲ್ ಅಹ್ಮದ್(40) ಚಾಕು ಇರಿತದಿಂದ ಗಂಭೀರವಾಗಿ ಗಾಯಗೊಂ ಡಿದ್ದು, ಪಟ್ಟಣದ ಜಸೀಮ್ ಆಲಿಯಾಸ್ ಕುಂಜು, ಉಮರ್, ಜಕಾವುಲ್ಲಾ ವಿರುದ್ಧ ಕೇಸ್ ದಾಖಲಾಗಿದೆ. ನಮಾಜ್ ಗೆ ತೆರಳಲು ತಯಾರಾಗುತ್ತಿದ್ದ ಸಂದರ್ಭದಲ್ಲಿ ಉಮರ್ ಬೈಕ್ ನಲ್ಲಿ ಬಂದ ಜಸೀಮ್, ಸುಹೇಲ್ ಅಹ್ಮದ್‌ನನ್ನು ಮಾತಾಡಬೇಕೆಂದು ಮನೆಯಿಂದ ಹೊರಕ್ಕೆ ಕರೆಯಿಸಿ ಏಕಾಏಕಿ ಎದೆ, ಎಡಗೈ, ಬೆರಳುಗಳಿಗೆ ಚಾಕು ವಿನಿಂದ ಇರಿದು ನಿನ್ನ ಕುಟುಂಬ ಬಿಡುವುದಿಲ್ಲ ಎಂದು ಬೆದರಿಕೆ ವೊಡ್ಡಿ ಪರಾರಿಯಾಗಿದ್ದಾನೆಂದು ಗಾಯಾಳು ಸಹೋದರ ಸಿಕಂದರ್ ಅಹ್ಮದ್ ದೂರು ಕೊಟ್ಟಿದ್ದಾರೆ. ಗಾಯಾಳು ಸುಹೇಲ್ ಅಹ್ಮದ್ ಗೆ ಪಟ್ಟಣದ ಸಾರ್ವಜನಿಕ ಆಸ್ಪತ್ರೆಯಲ್ಲಿ ಚಿಕಿತ್ಸೆ ಕೊಡಿಸಿ ಹೆಚ್ಚಿನ ಚಿಕಿತ್ಸೆಗಾಗಿ ಮೈಸೂರಿನ ಖಾಸಗಿ ಆಸ್ಪತ್ರೆಗೆ ರವಾನೆ ಮಾಡಲಾಗಿದೆ. ಗುಂಡ್ಲುಪೇಟೆ ಠಾಣೆಯಲ್ಲಿ ಈ ಸಂಬಂಧ ಪ್ರಕರಣ ದಾಖಲಾಗಿದ್ದು, ಪೊಲೀಸರು ಮುಂದಿನ ತನಿಖೆ ಕೈಗೊಂಡಿದ್ದಾರೆ.

## ಖಾಲಿ ಹುದ್ದೆಗಳ ಭರ್ತಿಗೆ ಆಗ್ರಹಿಸಿ ಪ್ರತಿಭಟನೆ

ಮೈಸೂರು: ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ತಮ್ಮ ತಮ್ಮ ವ್ಯಾಪ್ತಿಯ ವಿವಿಧ ಇಲಾಖೆಗಳಲ್ಲಿನ ಖಾಲಿ ಹುದ್ದೆಗಳನ್ನು ಭರ್ತಿ ಮಾಡುವಂತೆ ಆಗ್ರಹಿಸಿ ಎಐಡಿವೈಓ(ಆಲ್ ಇಂಡಿಯಾ ಡೆಮಾಕ್ರೆಟಿಕ್ ಯೂತ್ ಆರ್ಗನೈಸೇಷನ್) ವತಿಯಿಂದ ಶುಕ್ರವಾರ ಪ್ರತಿಭಟನೆ ನಡೆಸಲಾಯಿತು.

ಮೈಸೂರಿನ ಚಿಕ್ಕಗಡಿಯಾರದ ಎದುರು ಜಮಾವಣೆಗೊಂಡ ನೂರಾರು ಮಂದಿ, ಕೇಂದ್ರ ಮತ್ತು ರಾಜ್ಯ ಸರ್ಕಾರದ ವಿವಿಧ ಇಲಾಖೆಗಳಲ್ಲಿ ಲಕ್ಷಾಂತರ ಹುದ್ದೆಗಳು ಖಾಲಿ ಇದ್ದರೂ ನೇಮಕಾತಿ ಮಾಡುತ್ತಿಲ್ಲ ಎಂದು ಆಕ್ರೋಶ ಹೊರಹಾಕಿದರು. ನಿರಂತರ ಹೋರಾಟದ ಫಲವಾಗಿ ಮುಖ್ಯಮಂತ್ರಿಗಳು ಕಳೆದ ಡಿಸೆಂಬರ್‌ನಲ್ಲಿ 56,432 ಹುದ್ದೆಗಳ ಭರ್ತಿಗೆ ಹಾಗೂ ಬೆಳಗಾವಿ ಅಧಿವೇಶನದಲ್ಲಿ 24,300 ಹುದ್ದೆಗಳ ನೇಮಕಾತಿಗೆ ಆರ್ಥಿಕ ಇಲಾಖೆಯಿಂದ ಅನುಮೋದನೆ ದೊರೆತಿದೆ ಎಂದು ಘೋಷಿಸಿದ್ದರು. ಆದರೆ, ಘೋಷಣೆಯಾಗಿ ಹಲವು ತಿಂಗಳು ಕಳೆದರೂ ನೇಮಕಾತಿ ಪ್ರಕ್ರಿಯೆ ಆರಂಭವಾಗಲಿಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಈಗ ಮತ್ತೆ ಸಂಪುಟ ಸಭೆಯಲ್ಲಿ 56,000 ಹುದ್ದೆಗಳ ನೇಮಕಾತಿಗೆ ಅನುಮೋದನೆ ದೊರೆತಿದೆ ಎಂದು ಸರ್ಕಾರ ಹೇಳುತ್ತಿದೆ. ಆದರೆ, ಇದು ಕೇವಲ ಬಾಯಿ ಮಾತಾಗದೇ ಕೂಡಲೇ ನೇಮಕಾತಿ ಅಧಿಸೂಚನೆ ಹೊರಡಿಸಬೇಕು. ಜೊತೆಗೆ ಖಾಲಿ ಇರುವ ಎಲ್ಲಾ 2,84,881 ಹುದ್ದೆಗಳನ್ನು ಭರ್ತಿ ಮಾಡಲು ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದರು.

**ಭ್ರಷ್ಟಾಚಾರ ನಿಲ್ಲಿಸಿ:** ನೇಮಕಾತಿಯಲ್ಲಿ ಪಾರದರ್ಶಕತೆ ಕಾಪಾಡಬೇಕು. ಭ್ರಷ್ಟಾಚಾರ ಇರಬಾರದು. ನೇಮಕಾತಿಯ ವಾರ್ಷಿಕ ಕ್ಯಾಲೆಂಡರ್ ಬಿಡುಗಡೆ ಮಾಡಬೇಕು. ಅರ್ಜಿ ಶುಲ್ಕ ಕಡಿತ ಮಾಡಬೇಕು. ಶಿಕ್ಷಣ ಕ್ಷೇತ್ರದಲ್ಲಿ ಉದ್ಯೋಗಗಳನ್ನು ನಾಶ ಮಾಡುವ ಕೆಪಿಎಸ್ ಮ್ಯಾಗ್ನೆಟ್ ಶಾಲೆ ಯೋಜನೆ ಕೈ ಬಿಡಬೇಕು ಎಂದು ಆಗ್ರಹಿಸಿದರು.




**ಮನವಿ ಸಲ್ಲಿಕೆ:** ಬಳಿಕ ಕಳೆದ ನವೆಂಬರ್ ತಿಂಗಳಿಂದ ಫೆಬ್ರವರಿವರೆಗೆ ಮೈಸೂರಿನ ಯುವಜನರು, ಉದ್ಯೋಗಾಕಾಂಕ್ಷಿಗಳು ಮತ್ತು ಸಾರ್ವಜನಿಕರಿಂದ ಸಂಗ್ರಹಿಸಿದ 5167 ಸಹಿಗಳಿರುವ ಮನವಿ ಪತ್ರವನ್ನು ಜಿಲ್ಲಾಧಿಕಾರಿ ಜಿ.ಲಕ್ಷೀಕಾಂತ್ ರೆಡ್ಡಿಯವರ ಮೂಲಕ ಕೇಂದ್ರ ಹಾಗೂ ರಾಜ್ಯ ಸರ್ಕಾರಕ್ಕೆ ಸಲ್ಲಿಸಲಾಯಿತು. ಎಐಡಿವೈಓ ಜಿಲ್ಲಾಧ್ಯಕ್ಷ ಟಿ. ಆರ್.ಸುನೀಲ್, ಕಾರ್ಯದರ್ಶಿ ಎಸ್.ಸುಮಾ, ಉದ್ಯೋಗ ಆಕಾಂಕ್ಷಿಗಳ ಹೋರಾಟ ಸಮಿತಿಯ ಜಿಲ್ಲಾ ಸಂಚಾಲಕಿ ನೀತುಶ್ರೀ, ಸದಸ್ಯರಾದ ಪೂರ್ಣಿಮಾ, ರಣಜಿತ್ ಹಾಗೂ ಉದ್ಯೋಗ ಆಕಾಂಕ್ಷಿಗಳಾದ ಮಹೇಶ್, ಮೋಹನ್, ರವಿಚಂದ್ರನ್, ಲೋಕೇಶ್, ಆಕಾಶ್, ಶಿವಕುಮಾರ್, ಚಂದ್ರೇಶ್, ಶಶಿಕುಮಾರ್, ಕುಮಾರ್, ರಕ್ಷಿತಾ, ಸುಶ್ಮಿತಾ ಮತ್ತಿತರರಿದ್ದರು.

## ಉದಯ್ ಬಾನು, ಸದಸ್ಯರ ಬಿಡುಗಡೆಗೆ ಆಗ್ರಹ




ಮೈಸೂರು: ಸರ್ವಾಧಿಕಾರಿ ಪ್ರವೃತ್ತಿ ಬಿಟ್ಟು ಯುವ ಕಾಂಗ್ರೆಸ್ ಉದಯ್ ಬಾನು ಮತ್ತು ಸದಸ್ಯರನ್ನು ಬಿಡುಗಡೆಗೊಳಿಸಬೇಕೆಂದು ಕೇಂದ್ರ ಸರ್ಕಾರವನ್ನು ಕೃಷ್ಣರಾಜ ಯುವ ಕಾಂಗ್ರೆಸ್ ಪ್ರತಿಭಟನೆ ಮೂಲಕ ಆಗ್ರಹಿಸಿದರು.

ಕಳೆದ ವಾರ ದೆಹಲಿಯ ಭಾರತ್ ಮಂಟಪದಲ್ಲಿ ಜರುಗಿದ ಇಂಡಿಯಾ ಎಐ ಇಂಪ್ಯಾಕ್ಟ್ ಸಮ್ಮಿಟ್ ವೇಳೆ ಯುವ ಕಾಂಗ್ರೆಸ್ ಪದಾಧಿಕಾರಿಗಳು ನಡೆಸಿದ ಪ್ರತಿಭಟನೆ ಹಿನ್ನೆಲೆಯಲ್ಲಿ ಭಾರತೀಯ ರಾಷ್ಟ್ರೀಯ ಯುವ ಕಾಂಗ್ರೆಸ್ ಅಧ್ಯಕ್ಷರಾದ ಉದಯ್ ಬಾನು ಚಿಬ್ ರವರನ್ನು ಹಾಗೂ ಇನ್ನಿತರ ಯುವ ಕಾಂಗ್ರೆಸ್ ಪದಾಧಿಕಾರಿಗಳನ್ನು ಕೇಂದ್ರದ ಬಿಜೆಪಿ ನೇತೃತ್ವದ ಸರಕಾರ ಬಂಧಿಸಿರುವುದನ್ನು ವಿರೋಧಿಸಿದರು. ಮಾಜಿ ಶಾಸಕ ಎಂ.ಕೆ.ಸೋಮಶೇಖರ್ ಮಾರ್ಗದರ್ಶನದಲ್ಲಿ ಯುವ ಕಾಂಗ್ರೆಸ್ ಘಟಕದ ಅಧ್ಯಕ್ಷ ಹೊಯ್ಸಳ ನೇತೃತ್ವದಲ್ಲಿ ಕ್ಷೇತ್ರದ ಯುವ ಕಾಂಗ್ರೆಸ್ ಘಟಕದವತಿಯಿಂದ ನಗರದ ರಾಮಸ್ವಾಮಿ ವೃತ್ತದಲ್ಲಿ ಕಾರ್ಯಕರ್ತರೊಡಗೂಡಿ ಕೂಡಲೇ ಬಿಡುಗಡೆಗೊಳಿಸಬೇಕೆಂದು ಒತ್ತಾಯಿಸಿದರು. ಬ್ಲಾಕ್ ಅಧ್ಯಕ್ಷ ಜಿ.ಸೋಮಶೇಖರ್, ಕಾರ್ಯದರ್ಶಿ ಡೈರಿ ವೆಂಕಟೇಶ್, ಜಿಲ್ಲಾ ಯುವ ನಾಯಕ ಎಂ.ಎಸ್.ಶಶಾಂಕ್ ಗೌಡ, ರೋಹಿತ್ ಸಿಂಗ್, ಯುವ ಕಾಂಗ್ರೆಸ್ ಬ್ಲಾಕ್ ಸಮಿತಿ ಅಧ್ಯಕ್ಷ ಕಾರ್ತಿಕ್, ಸೈದ್ ಸಕ್ಲೇನ್, ಕೆ.ವಿವೇಕ್, ನಿತಿನ್, ಮನೋಜ್, ಕರಣ್, ಅಭಿ, ಕಿರಣ್, ಶಾರುಖ್, ಸೈದ್ ಖಾನ್ ಇತರರು ಭಾಗಿಯಾಗಿದ್ದರು.

**ಶಾಸಕ ಅನಿಲ್ ಚಿಕ್ಕಮಾದು ಸಲಹೆ**

## ಸಾಮಾಜಿಕ ಬದಲಾವಣೆಗೆ ಶಿಕ್ಷಣವೇ ಅಸ್ತ್ರ

**ಸರಗೂರು:** ಶಿಕ್ಷಣವು ಬದುಕನ್ನು ಬದಲಾಯಿಸುತ್ತದೆ. ಆ ಮೂಲಕ ಸಾಮಾಜಿಕ ಬದಲಾವಣೆಗೆ ಕಾರಣವಾಗುತ್ತದೆ. ಬಡವರು ಮತ್ತು ಶೋಷಿತರು ಸಮಾಜದಲ್ಲಿ ಮುಂದೆ ಬರಲು ಇರುವ ಏಕೈಕ ಅಸ್ತ್ರ ಶಿಕ್ಷಣ. ಹಾಗಾಗಿ, ತಂದೆ-ತಾಯಂ ದಿರು ತಮ್ಮ ಮಕ್ಕಳಿಗೆ ಉತ್ತಮ ಶಿಕ್ಷಣ ಕೊಡಿಸಬೇಕು ಎಂದು ಶಾಸಕ ಅನಿಲ್ ಚಿಕ್ಕಮಾದು ಸಲಹೆ ನೀಡಿದರು.

ತಾಲೂಕಿನ ಹಾದನೂರು ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಶಾಲಾ ವಾರ್ಷಿಕೋತ್ಸವ ಸಮಾರಂಭ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ಸಮಾಜದಲ್ಲಿ ಆರ್ಥಿಕವಾಗಿ ಹಿಂದುಳಿದಿರುವ ಶೋಷಿತರು ಹಾಗೂ ಕೂಲಿ ಕಾರ್ಮಿಕರಿಗೆ ಶಿಕ್ಷಣವನ್ನು ನೀಡುವ ಮೂಲಕ ಸಾಮಾಜಿಕ ನ್ಯಾಯವನ್ನು ಅನುಷ್ಠಾನಗೊಳಿಸುವ ಕೆಲಸವಾಗಬೇಕು. ಸರ್ಕಾರಿ ಶಾಲೆಗಳ ಅಭಿವೃದ್ಧಿಯಿಂದಲೇ ಅದು ಸಾಧ್ಯವಾಗಬೇಕು. ಶಾಲಾ ಹಂತದಲ್ಲಿ ಮಕ್ಕಳಲ್ಲಿ ನ್ಯಾಯದ ಪ್ರಜ್ಞೆ ಬೆಳೆಯಬೇಕು ಎಂದು ತಿಳಿಸಿದರು.

ಎಸ್ ಡಿಎಂಸಿ ಅಧ್ಯಕ್ಷ ನಂಜಪ್ಪ ಮಾತನಾಡಿ,



ಮಕ್ಕಳು ಹೆಚ್ಚಿನ ಸಮಯ ಶಿಕ್ಷಕರೊಂದಿಗೆ ಶಾಲೆಯಲ್ಲಿ ಕಳೆಯುತ್ತಾರೆ. ಮಕ್ಕಳ ಮೇಲೆ ಶಿಕ್ಷಕರ ಪ್ರಭಾವ ಬೀರುವುದರಿಂದ ಮಕ್ಕ ಳಿಗೆ ಉತ್ತಮ ಶಿಕ್ಷಣ ನೀಡುವಂತ ಶಿಕ್ಷಕರೂ ಹೆಚ್ಚು ಒತ್ತು ನೀಡಬೇಕು. ಮಕ್ಕಳು ಸಹ ಶಿಕ್ಷಣದೊಂದಿಗೆ ಪಠ್ಯೇತರ ಚಟುವಟಿಕೆಗಳಲ್ಲಿಯೂ ಭಾಗಿಯಾಗಿ ಪ್ರತಿಯೊಬ್ಬ ವಿದ್ಯಾ ರ್ಥಿಯೂ ಶಿಕ್ಷಣದೊಂದಿಗೆ ಕ್ರೀಡೆ, ಸಾಂಸ್ಕೃತಿಕ ಚಟುವಟಿ ಕೆಯಲ್ಲಿ ಪಾಲ್ಗೊಳ್ಳಬೇಕು. ಉತ್ತಮ ಶಿಕ್ಷಣದೊಂದಿಗೆ ಉತ್ತಮ ದೇಹದಾರ್ಢ್ಯ ಹಾಗೂ ಆರೋಗ್ಯ ಹೊಂದಬೇಕು ಎಂದರು.

ಜಿಪಂ ಮಾಜಿ ಸದಸ್ಯ ಪಿ.ರವಿ, ಮೈಮುಲ್ ಅಧ್ಯಕ್ಷ ಈರೇಗೌಡ, ಬಿಇಒ ಸಿ.ಎನ್.ರಾಜು, ಪ್ರಕಾಶ್ ಮಾತನಾಡಿದರು.

ಮುಖ್ಯ ಶಿಕ್ಷಕಿ ಶಾಂತಮ್ಮ ಕಳೆದ ವರ್ಷದ ಶೈಕ್ಷಣಿಕ, ಕ್ರೀಡಾ ಮತ್ತು ಸಾಂಸ್ಕೃತಿಕ ಸಾಧನೆಗಳ ವರದಿ ನೀಡಿದರು. ಕ್ರೀಡೆಯಲ್ಲಿ ಭಾಗವಹಿಸಿ ಪ್ರಶಸ್ತಿ ಪಡೆದ ವಿದ್ಯಾರ್ಥಿಗಳು ಹಾಗೂ ಪೋಷಕರಿಗೆ ಪ್ರಶಸ್ತಿ ನೀಡಿ ಸನ್ಮಾನಿಸಲಾಯಿತು.

# ರಾಷ್ಟ್ರೀಯ ವಿಜ್ಞಾನ ದಿನಾಚರಣೆ ಆಚರಣೆ

## ಸರ್ಕಾರಿ ಮಹಿಳಾ ಕಾಲೇಜಿನಲ್ಲಿ ವಿಜ್ಞಾನ ಜಾಥಾ




**ಮಂಡ್ಯ:** ರಾಷ್ಟ್ರೀಯ ವಿಜ್ಞಾನ ದಿನದ ಅಂಗವಾಗಿ ಮಂಡ್ಯದ ಸರಕಾರಿ ಮಹಿಳಾ ಕಾಲೇಜಿನಲ್ಲಿ ಎರಡು ದಿನಗಳ ಕಾರ್ಯಕ್ರಮವನ್ನು ಆಯೋಜಿಸಲಾಯಿತು.

ಎರಡನೇ ದಿನ ವಿಜ್ಞಾನದೆಡೆಗೆ ನಮ್ಮ ನಡೆ? ಎಂಬ ಶೀರ್ಷಿಕೆಯಡಿ ವಿಜ್ಞಾನ ಜಾಥಾ ಹಮ್ಮಿಕೊಳ್ಳಲಾಯಿತು.

ಕಾರ್ಯಕ್ರಮದ ಸ್ವಾಗತವನ್ನು ವಿಜ್ಞಾನ ವೇದಿಕೆಯ ಸಂಚಾಲಕರಾದ ಜ್ಯೋತಿ ಡಿ.ಕೆ. ನೆರವೇರಿಸಿದರು. ಕಾಲೇಜಿನ ಪ್ರಾಂಶುಪಾಲರಾದ ಪ್ರೊ. ಗುರುರಾಜಪ್ರಭು ಕೆ. ಕಾರ್ಯಕ್ರಮವನ್ನು ಉದ್ದೇಶಿಸಿ ಮಾತನಾಡಿ, ಮುಂದಿನ ದಿನಗಳಲ್ಲಿ ಇನ್ನೂ ದೊಡ್ಡ ಮಟ್ಟದಲ್ಲಿ ವಿಜ್ಞಾನ ಸಂಬಂಧಿತ ಕಾರ್ಯಕ್ರಮಗಳನ್ನು ಆಯೋಜಿಸುವುದಾಗಿ ತಿಳಿಸಿದರು. ವಿದ್ಯಾರ್ಥಿನಿಯರು ವಿಜ್ಞಾನ ವಿಷಯದ ಕುರಿತು ಹೆಚ್ಚಿನ ಆಸಕ್ತಿ ಬೆಳೆಸಿಕೊಳ್ಳಬೇಕು ಎಂದು ಅವರು ಪ್ರೇರಣಾದಾಯಕ ಸಂದೇಶ ನೀಡಿದರು.

ಜಾಥಾ ಕಾರ್ಯಕ್ರಮದಲ್ಲಿ ಕಾಲೇಜಿನ ಮ್ಯಾನೇಜರ್ ರವಿಕಿರಣ್, ರವಿಕಾಂತ್ ಲಮಾಣಿ, ಐಕ್ಯೂಎಸಿ ಸಂಚಾಲಕರಾದ ಜಯಲಕ್ಷ್ಮಿ ಮತ್ತು ಕೌಸರ್ ಫಾತಿಮಾ, ಸಹ ಸಂಚಾಲಕರಾದ ಪ್ರದೀಪ್ ಕುಮಾರ್, ಕಾಲೇಜಿನ ಎಲ್ಲಾ ಪ್ರಾಧ್ಯಾಪಕರು ಹಾಗೂ ವಿಜ್ಞಾನ ವಿಭಾಗದ ವಿದ್ಯಾರ್ಥಿನಿಯರು ಉಪಸ್ಥಿತರಿದ್ದರು.

ಸಾರ್ವಜನಿಕರಲ್ಲಿ ವಿಜ್ಞಾನ ಕುರಿತು ಜಾಗೃತಿ ಮೂಡಿಸುವ ಉದ್ದೇಶದಿಂದ ಆಯೋಜಿಸಲಾದ ಈ ಜಾಥಾ ಕಾಲೇಜಿನಿಂದ ಪ್ರಾರಂಭವಾಗಿ ವಿವಿ ಸರ್ಕಲ್ ಮೂಲಕ ಫ್ಯಾಕ್ಟರಿ ಸರ್ಕಲ್ ವರೆಗೆ ಸಾಗಿತು. ಸುಮಾರು 500ಕ್ಕೂ ಹೆಚ್ಚು ವಿದ್ಯಾರ್ಥಿನಿಯರು ಭಾಗವಹಿಸಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸಿದರು.

ಈ ಕಾರ್ಯಕ್ರಮವು ವಿಜ್ಞಾನದ ಮಹತ್ವವನ್ನು ಸಾರುವ ಜೊತೆಗೆ ವಿದ್ಯಾರ್ಥಿನಿಯರಲ್ಲಿ ಸಂಶೋಧನಾ ಮನೋಭಾವ ಬೆಳೆಸುವ ದಿಸೆಯಲ್ಲಿ ಮಹತ್ವದ ಹೆಜ್ಜೆಯಾಯಿತು.

## ಹುಣಸಮ್ಮ ತಾಯಿ ಜಾತ್ರಾ ಮಹೋತ್ಸವ



**ಕೆ.ಆರ್.ನಗರ:** ತಾಲೂಕಿನ ಮಿರ್ಲೆ ಗ್ರಾಮದ ಹುಣಸಮ್ಮ ತಾಯಿ ರಥೋತ್ಸವ ಶನಿವಾರ ಸಂಭ್ರಮದಿಂದ ನಡೆಯಿತು.

ರಥೋತ್ಸವದ ಹಿನ್ನೆಲೆ ಮೂರು ರಥಗಳಿಗೂ ವಿವಿಧ ಪುಷ್ಪಗಳಿಂದ ಬಾವುಟಗಳನ್ನು ಅಲಂಕೃತ ಗೊಂಡ ರಥಗಳನ್ನು ಕ್ರಮವಾಗಿ ಜೋಡಿಸಲಾಗಿತ್ತು.

ಸಲ್ಲಿದ ಶುಭಗಳಿಗೆಯಲ್ಲಿ ಗಣ್ಯರು ಹಾಗೂ ಭಕ್ತರು ರಥಕ್ಕೆ ಪೂಜೆ ಸಲ್ಲಿಸಿ ಚಾಲನೆ ನೀಡಿದರು. ಬಳಿಕ ವಿವಿಧೆಡೆಯಿಂದ ಆಗಮಿಸಿದ ಭಕ್ತರೆಲ್ಲ ಒಟ್ಟಾಗಿ ಸೇರಿ ಮೊದಲು ಹುಣಸನ್ನು ರಥೋತ್ಸವಕ್ಕೆ ಬಂದಂತಹ ಊರಿನ ರಥಗಳನ್ನು ಒಂದೊಂದಾಗಿ ಜೈಕಾರ ದೊಂದಿಗೆ ಎಳೆದು ಭಕ್ತಿ ಸಮರ್ಪಣೆ ಮಾಡಿದರು. ನವ ದಂಪತಿಗಳು ಹಾಗೂ ಭಕ್ತರು ಹಣ್ಣು ದವನ ಎಸೆದು ತಮ್ಮ ಇಷ್ಟಾರ್ಥವನ್ನು ಈಡೇರಿಸುವಂತೆ ಪ್ರಾರ್ಥಿಸಿ ಕೊಂಡರು. ಪ್ರಮುಖ ರಸ್ತೆ ಬೀದಿಗಳು ಹಾಗೂ ದೇವಸ್ಥಾನಗಳು ಬಣ್ಣ ಬಣ್ಣದ ವಿದ್ಯುತ್ ದೀಪಗಳಿಂದ ಕಂಗೊಳಿಸುತ್ತಿದ್ದವು.

ನಾಟನಹಳ್ಳಿ,ಕೊಡೆಯಾಲ, ನರಚನಹಳ್ಳಿ ಹನುಮನಹಳ್ಳಿ, ಬೀಚನಹಳ್ಳಿ ಕೊಪ್ಪಲು, ಮಾಳನಾಯಕನಹಳ್ಳಿ ಹಳೆ ಮಿರ್ಲೆ, ಶಾಬಾಳ್ ಸೇರಿದಂತೆ ಒಂಬತ್ತು ಗ್ರಾಮಗಳು ಶುಕ್ರವಾರ ರಾತ್ರಿ ವೇಳೆ ಐದು ಸಿಡಿಗಳಿ0ದ 4 ರಥಗಳನ್ನು ಶೃಂಗಾರಗೊಂಡು ದೇವಿಯ ಇಷ್ಟಾರ್ಥ ಹರಕೆ ಯೊಂದಿಗೆ ಹುಣಸಮ್ಮ ತಾಯಿ ದೇವಾಲಯದ ಬಳಿಬಂದು ನೆಲೆಸಿರುತ್ತವೆ. ಮರುದಿನ ಮುಂಜಾನೆ 5

ಗಂಟೆಗೆ ಶುಭಲಗ್ನದಲ್ಲಿ ತಾಯಿ ವಿಗ್ರಹವನ್ನು ರಥವನ್ನು ಕೂರಿಸಿಕೊಂಡು ಮೂರು ಸುತ್ತು ಎಲ್ಲಾ ರಥಗಳು ಮತ್ತು ಸಿಡಿಗಳು ದೇವಾಲಯದ ಸುತ್ತಾ ಸುತ್ತು ಹಾಕಿ ತಮ್ಮ ತಮ್ಮ ಗ್ರಾಮಗಳಿಗೆ ತೆರಳಿದವು.

ಸುತ್ತಮುತ್ತಲು ಸ್ವಚ್ಛತ ಕಾರ್ಯಗಳು ಸಾಗಿತ್ತು. ತಾಲೂಕು ಆಡಳಿತ ಮತ್ತು ಪೊಲೀಸ್ ಇಲಾಖೆ ವತಿಯಿಂದ ಸೂಕ್ತ ಬಂದೋಬಸ್ತ್ ಮಾಡಲಾಗಿತ್ತು.

ದೇವರಿಗೆ ಸುತ್ತು ಬರುವವರಿಂದ ಸಂತೆಗೆ ಸುತ್ತು ಬರುವವರೇ ಜಾಸ್ತಿ? ಎಂದು ಅಪ್ಪ ಹೇಳುತಿದ್ದ ಮಾತು ನಿಜವೇ ಇರಬೇಕು. ಗದ್ದೆಯುದ್ದಕ್ಕೂ ಹಾಕಿರುವ ಡೇರೆ ಅಂಗಡಿಗಳು ಹಾಗು ತಿಂಡಿ–ಗಾಡಿಗಳು ಜಾತ್ರೆಯ ಪ್ರಮುಖ ಆಕರ್ಷಣೆ ಎಂದರೆ ಸುಳ್ಳಾಗದು. ಸಂಜೆಯಾಗುತ್ತಿದ್ದಂತೆ ಈ ಡೇರೆ ಅಂಗಡಿಗಳಿಂದ ಬಣ್ಣ–ಬಣ್ಣದ, ವಿಧ–ವಿಧದ ಆಕರ್ಷಕ ವಸ್ತುಗಳು ಜನರನ್ನು ಕೂಗಿ ಕರೆಯ ತೊಡಗುತ್ತದೆ. ಸಣ್ಣ ಬಲ್ಬಿನ ಲೈಟುಗಳ ಬೆಳಕಿನಲ್ಲಿ ಮಿನ–ಮಿನ ಮಿಂಚುವ ಆ ವಸ್ತುಗಳನ್ನು ನಿರ್ಲಕ್ಷಿ ಮುಂದೆ ಸಾಗುವುದು ಕಷ್ಟ ಸಾಧ್ಯವೇ ಸರಿ. ಬಳೆ, ಮಾಲೆಯಂತಹ ವಸ್ತುಗಳು ಯುವತಿಯರನ್ನು ಆಕರ್ಷಿಸಿದರೆ, ಬಕೇಟು, ಪಾತ್ರೆ ಪಗಡಿಗಳು ಗೃಹಣಿಯರನ್ನು ಸೆಳೆಯುತ್ತದೆ. ಇನ್ನು ಮಕ್ಕಳನ್ನು ಸೆಳೆಯಲು ಒಂದಷ್ಟು ಆಟಿಕೆಗಳೂ, ಪುಗ್ಗೆಗಳೂ ಇದ್ದೆ ಇರುತ್ತವೆ. ಗಂಡಸರೂ ಬರಿ ಕೈಯಲ್ಲಿ ಮರಳ ಬೇಕಾಗುವುದಿಲ್ಲ. ಪುಸ್ತಕಗಳು, ಬ್ಯಾಗುಗಳು, ಗೃಹಾಲಂಕಾರದ ವಸ್ತುಗಳು, ಎಲ್ಲವೂ ಇಲ್ಲಿ ಲಭ್ಯ. ಇನ್ನು ತಿಂಡಿ ತಿನಿಸುಗಳ ಗಾಡಿಗಳ ಹಾವಳಿ ಬೇರೆಯೇ. ಜಾತ್ರೆ ಮಿಠಾಯಿಗಳು, ಐಸ್ ಕ್ರೀಮ್ ಗಾಡಿಗಳು, ಗೋಬಿ ಮಂಚೂರಿ ಗಾಡಿಗಳು, ಇನ್ನು ನಮ್ಮೂರಲ್ಲಂತೂ ಚುರುಮುರಿ ಗಾಡಿಗಳು ಇದ್ದೇ ಇರುತ್ತವೆ. ಎಂತಹ ಜಿಪುಣರ ಜೇಬಿಗೂ ಕತ್ತರಿ ಬೀಳುವುದಂತೂ ಖಂಡಿತ.

## ವಿದುರಾಶ್ವತ್ಥದಲ್ಲಿ ಅಂತರರಾಜ್ಯ ಮಟ್ಟದ ದನಗಳ ಜಾತ್ರೆ

### ಉಚಿತ ಮೇವು ವಿತರಣೆ – ಪ್ರಶಸ್ತಿ ಪ್ರದಾನ ಸಮಾರಂಭ ಮಾ.22 ಕ್ಕೆ




**ಚಿಕ್ಕಬಳ್ಳಾಪುರ:** ಮಾರ್ಚ್ 22ರಂದು ವಿದುರಾಶ್ವತ್ಥ ನಲ್ಲಿ ನಡೆಯಲಿರುವ ಇತಿಹಾಸ ಪ್ರಸಿದ್ಧ ವಿದುರಾಶ್ವತ್ಥ ಅಂತರರಾಜ್ಯ ಮಟ್ಟದ ದನಗಳ ಜಾತ್ರೆ ಅಂಗವಾಗಿ ಉಚಿತ ಮೇವು ವಿತರಣೆ ಹಾಗೂ 'ನಮ್ಮ ರೈತ ನಮ್ಮ ಸ್ಟಾರ್' 'ನಮ್ಮ ಸೈನಿಕ ನಮ್ಮ ಸ್ಟಾರ್' ವಿಶೇಷ ಪ್ರಶಸ್ತಿ ಘೋಷಣೆ ಮಾಡುವುದಾಗಿ ನವ ಕರ್ನಾಟಕ ಯುವ ಶಕ್ತಿ ವೇದಿಕೆ ತಿಳಿಸಿದೆ.

ಶನಿವಾರ ನಗರದ ಪತ್ರಕರ್ತರ ಭವನದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ನವ ಕರ್ನಾಟಕ ಯುವ ಶಕ್ತಿ ವೇದಿಕೆ ಅಧ್ಯಕ್ಷ ಅಂಬರೀಶ್ ಇತಿಹಾಸ ಪ್ರಸಿದ್ಧ ವಿದುರಾಶ್ವತ್ಥ ದನಗಳ ಜಾತ್ರೆಯಲ್ಲಿ ಹಳ್ಳಿಕಾರ್ ಹಾಗೂ ಅಮೃತ ಮಹಲ್ ತಳಿ ಸೇರಿದಂತೆ ಸಾವಿರಾರು ಜಾನುವಾರುಗಳು ಭಾಗವಹಿಸುವ ನಿರೀಕ್ಷೆಯಿದೆ. ಜಾನುವಾರುಗಳ ಯೋಗಕ್ಷೇಮ ಹಾಗೂ ರೈತ ಸಮುದಾಯದ ನೆರವಿಗಾಗಿ ಉಚಿತ ಮೇವು?ನೀರು ವಿತರಣೆ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದು ಹೇಳಿದರು.

ಈ ಸಂದರ್ಭದಲ್ಲಿ 'ನಮ್ಮ ರೈತ ನಮ್ಮ ಸ್ಟಾರ್' ನಮ್ಮ ಸೈನಿಕ ನಮ್ಮ ಸ್ಟಾರ್' ಎಂಬ ವಿಶೇಷ ಪ್ರಶಸ್ತಿಯನ್ನು ಘೋಷಿಸಲಾಗಿದೆ. ದೇಶದ ಅನ್ನದಾತ ರೈತರು ಹಾಗೂ ಗಡಿಭಾಗದಲ್ಲಿ ಕರ್ತವ್ಯ ನಿರ್ವಹಿಸುವ ಸೈನಿಕರ ಸೇವೆಯನ್ನು ಗೌರವಿಸುವ ಉದ್ದೇಶದಿಂದ ಈ ಪ್ರಶಸ್ತಿ ನೀಡಲಾಗುತ್ತಿದೆ ಎಂದು ವೇದಿಕೆ ಅಧ್ಯಕ್ಷ ಅಂಬರೀಶ್ ತಿಳಿಸಿದರು. ಈ ಬಾರಿ ಜಿಲ್ಲೆಯಿಂದ ಆರು ಮಂದಿ ರೈತರು ಮತ್ತು ಆರು ಮಂದಿ ಸೈನಿಕರನ್ನು ಪ್ರಶಸ್ತಿಗೆ ಆಯ್ಕೆ ಮಾಡಲಾಗಿದ್ದು,ಅವರ ಹೆಸರುಗಳನ್ನು ಘೋಷಿಸಲಾಯಿತು.

ವೇದಿಕೆ ಕಾರ್ಯದರ್ಶಿ ಉದಯ ಆರಾಧ್ಯ ಮಾತನಾಡಿ, ಹಳ್ಳಿ ಜಾತ್ರೆಗಳ ಸಾಂಸ್ಕೃತಿಕ ವೈಭವವನ್ನು ಕಾಪಾಡುವ ಅಗತ್ಯವಿದೆ. ಕೆಲವರು ಜಾತ್ರೆಗಳಲ್ಲಿ ಮನರಂಜನಾ ಕಾರ್ಯಕ್ರಮಗಳಿಗೆ ಹೆಚ್ಚಿನ ಪ್ರಾಮುಖ್ಯತೆ ನೀಡುವ ಮೂಲಕ ಅಸಭ್ಯ ಸಂಸ್ಕೃತಿಯನ್ನು ಉತ್ತೇಜಿಸುತ್ತಿದ್ದಾರೆ. ರೈತರು ಹೊಲದಲ್ಲಿ ಹೋರಾಡುತ್ತಾರೆ, ಸೈನಿಕರು ಗಡಿಯಲ್ಲಿ ಹೋರಾಡುತ್ತಾರೆ. ದೇಶದ ನೆಲ ಮತ್ತು ಗಡಿಯನ್ನು ಕಾಪಾಡುವ ಇವರಿಗೆ ಗೌರವ ಸಲ್ಲಿಸುವ ಸಣ್ಣ ಪ್ರಯತ್ನವೇ 'ನಮ್ಮ ರೈತ ನಮ್ಮ ಸ್ಟಾರ್–ನಮ್ಮ ಸೈನಿಕ ನಮ್ಮ ಸ್ಟಾರ್' ಪ್ರಶಸ್ತಿ ಎಂದು ಹೇಳಿದರು.

ಹರಿಕೃಷ್ಣ ಫೌಂಡೇಶನ್ ಅಧ್ಯಕ್ಷ ಹರೀಶ್ ರೆಡ್ಡಿ ಮಾತನಾಡಿ, ರೈತರ ಸಂಕಷ್ಟವನ್ನು ಮನಗಂಡು ಉಚಿತ ಜಾನುವಾರು ಮೇವು ಮತ್ತು ನೀರು ವಿತರಿಸಲು ಮುಂದಾಗಿರುವ ನವ ಕರ್ನಾಟಕ ಯುವ ಶಕ್ತಿ ವೇದಿಕೆಯ ಸಾಮಾಜಿಕ ಬದ್ಧತೆ ಶ್ಲಾಘನೀಯವಾಗಿದೆ ಎಂದರು. ಸರ್ಕಾರದೊಂದಿಗೆ ಸಂಘ ಸಂಸ್ಥೆಗಳು ಸಹಭಾಗಿತ್ವದಲ್ಲಿ ಕಾರ್ಯನಿರ್ವಹಿಸಿದರೆ ಗ್ರಾಮೀಣ ಭಾಗದ ಜನತೆಗೆ ಹೆಚ್ಚಿನ ಪ್ರಯೋಜನವಾಗಲಿದೆ. ಸಮಾಜ ನಿರ್ಮಾಣದಲ್ಲಿ ಯುವಕರ ಪಾತ್ರ ಮಹತ್ವದ್ದಾಗಿದ್ದು, ಕೃಷಿ ಮತ್ತು ರಾಷ್ಟ್ರಸೇವೆಯತ್ತ ಗೌರವ ಬೆಳೆಸುವುದು ಅಗತ್ಯ ಎಂದು ಅವರು ಅಭಿಪ್ರಾಯಪಟ್ಟರು. ಈ ಸಂದರ್ಭದಲ್ಲಿ ವೇದಿಕೆಯ ಪದಾಧಿಕಾರಿಗಳಾದ ಆನಂದ್, ಶಿವಕುಮಾರ್ ಸೇರಿದಂತೆ ಹಲವು ಮುಖಂಡರು ಉಪಸ್ಥಿತರಿದ್ದರು.

## ಕಬ್ಬು ಸರಬರಾಜು ಮಾಡಿದ ರೈತರಿಗೆ ಆರ್ಥಿಕ ನೆರವು: ಡಾ.ಕುಮಾರ

**ಮಂಡ್ಯ:** 2025–26 ಹಂಗಾಮಿನಲ್ಲಿ ಸಕ್ಕರೆ ಕಾರ್ಖಾನೆಗಳಿಗೆ ಕಬ್ಬು ಪೂರೈಕೆ ಮಾಡಿದ ರೈತರಿಗೆ ಕಾರ್ಖಾನೆಗಳು ಪಾವತಿಸಬೇಕಾದ ಎಫ್ಆರ್‌ಪಿ ದರ ಹೊರತುಪಡಿಸಿ ಹೆಚ್ಚುವರಿಯಾಗಿ ರಾಜ್ಯ ಸರ್ಕಾರದಿಂದ ರೂ 50 ಹಣವನ್ನು ಪಾವತಿಸಲು ತೀರ್ಮಾನಿಸಲಾಗಿದೆ. ಹಾಗೂ ಸಕ್ಕರೆ ಕಾರ್ಖಾನೆ ವತಿಯಿಂದ ಸಹ ಪ್ರತಿ ಟನ್ ಗೆ ರೂ 50 ಹಣವನ್ನು ಹೆಚ್ಚುವರಿಯಾಗಿ ಪಾವತಿಸಲಾಗುತ್ತದೆ ಎಂದು ಹೇಳಿದರು.

ಜಿಲ್ಲಾಧಿಕಾರಿ ಕಚೇರಿ ಸಭಾಂಗಣ ದಲ್ಲಿ ಹಂಗಾಮಿನಲ್ಲಿ ಸಕ್ಕರೆ ಕಾರ್ಖಾನೆಗಳಿಗೆ ಕಬ್ಬು ಸರಬರಾಜು ಮಾಡಿದ ರೈತರಿಗೆ ನಿಗದಿಪಡಿಸಿರುವ ಹೆಚ್ಚುವರಿ ಕಬ್ಬಿನ ಬೆಲೆಯನ್ನು ಬಿಡುಗಡೆ ಮಾಡುವ ಕುರಿತು ಸಭೆಯಲ್ಲಿ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ರೈತರಿಗೆ ಒಟ್ಟಾಗಿ ಪ್ರತಿ ಟನ್ ಗೆ ರೂ 100 ಹಣ ಪಾವತಿ ಮಾಡಲು ಕ್ರಮ ವಹಿಸಲಾಗಿದೆ.

2025–26 ಸಾಲಿನ ಹಂಗಾಮಿ ಕಬ್ಬು ಸರಬರಾಜು ಮಾಡಿದ ರೈತರಿಗೆ ಒಟ್ಟು 10 ಕೋಟಿ ಆರ್ಥಿಕ ನೆರವು ಮಂಡ್ಯ ಜಿಲ್ಲೆ ಅಲ್ಲಿ ಸರ್ಕಾರದ ಕಡೆ ಇಂದ ನೀಡಲಾಗುತ್ತಿದೆ ಎಂದು ಅವರು ಹೇಳಿದರು.

ಸದರಿ ಆದೇಶದಂತೆ ಅನುದಾನ ಬಿಡುಗಡೆ ಮಾಡಲು ಅಗತ್ಯ ಕ್ರಮವಹಿಸಲಾಗುವುದು ಎಂದು ಸಭೆಯಲ್ಲಿ ತಿಳಿಸಿದರು.

ಸಭೆಯಲ್ಲಿ ಆಹಾರ ಮತ್ತು ನಾಗರೀಕ ಸರಬರಾಜು ಇಲಾಖೆಯ ಉಪ ನಿರ್ದೇಶಕರು ಪ್ರತೀಕ ಹೆಗ್ಡೆ ಹಾಗೂ ಸಕ್ಕರೆ ಕಾರ್ಖಾನೆಯ ಅಧಿಕಾರಿಗಳು, ಜಿಲ್ಲಾ ಖಜಾನೆ ಅಧಿಕಾರಿ ಉಪಸ್ಥಿತರಿದ್ದರು.



## ವಸತಿ ನಿಲಯಗಳಲ್ಲಿ ವಿದ್ಯಾರ್ಥಿಗಳ ಪರೀಕ್ಷಾ ಫಲಿತಾಂಶ ಉತ್ತಮಗೊಳಿಸಿ : ಜಿ.ಪಂ. ಸಿಇಓ,

**ಮಂಡ್ಯ:** ಸಮಾಜ ಕಲ್ಯಾಣ ಇಲಾಖೆ ಮತ್ತು ಹಿಂದುಳಿದ ವರ್ಗಗಳ ಕಲ್ಯಾಣಗಳ ಇಲಾಖೆಯ ವಸತಿ ನಿಲಯಗಳಲ್ಲಿನ ಎಸ್.ಎಸ್.ಎಲ್.ಸಿ. ವಿದ್ಯಾರ್ಥಿಗಳಿಗೆ ರಾತ್ರಿ ತರಗತಿ ನಡೆಸುವ ಮೂಲಕ ಪರೀಕ್ಷಾ ಫಲಿತಾಂಶವನ್ನು ಉತ್ತಮಗೊಳಿಸುವಂತೆ ವಾರ್ಡನ್ ಗಳಿಗೆ ಜಿ.ಪಂ. ಸಿಇಓ ನಂದಿನಿ ಕೆ.ಆರ್. ಅವರು ಸೂಚಿಸಿದರು.

ಸಮಾಜ ಕಲ್ಯಾಣ ಇಲಾಖೆ ಮತ್ತು ಹಿಂದುಳಿದ ವರ್ಗಗಳ ಕಲ್ಯಾಣಗಳ ಇಲಾಖೆಯ ಎಲ್ಲಾ ವಸತಿ ನಿಲಯಗಳ ವಾರ್ಡನ್ ಗಳಿಗೆ ಏರ್ಪಡಿಸಲಾಗಿದ್ದ ವಿಡಿಯೋ ಸಂವಾದ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಎಲ್ಲಾ ವಾರ್ಡನ್ ಗಳು ಕಡ್ಡಾಯವಾಗಿ ವಸತಿ ನಿಲಯಗಳಲ್ಲಿ ವಾಸ್ತವ್ಯವಿರಬೇಕು, ಪ್ರತಿದಿನ ರಾತ್ರಿ ಮತ್ತು ಬೆಳಗ್ಗೆ ಹತ್ತನೇ ತರಗತಿ ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿರುವ ಜಿಪಿಎಸ್ ಫೋಟೋವನ್ನು ಕಡ್ಡಾಯವಾಗಿ ವಾಟ್ಸಪ್ ಮೂಲಕ ಕಳುಹಿಸುವಂತೆ ಸೂಚಿಸಿದರು.

ಪೂರ್ವ ಸಿದ್ದತಾ ಪರಿಕ್ಷೆ–2ರಲ್ಲಿ ವಸತಿ ನಿಲಯಗಳಲ್ಲಿನ 438 ವಿದ್ಯಾರ್ಥಿಗಳ ಪೈಕಿ 370 ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದು 68 ವಿದ್ಯಾರ್ಥಿಗಳು ಅನುತ್ತೀರ್ಣರಾಗಿದ್ದರು, ಮುಂದಿನ 18 ದಿನಗಳಲ್ಲಿ ಹಾಸ್ಟೆಲ್ ಗಳ ಎಲ್ಲಾ ವಿದ್ಯಾರ್ಥಿಗಳು ಎಸ್.ಎಸ್.ಎಲ್.ಸಿ ಪರೀಕ್ಷೆಯಲ್ಲಿ ಉತ್ತೀರ್ಣರಾಗುವಂತೆ ವಾರ್ಡನ್ ಗಳು ಶ್ರದ್ಧೆಯಿಂದ ಕರ್ತವ್ಯ ನಿರ್ವಹಿಸಬೇಕೆಂದು ಕಟ್ಟು ನಿಟ್ಟಾಗಿ ಸೂಚಿಸಿದರು.




ಸರ್ಕಾರದಸವಲತ್ತುಸದುಪಯೋಗಪಡಿಸಿಕೊಂಡು ಉತ್ತಮ ಫಲಿತಾಂಶ ಪಡೆಯಲು ಕರೆ: ಹಾಸ್ಟೆಲ್ ವಿದ್ಯಾರ್ಥಿಗಳಿಗೆ ಸರ್ಕಾರ ಆನೇಕ ಸವಲತ್ತುಗಳನ್ನು ನೀಡುತ್ತಿದ್ದು, ವಿದ್ಯಾರ್ಥಿಗಳು ಹೆಚ್ಚಿನ ಶ್ರಮವಹಿಸಿ ಉತ್ತಮ ಫಲಿತಾಂಶ ಪಡೆಯಬೇಕು. ಪ್ರಸಕ್ತ ಸಾಲಿನಲ್ಲಿ ಹಾಸ್ಟೆಲ್ ಗಳಲ್ಲಿನ ಎಲ್ಲಾ ವಿದ್ಯಾರ್ಥಿಗಳು ಉತ್ತೀರ್ಣರಾಗಬೇಕು ಎಂದು ತಿಳಿಸಿದರು.

ಕಲಿಕೆಯಲ್ಲಿ ಹಿಂದುಳಿದ ವಿದ್ಯಾರ್ಥಿಗಳು ಪರೀಕ್ಷೆಯಲ್ಲಿ ಕನಿಷ್ಠ ಅಂಕಗಳಿಸಿ ಉತ್ತೀರ್ಣರಾಗಲು ಕಲಿಕಾ ಮಿತ್ರ ಪುಸ್ತಕವನ್ನು ಮಕ್ಕಳಿಗೆ ನೀಡಿ ಆತ್ಮವಿಶ್ವಾಸ ಹೆಚ್ಚಿಸುವ ಕೆಲಸ ನಿರ್ವಹಿಸಬೇಕೆಂದು ತಿಳಿಸಿದರು ಹಾಗೂ ಅನುತ್ತೀರ್ಣ ವಿದ್ಯಾರ್ಥಿಗಳಿಗೆ ಪ್ರತ್ಯೇಕ ತರಗತಿಗಳನ್ನು ನಡಸುವಂತೆ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ಸೂಚಿಸಿದರು.

ಗೈರು ಹಾಜರಾಗಿರುವ ವಿದ್ಯಾರ್ಥಿಗಳ ಪೋಷಕರಿಗೆ ಪತ್ರ ಬರೆಯುವಂತೆ ಹಾಗೂ ಶಾಲಾ ವಿಶೇಷ ತರಗತಿ ವೀಕ್ಷಣೆ ಜೊತೆಗೆ ಕಡಿಮೆ ಫಲಿತಾಂಶ ಬಂದಿರುವ ಪ್ರತಿ ವಸತಿ ನಿಲಯಗಳಿಗೆ ತಾಲ್ಲೂಕಿನ ಕ್ಷೇತ್ರ ಶಿಕ್ಷಣಾಧಿಕಾರಿರವರು ಭೇಟಿ ನೀಡಬೇಕು ಸೂಚನೆ ನೀಡಿದರು.

**ಹಾಸ್ಟೆಲ್ ಗೆ ಅನಿರೀಕ್ಷಿತ ಭೇಟಿ :** ಮಂಡ್ಯ ನಗರದಲ್ಲಿನ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ವಸತಿ ನಿಲಯಕ್ಕೆ ಅನಿರೀಕ್ಷಿತ ಭೇಟಿ ನೀಡಿ ವಿದ್ಯಾರ್ಥಿಗಳಿಗೆ ರಾತ್ರಿ ತರಗತಿ ನಡೆಸುತ್ತಿರುವ ಕುರಿತು ಜಿ. ಪಂ. ಸಿಇಓ ಪರಿಶೀಲನೆ ನಡೆಸಿ ವಿದ್ಯಾರ್ಥಿಗಳೊಂದಿಗೆ ಸಂವಾದ ನಡೆಸಿದರು.

ಈ ಸಂದರ್ಭದಲ್ಲಿ ಶಾಲಾ ಶಿಕ್ಷಣ ಇಲಾಖೆಯ ಉಪನಿರ್ದೇಶಕರಾದ ಲೋಕೇಶ್ ಜಿ, ಡಯಟ್ ಪ್ರಾಂಶುಪಾಲರಾದ ಯೋಗೇಶ್, ಸಮಾಜ ಕಲ್ಯಾಣ ಇಲಾಖೆಯ ಉಪನಿರ್ದೇಶಕರಾದ ಶ್ರೀನಿವಾಸ್, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಜಿಲ್ಲಾ ಅಧಿಕಾರಿ ಮಂಜುಳಾ, ಕ್ಷೇತ್ರ ಶಿಕ್ಷಣಾಧಿಕಾರಿಗಳು, ಸಮಾಜ ಕಲ್ಯಾಣ ಇಲಾಖೆಯ ಸಹಾಯಕ ನಿರ್ದೇಶಕರುಗಳು ಹಾಗೂ ಜಿಲ್ಲೆಯ ಎಲ್ಲಾ ಹಾಸ್ಟೆಲ್ ವಾರ್ಡನ್ ಗಳು ಹಾಜರಿದ್ದರು.

## ಹಿಂದಿನ ಮೀಸಲಾತಿ ನಿಯಮಾನುಸಾರ ಹುದ್ದೆ ಭರ್ತಿ ನಿರ್ಧಾರ ಸೂಕ್ತವಲ್ಲ: ವೆಂಕಟಗಿರಿಯಯ್ಯ



**ಮಂಡ್ಯ:** ರಾಜ್ಯಪಾಲರ ಅಂಕಿತ ಪಡೆದ ಪರಿಶಿಷ್ಟ ಜಾತಿಯ ಒಳ ಮೀಸಲಾತಿಯಿಲ್ಲದೇ ಹಿಂದಿನ ಮೀಸಲಾತಿ ನಿಯಮಾನುಸಾರ 56,342 ಹುದ್ದೆಗಳನ್ನು ತುಂಬುವ ರಾಜ್ಯಸರಕಾರದ ನಿರ್ಧಾರ ಸೂಕ್ತವಲ್ಲ ಎಂದು ಕರ್ನಾಟಕ ದಲಿತ ಸಂಘರ್ಷ ಸಮಿತಿಯ ರಾಜ್ಯಾಧ್ಯಕ್ಷ ವೆಂಕಟಗಿರಿಯಯ್ಯ ಖಂಡಿಸಿದರು. ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 30 ದಿನದೊಳಗೆ ಈ ಹುದ್ದೆಗಳನ್ನು ಹಿಂದಿನ ಮೀಸಲಾತಿಯಂತೆ ಭರ್ತಿ ಮಾಡಲು ಸಿದ್ದರಾಮಯ್ಯ ನೇತೃತ್ವದ ಸಚಿವ ಸಂಪುಟ ತೀರ್ಮಾನಿಸಿದೆ. ಇದರಿಂದ ಅಸ್ಪೃಶ್ಯ ಜಾತಿಗಳಿಗೆ ಅನ್ಯಾಯವಾಗಲಿದೆ ಎಂದು ಆರೋಪಿಸಿದರು.

ನ್ಯಾ.ನಾಗಮೋಹನ್‌ದಾಸ್ ಆಯೋಗದ ವರದಿಯಂತೆ ಸಿದ್ದರಾಮಯ್ಯ ಸರಕಾರದ ಶೇ.50ರಷ್ಟು ಮೀಸಲಾತಿಯ ಮಿತಿಯ ಒಳ ಮೀಸಲಾತಿ ನೀತಿಯ ಪ್ರವರ್ಗಗಳ ಅನುಸಾರ 8500 ಹುದ್ದೆಗಳನ್ನು ಸಮಾಜ ಹಂಚಿಕೆ ಮಾಡಲು ಸರಕಾರ ಮುಂದಾಗಬೇಕೆಂದು ಒತ್ತಾಯಿಸಿದರು.

ಪರಿಶಿಷ್ಟ ಜಾತಿ ಎಬಿಸಿ ಪ್ರವರ್ಗದ ಒಳಮೀಸಲಾತಿಗೆ ರಾಜ್ಯಪಾಲರ ಅಂಕಿತ ಪಡೆದ ಸಿದ್ದರಾಮಯ್ಯ ಸರಕಾರ ನಿರುದ್ಯೋಗಿ ಯುವ ವಿದ್ಯಾರ್ಥಿಗಳ ಹೋರಾಟಕ್ಕೆ ಮಣಿದು ಪ್ರಸಕ್ತ ಒಳ ಮೀಸಲಾತಿ ನೀತಿ ಕೈಬಿಟ್ಟು ಹಿಂದಿನ ಮೀಸಲಾತಿ ನೀತಿ ಅನುಸಾರ ನಿರ್ಧಾರ ಕೈಗೊಂಡಿರುವುದು ಖಂಡನಾರ್ಹ, ಕೂಡಲೇ ಎಬಿಸಿ ಪರ್ವಗವಾರು ಶೇ15ರಷ್ಟು 8500 ಹುದ್ದೆಗಳನ್ನು ಸಮಾನವಾಗಿ ಹಂಚಿಕೆ ಮಾಡಿ ಭರ್ತಿ ಮಾಡುವ ನಿರ್ಣಯ ಮಾಡಬೇಕು. ಇಲ್ಲವಾದಲ್ಲಿ ಈ ಅನ್ಯಾಯದ ವಿರುದ್ಧ ತೀವ್ರ ಹೋರಾಟ ಮಾಡಲಾಗುವುದು ಎಂದು ಎಚ್ಚರಿಸಿದರು. ಗೋಷ್ಠಿಯಲ್ಲಿ ಜಿಲ್ಲಾಧ್ಯಕ್ಷ ಬಿ.ಆನಂದ್, ಮಹಿಳಾ ಜಿಲ್ಲಾಧ್ಯಕ್ಷ ಸುಶ್ಮಿತ, ಸಂಪನ್ಮೂಲ ವ್ಯಕ್ತಿ ಶರಾವತಿ ಅಶ್ವತ್, ತಾಲೂಕು ಅಧ್ಯಕ್ಷರಾದ ಮುತ್ತುರಾಜ್, ವಿಮಲ ನಂದೀಶ್, ಸುಧಾ ಶ್ರೀಕಂಠು, ಸ್ವಾಮಿ, ಗೀತ ಇದ್ದರು.

## 'ಶ್ರೀ ರೇಣುಕಾಚಾರ್ಯ' ಜಯಂತಿ ಇಂದು

**ತುಮಕೂರು:** ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಮಹಾನಗರ ಪಾಲಿಕೆ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಇವರ ಸಂಯುಕ್ತಾಶ್ರಯದಲ್ಲಿ ಮಾರ್ಚ್ 1ರಂದು ಬೆಳಿಗ್ಗೆ 10.30 ಗಂಟೆಗೆ ನಗರದ ಶ್ರೀ ಜಗದ್ಗುರು ರೇಣುಕಾಚಾರ್ಯ ವೃತ್ತ(ಭದ್ರಮ್ಮ ಕಲ್ಯಾಣ ಮಂಟಪದ ಹತ್ತಿರ)ದಲ್ಲಿ 'ಶ್ರೀ ರೇಣುಕಾಚಾರ್ಯ ಜಯಂತಿ'ಯನ್ನು ಆಯೋಜಿಸಲಾಗಿದೆ.

ರೈಲ್ವೆ ಮತ್ತು ಜಲಶಕ್ತಿ ರಾಜ್ಯ ಖಾತೆ ಸಚಿವ ಹಾಗೂ ಸಂಸದ ವಿ.ಸೋಮಣ್ಣ ಅವರ ಘನ ಉಪಸ್ಥಿತಿಯಲ್ಲಿ ಕಾರ್ಯಕ್ರಮದ ಉದ್ಘಾಟನೆಯನ್ನು ಗೃಹ ಸಚಿವ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಡಾ: ಜಿ. ಪರಮೇಶ್ವರ ನೆರವೇರಿಸಲಿದ್ದಾರೆ. ನಗರ ವಿಧಾನಸಭಾ ಕ್ಷೇತ್ರದ ಶಾಸಕ ಜಿ.ಬಿ.ಜ್ಯೋತಿಗಣೇಶ್ ಅಧ್ಯಕ್ಷತೆ ವಹಿಸುವರು. ಮುಖ್ಯ ಅತಿಥಿಗಳಾಗಿ ಜಿಲ್ಲೆಯ ವಿವಿಧ ಸಚಿವರು, ಶಾಸಕರು, ವಿವಿಧ ಜನಪ್ರತಿನಿಧಿಗಳು ಭಾಗವಹಿಸಲಿದ್ದಾರೆ.

## ಔದಾರ್ಯತೆ

ಸ್ನೇಹ ಲೋಕ



ಸ್ನೇಹಾ ಆನಂದ್

ಯಮುನಾ ತಮ್ಮ ಮನೆ ಕೆಲಸದಳಾದ ಸಾವಿತ್ರಿಯ ಕೈಗೆ ತಿಂಗಳ ಸಂಬಳವನ್ನು ಕೊಡಲು ಹಿತ್ತಿಲು ಕಡೆಗೆ ಹೋದಳು!

ಯಮುನಕ್ಕಾ ದಯವಿಟ್ಟು ಈ ತಿಂಗಳು ಐದುನೂರು ಜಾಸ್ತಿ ಕೊಡ್ತೀರಾ, ನನಗೆ ತುಂಬಾ ಅವಶ್ಯಕತೆ ಇದೆ ಮುಂದಿನ ತಿಂಗಳು ತಡ ಮಾಡದೆ ಸಂಬಳದಲ್ಲಿ ಹಿಡಿದುಕೊಳ್ಳಿ ಎಂದಳು ಸಾವಿತ್ರಿ!

ಆಗ ಯಮುನಾ, ಸಾಧ್ಯವಿಲ್ಲ ನಮಗೂ ಬೇಕಾದಷ್ಟು ಸಮಸ್ಯೆಗಳಿವೆ ಸಾವಿತ್ರಿ ಆಗಲ್ಲ ಎಂದಾಗ, ಸರಿ ಅಕ್ಕ ಪರವಾಗಿಲ್ಲ ಎಂದು ಯಮುನಾ ಕೊಟ್ಟ ತಿಂಗಳ ಸಂಬಳವನ್ನು ಭಕ್ತಿಯಿಂದ ಕಣ್ಣಿಗೊತ್ತಿಕೊಂಡು ಸೆರಗಲ್ಲಿ ಕಟ್ಟಿಕೊಂಡು ಮನೆ ಕೆಲಸವನ್ನು ಆಸಕ್ತಿಯಿಂದ ಅಷ್ಟೇ ಅಚ್ಚುಕಟ್ಟಾಗಿ ಮುಗಿಸಿ ಹೊರಟಳು!

ಮನೆ ಗೇಟ್ ತೆಗೆದು ಸಾವಿತ್ರಿ ಹೊರಗೆ ಬಂದಾಗ ಪಕ್ಕದ ಮನೆಯ ಕೆಲಸದವಳು ರಂಗಿ ಸಿಕ್ಕು ಅವಳ ಜೊತೆಗೆ ಮಾತನಾಡುತ್ತಾ ನಿಂತಳು!

ಸಾವಕ್ಕ ಇನ್ನೂರು ರೂಪಾಯಿ ಕೊಡ್ತಿಯಾ ನನಗೆ ತುಂಬಾ ಕಷ್ಟವಿದೆ ಮನೆಯಲ್ಲಿ ರೇಷನ್ ಇಲ್ಲ , ಮಕ್ಕಳು ಕಾಯ್ತಾ ಇವೆ ಊಟಕ್ಕೆ ಎಂದಳು ರಂಗಿ !

ಆಗ ಸಾವಿತ್ರಿ ತಕ್ಷಣವೇ ಯಮುನಾ ಕೊಟ್ಟ ದುಡ್ಡನ್ನು ಸೆರಗಿನ ಗಂಟಿನಿಂದ ತೆಗೆದು, ತಗೋ ರಂಗಿ ಮೂನ್ನೂರು ರೂಪಾಯಿ ಇದೆ, ಮೊದಲು ಮಕ್ಕಳಿಗೆ ಬಿಸಿ ಬಿಸಿ ಅಡುಗೆ ಮಾಡಿ ಹಾಕು ಅವುಗಳನ್ನು ಕಾಯಿಸಬೇಡ ಹೋಗು ಎಂದಳು!

ಸಾವಕ್ಕಾ ನಿನ್ನ ಮನಸ್ಸು ತುಂಬಾ ದೊಡ್ಡದು ನೋಡು, ಇನ್ನೂರು ಕೇಳಿದರೆ ಮುನ್ನೂರು ಕೊಡ್ತಿಯಾ, ದೇವರು ನಿನ್ನ ಚೆನ್ನಾಗಿಟ್ಟಿರಲಿ ಎಂದು ಕಣ್ಣು ತುಂಬಿ ಕೊಂಡ ರಂಗಿ,

ಮುಂದಿನ ತಿಂಗಳು ಖಂಡಿತಾ ಕೊಡ್ತೀನಿ ಸಾವಕ್ಕ ಎನ್ನುತ್ತಿದ್ದಂತೆ, ಏಯ್ ಈಗ ನಡಿ ರಂಗಿ ಮೊದಲು ಮಕ್ಕಳ ಹೊಟ್ಟೆ ತುಂಬಿಸು ಅಂತ ಸಲುಗೆ, ಪ್ರೀತಿಯಿಂದ ತಲೆ ಸವರಿದಳು!

ಇದನ್ನೆಲ್ಲ ಕಿಟಿಕಿಯಿಂದ ನೋಡುತಿದ್ದ ಯಮುನಾಳಿಗೆ ಆಶ್ಚರ್ಯ ಈಗ ತಾನೆ ಸಾವಿತ್ರಿ ತನ್ನ ಕಷ್ಟಕ್ಕೆ ದುಡ್ಡು ಕೇಳಿದವಳು ಎಷ್ಟು ಸರಳತೆಯಿಂದ ದುಡ್ಡನ್ನು ಕೈಯೆತ್ತಿ ಕೊಟ್ಟು ಬಿಟ್ಟಳಲ್ಲ ಎಂತಹ ಔದಾರ್ಯತೆ ಸಾವಿತ್ರಿಯದು ಎನಿಸಿ ತಕ್ಷಣವೇ ಸಾವಿತ್ರಿಯನ್ನು ಒಳಗೆ ಕರೆದು ಸಾವಿರ ರೂಪಾಯಿ ಜಾಸ್ತಿ ಕೊಟ್ಟಳು!

ಧನ್ಯವಾದಗಳು ಯಮುನಕ್ಕಾ, ಬೇಗ ನಿಮ್ಮ ದುಡ್ಡು ವಾಪಸ್ ಕೊಡ್ತೀನಿ ಎಂದಾಗ ಸಾವಿತ್ರಿ, ಪರವಾಗಿಲ್ಲ ನಿಧಾನವಾಗಿ ಕೊಡು ಎಂದಳು ನಸುನಗುತ್ತಾ ಯಮುನಾ!

ಸಾವಿತ್ರಿ ಹೋದ ದಿಕ್ಕನ್ನೇ ನೋಡುತ್ತಾ ಔದಾರ್ಯತೆಯನ್ನು ನೋಡಿ ಔದಾರ್ಯತೆಯನ್ನು ಕಲಿತೆ ಎಂದು ಯಮುನಾ ಮನದಲ್ಲೇ ಅಂದುಕೊಂಡು ಸಂತೃಪ್ತಿಗೊಂಡಳು!





ಸಾಕ್ಷಿ ಶ್ರೀಕಾಂತ್ ತಿಕೋಟಿಕರ
ಕೊಪ್ಪಳ.

# ಉಣ್ಣುವ ಅನ್ನಕ್ಕೆ ವಿಷವನ್ನು ಬೆರೆಸಿ ಸುಖವ ಕಂಡರೆ?

ಚುನಾವಣೆಗಳು ಬಂದರೆ ಸಾಕು ಆಶ್ವಾಸನೆಗಳು ಸುರಿಮಳೆಗಳಿಗೆ ಬರುತ್ತವೆ ಗ್ಯಾರಂಟಿ ಯೋಜನೆ ಅಡಿಯಲಿ ಹಲವು ಲೋಭಗಳನ್ನು ತೋರಿಸಿ ಜನರ ಓಟುಗಳನ್ನು ಪಡೆಯುವ ಸರ್ಕಾರ! ಬೀಚಿಯವರು ಹೇಳಿದಂತೆ ಮತವನ್ನಾಗಲಿ ಮಗಳನ್ನಾಗಲಿ ಅಯೋಗ್ಯನಿಗೆ ಕೊಡಬಾರದು. ಜನರು ಕೂಡ ಕುಕ್ಕರಿಗಾಗಿ...ದುಡ್ಡಿಗಾಗಿ ಓಟುಗಳನ್ನು ಮಾರಿಕೊಂಡು ಬಿಡುತ್ತಾರೆ . ರಾಜಕಾರಣಿಗಳು ಓಟುಗಳನ್ನು ಕೇಳಲು ಬಂದಾಗ ಜನರ ಅಹವಾಲು , ಉತ್ತಮ ರಸ್ತೆ ಬೆಲೆ ಏರಿಕೆ ಉಚಿತ ಸೌಲಭ್ಯ ಇವುಗಳ ಸುತ್ತಲೇ ಇರುತ್ತದೆ ಆದರೆ ವಾಸ್ತವಿಕವಾಗಿ ಇದನ್ನು ಮೀರಿದ ಒಂದು ದೊಡ್ಡ ಅಂಶವಿದೆ. ಮೊನ್ನೆ ವರದಿ ಒಂದರ ಪ್ರಕಾರ ತರಕಾರಿಗಳಲ್ಲಿ ಹಾನಿಕಾರಕ ರಾಸಾಯನಿಕಗಳು ಪತ್ತೆಯಾದವು ಅನ್ನಕ್ಕೆ ವಿಷವನ್ನು ಬೆರೆಸಿ ಉಣ್ಣುತ್ತಿದ್ದೇವೆ. ಅಕ್ರಮವಾದ ಕೈಗಾರಿಕೆಗಳು ಮತ್ತು ಗುಣಮಟ್ಟವನ್ನು ಪರೀಕ್ಷಿಸಲಾರದೆ ಬಳಸುವ ವಾಹನಗಳು ವಿಷಕಾರಿ ಹೊಗೆ ಉಗುಳುತಲೆ ಇರುತ್ತವೆ.

ಪ್ರಗತಿಯ ಅರ್ಥವನ್ನು ಮರುಪರಿಶೀಲಿಸೋಣ

ದೇಶದಲ್ಲಿ ಎತ್ತರದ ಕಟ್ಟಡಗಳು, ಹೊಸ ಸೇತುವೆಗಳು, ಆಧುನಿಕ ವಿಮಾನ ನಿಲ್ದಾಣಗಳು ನಿರ್ಮಾಣವಾದರೂ ಜನರು ವಿಷಕಾರಿ ಆಹಾರ ತಿನ್ನಬೇಕಾದರೆ, ಕಲುಷಿತ ಗಾಳಿ ಉಸಿರಾಡಬೇಕಾದರೆ ಅದು ನಿಜವಾದ ಪ್ರಗತಿಯೇ?

ಸಂಪತ್ತು ಮಾಡಿದ್ದರಿಂದ ಮಾತ್ರ ಮಕ್ಕಳ ಭವಿಷ್ಯ ಸುರಕ್ಷಿತವಾಗುವುದಿಲ್ಲ. ಅವರಿಗೆ ಆರೋಗ್ಯಕರ ಪರಿಸರ ಒದಗಿಸುವುದು ನಿಜವಾದ ಹೊಣೆಗಾರಿಕೆ.


ಮನದ ಮಾತು...

ಹಬ್ಬಕ್ಕೆ ತಂದ ಹರಕೆಯ ಕುರಿ
ತೋರಣಕ್ಕೆ ತಂದ ತಳಿರ ಮೇಯುತಿತ್ತು;
ಕೊಂದಹರೆಂಬುದನರಿಯದೆ
ಬೆಂದೊಡಲ ಹೊರೆಯ ಹೋಯಿತ್ತಲ್ಲದೆ!
ಅದಂದೇ ಹುಟ್ಟಿತ್ತು, ಅದಂದೇ ಹೊಂದಿತ್ತು;
ಕೊಂದವರುಳಿದರೇ ,ಕೂಡಲಸಂಗಮದೇವಾ!!

ಬಲಿ ಕೊಡಲು ತಂದ ಕುರಿಯನ್ನು ಚೆಂದವಾಗಿ ಸಿಂಗಾರ ಮಾಡಿ ಕೊರಳಲಿ ಹಾರ ಹಾಕಿ ತೋರಣವನ್ನು ಕಟ್ಟಿದರಂತೆ.ಅದು ತನ್ನ ಕೊರಳಲ್ಲಿರುವ ಹಾರ ತಾನೇ ತಿನ್ನುತ್ತಿತ್ತು!! ಹಾಗೆ ತಿಂದು ಅದು ಎಷ್ಟೊತ್ತು ಬದುಕಲು ಸಾಧ್ಯ? ಅದೇ ರೀತಿ ಕಲಬೆರಕೆ ಆಹಾರ ವಿಷಯುಕ್ತ ನೀರು ವಿಷಮಯ ಗಾಳಿ ಇಂತಹ ಒಂದು ವಾತಾವರಣದಲ್ಲಿ ಮಕ್ಕಳಾಗಲಿ ಪ್ರಜೆಗಳಾಗಲಿ ಎಷ್ಟು ದಿನ ಆರೋಗ್ಯದಿಂದ ಬದುಕಿ ಯಾರು ? ನೀವು ಮಕ್ಕಳಿಗಾಗಿ ಎಷ್ಟು ಸಂಪತ್ತು ಮಾಡಿದ್ದರೇನು ಅವರಿಗೆ ಇಲ್ಲಿ ಶುದ್ಧ ಗಾಳಿ ಉಸಿರಾಡಿಸಲು ಇರದಿದ್ದರೆ ಶುದ್ಧ ಆಹಾರ ತಿನ್ನಲು ಇರದಿದ್ದರೆ.

**ಹೊರಗೆ ಮಾರಾಟ ಮಾಡುವ ತಿಂಡಿಗಳು**

* ಅನಧಿಕೃತ ಬಣ್ಣ ಮತ್ತು ರಾಸಾಯನಿಕಗಳಿಂದ ಕೂಡಿವೆ
* ನಿಷೇಧಿಸಲಾದ ಸಂಸ್ಕರಣ ರಾಸಾಯನಿಕಗಳನ್ನು ಬಳಸುತ್ತಾರೆ.
* ತರಕಾರಿಗಳಲ್ಲಿ ಅತಿ ಹೆಚ್ಚಿನ ಪ್ರಮಾಣದ ರಾಸಾಯನಿಕ ಸೀಸ ಗಳಂತಹ ಹಾನಿಕಾರಕ ಅಂಶಗಳು ಇವೆ
* ಗಲೀಜು ಸ್ಥಳಗಳಲ್ಲಿ ಆಹಾರವನ್ನು ತಯಾರಿಕೆ ಮಾಡುತ್ತಾರೆ
* ಹಲವು ಸಂಸ್ಕರಿಸಿದ ಆಹಾರಗಳಲ್ಲಿ ನಿರ್ಭಂದಿಸಿಲಾದ ಪದಾರ್ಥಗಳ ಬಳಕೆಯಿಂದ ಕ್ಯಾನ್ಸರ್ ಕಾರಕಗಳಾಗಿವೆ.
  ಉದಾ ಎಂ ಡಿ ಎಚ್ ಮತ್ತು ಎವರೆಸ್ಟ ಮಸಾಲೆಗಳಲಿ Eto -ethinol oxide ಕಂಡು ಬಂದಿದೆ. ಅವು ಮಾನವನ ದೇಹಕ್ಕೆ ಹಾನಿಕಾರಕ.
* ಹಣ್ಣುಗಳ ಮೇಲೆ ಅತಿಯಾದ ಕ್ರಿಮಿನಾಶಗಳ ಬಳಕೆ
* ಆಹಾರಗಳಲ್ಲಿ ಅತಿಯಾದ ಕ್ರಿಮಿನಾಶಗಳನ್ನು ಸೇರಿಸಿ ಸಂಸ್ಕರಣಾ ಪದ್ಧತಿಯನ್ನು ಅನುಸರಿಸುವುದು.
* ಹೊಗೆ ಉಗಳುವ ಕಾರ್ಖಾನೆಗಳಿಗೆ ಲಂಚ ತೆಗೆದುಕೊಂಡು ಅನುಮತಿ ನೀಡುವುದು
* ಆಹಾರಗಳು ಗುಣಮಟ್ಟದ ಮಾನದಂಡವನ್ನು ಪರೀಕ್ಷಿಸಿದಾಗ ಕಳಪೆ ಎಂದು ಗೊತ್ತಿದ್ದರೂ ಲಂಚವನ್ನು ಪಡೆದು ಅವುಗಳ ಮಾರಾಟಕ್ಕೆ ಅನುಕೂಲ ಮಾಡಿಕೊಟ್ಟಿದ್ದಾರೆ
* ರೈತರಿಗೆ ಹೆಚ್ಚಿನ ಪ್ರಮಾಣದಲ್ಲಿ ರಾಸಾಯನಿಕ ಬೀಜ ಗೊಬ್ಬರ ಮತ್ತು ಔಷಧಿಗಳನ್ನು ಒದಗಿಸುವುದು
* ಕಲುಷಿತ ಮತ್ತು ಅವೈಜ್ಞಾನಿಕ ರೀತಿಯಲ್ಲಿ ಆಹಾರ ಪದಾರ್ಥಗಳನ್ನು ತಯಾರಿಸಿ ಮಾರಾಟ ಮಾಡುವದು.
* ಹೆಚ್ಚಿನ ಹಾಲು ಉತ್ಪಾದನೆಗೆ ಪಶುಗಳಿಗೆ oxitocin ಕೊಡುವದು.



ಇಂತಹ ಆಹಾರ ಪದಾರ್ಥಗಳನ್ನು ಸೇವಿಸಿ ಜನರು ಪದೇ ಪದೇ ಕಾಯಿಲೆಗೆ ತುತ್ತಾಗುತ್ತಾರೆ . ವಿಷಯುಕ್ತ.ಗಾಳಿಯಿಂದ ಸಣ್ಣ ಮಕ್ಕಳಿಗೂ ಕೂಡ ಅಸ್ತಮಾ ಮತ್ತು ಉಸಿರಾಟದ ತೊಂದರೆ ಅಂತಹ ರೋಗಗಳು ಬರುತ್ತವೆ. ಕಲಬೆರಿಕೆ ಆಹಾರ ಪದಾರ್ಥಗಳನ್ನು ತಿನ್ನುವುದರಿಂದ ಕ್ಯಾನ್ಸರ್ ಮತ್ತು ಹೃದಯ ಸಂಬಂಧಿ ಕಾಯಿಲೆಗಳು ಹೆಚ್ಚಾಗುತ್ತಿವೆ ದುಡಿಯುವುದಕ್ಕಾಗಿ ಅಥವಾ ಓದಲು ಎಂದು ಮಕ್ಕಳು ಮನೆಯವರು ಮನೆಯಿಂದ ಹೊರಗಡೆ ಇರುವಾಗ ಹೋಟೆಲ್ ಗಳಲಿ ಊಟ ತಿಂಡಿ ತಿನ್ನುವುದು ಸಾಮಾನ್ಯವಾಗಿರುತ್ತದೆ. ಇಂತಹ ವಿಷಯುಕ್ತ ಪದಾರ್ಥಗಳನ್ನು ನಿತ್ಯವೂ

ನಿಸ್ಸಂಕೋಚವಾಗಿ ಮಾರಾಟವಾಗುತ್ತದೆ. ಅಂತಹದನ್ನು ತಿಂದು ಹೇಗೆ ಬದುಕಲು ಸಾಧ್ಯ!!

ಇದಕ್ಕೆಲ್ಲ ಕೇವಲ ಸರ್ಕಾರದ ಬೇಜವಾಬ್ದಾರಿ ಕಾರಣವಲ್ಲ.. ಎಲ್ಲ ಪ್ರಜೆಗಳಾದ ನಾವು ಕೂಡ ಕಾರಣಕರ್ತರು. ರಾಜಕಾರಣಿಗಳು ಓಟುಗಳನ್ನು ಕೇಳಲು ಬಂದಾಗ ನಾವು ಎಂದಾದರೂ ನಮಗೆ ಉತ್ತಮ ಗಾಳಿ ಕೊಡಿ...ಉತ್ತಮ, ಕಲಬೆರಕೆ ಇಲ್ಲದ ಆಹಾರ ಪದಾರ್ಥಗಳನ್ನು ಸರಬರಾಜು ಮಾಡಿ ನಮಗೆ ಉತ್ತಮ ಆರೋಗ್ಯ ಬೇಕು....ಎಂಬಂತಹ ವಾಸ್ತವದ ಪ್ರಶ್ನೆಗಳನ್ನು ಕೇಳಿದ್ದೇವೆಯಾ...ಇಲ್ಲ!! ನಮ್ಮ ಅಭಿಲಾಷೆಗಳು ಯಾವತ್ತಿದ್ದರೂ ಸಂಪತ್ತಿನ ಸುತ್ತ ಸುತ್ತುವವು.

**ಕಾನೂನು ರಕ್ಷಣೆ ? ಜನರ ಹಕ್ಕು**

ಜನರ ಆರೋಗ್ಯವನ್ನು ಕಾಪಾಡುವುದು ಸರ್ಕಾರದ ಪ್ರಮುಖ ಕರ್ತವ್ಯ.

ಭಾರತದಲ್ಲಿ ಆಹಾರ ಸುರಕ್ಷತೆಗಾಗಿ Food Safety and Standards Authority of India (FSSAI) ಎಂಬ ಸಂಸ್ಥೆ ಕಾರ್ಯನಿರ್ವಹಿಸುತ್ತದೆ. ಆಹಾರ ಸುರಕ್ಷತೆ ಮತ್ತು ಮಾನದಂಡಗಳ ಕಾಯ್ದೆ 2006 (Food Safety and Standards Act, 2006) ಮೂಲಕ ಆಹಾರ ಗುಣಮಟ್ಟವನ್ನು ನಿಯಂತ್ರಿಸಲಾಗುತ್ತದೆ.

ಆದರೆ ಪ್ರಶ್ನೆ ಏನೆಂದರೆ:

* ನಿಯಮಗಳ ಕಟ್ಟುನಿಟ್ಟಿನ ಅನುಷ್ಠಾನ ನಡೆಯುತ್ತಿದೆಯೇ?
* ಪರೀಕ್ಷೆಗಳಲ್ಲಿ ಕಳಪೆ ಎಂದು ಗೊತ್ತಿದ್ದರೂ ಲಂಚದ ಮೂಲಕ ಮಾರಾಟಕ್ಕೆ ಅವಕಾಶ ನೀಡಲಾಗುತ್ತಿದೆಯೇ?
* ಕೈಗಾರಿಕಾ ಮಾಲಿನ್ಯಕ್ಕೆ ಕಟ್ಟುನಿಟ್ಟಿನ ಶಿಕ್ಷೆ ನೀಡಲಾಗುತ್ತಿದೆಯೇ?
  ಕಾನೂನು ಕಾಗದದಲ್ಲಷ್ಟೇ ಉಳಿಯಬಾರದು.

**ಜನರಿಗೆ ಸಿಗಬೇಕಾದ ರಕ್ಷಣೆ:**

* ನಿಯಮಿತ ಗುಣಮಟ್ಟ ಪರೀಕ್ಷೆ
– ಕಳಪೆ ಉತ್ಪನ್ನಗಳಿಗೆ ತಕ್ಷಣದ ನಿಷೇಧ
* ಹೊಣೆಗಾರ ಅಧಿಕಾರಿಗಳಿಗೆ ಶಿಕ್ಷೆ
* ರೈತರಿಗೆ ಜೈವಿಕ ಕೃಷಿಗೆ ಉತ್ತೇಜನ
* ಕೈಗಾರಿಕಾ ಮಾಲಿನ್ಯ ನಿಯಂತ್ರಣದ ಕಠಿಣ ಕ್ರಮಗಳು

**ನಾಗರಿಕರ ಜವಾಬ್ದಾರಿ**

ಈ ಸಮಸ್ಯೆಗೆ ಸರ್ಕಾರ ಮಾತ್ರ ಹೊಣೆಗಾರರಲ್ಲ; ನಾಗರಿಕರಿಗೂ ಪಾತ್ರವಿದೆ.

* ಮತದಾನದ ಸಮಯದಲ್ಲಿ ಆಹಾರ ಸುರಕ್ಷತೆ ಮತ್ತು ಪರಿಸರ ರಕ್ಷಣೆಯ ಕುರಿತು ಪ್ರಶ್ನೆ ಕೇಳಬೇಕು.
* ಜೈವಿಕ ಮತ್ತು ಸ್ಥಳೀಯ ಉತ್ಪನ್ನಗಳನ್ನು ಬೆಂಬಲಿಸಬೇಕು.
* ಆಹಾರ ಲೇಬಲ್ ಓದಿ ಜಾಗರೂಕರಾಗಿ ಖರೀದಿ ಮಾಡಬೇಕು.
* ಕಳಪೆ ಉತ್ಪನ್ನಗಳ ಬಗ್ಗೆ ಸಂಬಂಧಿತ ಅಧಿಕಾರಿಗಳಿಗೆ ದೂರು ನೀಡಬೇಕು.

ಕಾನೂನುಗಳಿವೆ ? ಆದರೆ ಅನುಷ್ಠಾನ ದುರ್ಬಲ

ಆಹಾರ ಸುರಕ್ಷತೆಗಾಗಿ Food Safety and Standards Authority of India (FSSAI) ಕಾರ್ಯನಿರ್ವಹಿಸುತ್ತದೆ.

ಔಷಧಿಗಳ ಗುಣಮಟ್ಟ ಮತ್ತು ಮಾರಾಟವನ್ನು Central Drugs Standard Control Organization (CDSCO) ಮತ್ತು ರಾಜ್ಯ ಔಷಧ ನಿಯಂತ್ರಣ ಇಲಾಖೆಗಳು ನೋಡುತ್ತವೆ.

ಆಹಾರಕ್ಕೆ Food Safety and Standards Act, 2006, ಔಷಧಿಗಳಿಗೆ Drugs and Cosmetics Act, 1940 ಅನ್ವಯ.

ಕಾಗದದಲ್ಲಿ ದಂಡ, ಲೈಸೆನ್ಸ್ ರದ್ದು, ಜೈಲು ಶಿಕ್ಷೆ?ಎಲ್ಲಾ ಇವೆ. ಆದರೆ ಪರಿಶೀಲನೆಗಳ ಕೊರತೆ, ಪ್ರಕರಣಗಳ ವಿಳಂಬ, ಲಂಚ?ಒತ್ತಡಗಳು ಶಿಕ್ಷೆಯನ್ನು ಬಲಹೀನಗೊಳಿಸುತ್ತವೆ.

**ಭಯವಿಲ್ಲ ಎನ್ನುವ ಪರಿಸ್ಥಿತಿಯ ಕಾರಣಗಳು**

* ಪತ್ತೆ ಮಾಡುವ ವ್ಯವಸ್ಥೆ ಕಡಿಮೆ: ನಿಯಮಿತ ಸ್ಯಾಂಪಲ್ ಪರೀಕ್ಷೆಗಳು ಎಲ್ಲೆಡೆ ನಡೆಯುವುದಿಲ್ಲ.
* ವಿಳಂಬ ನ್ಯಾಯ: ಪ್ರಕರಣಗಳು ವರ್ಷಗಳ ಕಾಲ ಬಾಕಿ.
* ದಂಡ ಕಡಿಮೆ ಪರಿಣಾಮಕಾರಿಯಲ್ಲ: ದೊಡ್ಡ ಕಂಪನಿಗಳಿಗೆ ಸಣ್ಣ ದಂಡ ಭಯ ಹುಟ್ಟಿಸುವುದಿಲ್ಲ.
* ಜನರ ಅರಿವು ಕಡಿಮೆ:Best-before/Expiry? ಅರ್ಥ ತಿಳಿಯದೆ ಖರೀದಿ.



* ದೂರು ವ್ಯವಸ್ಥೆಯ ಬಳಕೆ ಕಡಿಮೆ: ಗ್ರಾಹಕರು ದೂರು ನೀಡುವುದಿಲ್ಲ.
* ಗುಣಮಟ್ಟವನು ಪರೀಕ್ಷಿಸಲು ಗ್ರಾಹಕರಬಳಿ ಸೌಲಭ್ಯವಿಲ್ಲ.

**ಕಠಿಣ ಕ್ರಮಗಳು ? ಏನು ಬೇಕು?**

* ಕಾನೂನು ಅನುಷ್ಠಾನ ಬಲಪಡಿಸಬೇಕು
  ಅಚ್ಚುಕಟ್ಟಾದ, ಅಚಾನಕ್ ತಪಾಸಣೆ (surprise inspections).
  ಕಳಪೆ/ನಿಷೇಧಿತ ಉತ್ಪನ್ನಗಳಿಗೆ ತಕ್ಷಣದ ಮುಟ್ಟುಗೋಲು ಮತ್ತು ಸಾರ್ವಜನಿಕ ಪ್ರಕಟಣೆ.
  ಮರುಮಾರಾಟ ಮಾಡಿದರೆ ಲೈಸೆನ್ಸ್ ಶಾಶ್ವತ ರದ್ದು.
* ಶಿಕ್ಷೆ ಕಠಿಣವಾಗಬೇಕು
  ಉದ್ದೇಶಪೂರ್ವಕವಾಗಿ expired/ನಿಷೇಧಿತ ಉತ್ಪನ್ನ ಮಾರಾಟ ಮಾಡಿದರೆ ಜೈಲು ಶಿಕ್ಷೆ + ಭಾರೀ ದಂಡ.
  ಹೊಣೆಗಾರ ಅಧಿಕಾರಿಗಳ ಮೇಲೂ ಕ್ರಮ.
* ಪಾರದರ್ಶಕತೆ ಇರಲಿ
  ತಪಾಸಣೆ ಫಲಿತಾಂಶಗಳನ್ನು ಸಾರ್ವಜನಿಕ ಡ್ಯಾಶ್‌ಬೋರ್ಡ್‌ನಲ್ಲಿ ಪ್ರಕಟಿಸಬೇಕು.
  ದೂರುಗಳ ಸ್ಥಿತಿ ಟ್ರ್ಯಾಕ್ ಮಾಡುವ ವ್ಯವಸ್ಥೆ.
* ಜನಜಾಗೃತಿ
  ಶಾಲೆ/ಕಾಲೇಜುಗಳಲ್ಲಿ ಆಹಾರ–ಔಷಧಿ ಸುರಕ್ಷತೆ ಪಾಠ.
  ಮಾಧ್ಯಮಗಳಲ್ಲಿ ನಿಯಮಿತ ಎಚ್ಚರಿಕೆ ಕಾರ್ಯಕ್ರಮಗಳು.
* ನಾಗರಿಕರ ಶಕ್ತಿ ? ಕಾನೂನಿಗೆ ಬಲ
  ಖರೀದಿಸುವ ಮೊದಲು ಲೇಬಲ್, ಲೈಸೆನ್ಸ್ ಸಂಖ್ಯೆ, ಅವಧಿಗಳ ಪರಿಶೀಲನೆ.

ಕಳಪೆ ಉತ್ಪನ್ನ ಕಂಡರೆ ಸಂಬಂಧಿತ ಇಲಾಖೆಗೆ ದೂರುನೀಡುವದು.
ಗ್ರಾಹಕ ನ್ಯಾಯಮಂಡಳಿಗೆ ಹೋಗುವ ಧೈರ್ಯ.
ಮತದಾನದ ವೇಳೆ ಆಹಾರ/ಔಷಧಿ ಸುರಕ್ಷತೆ ಕುರಿತು ಸ್ಪಷ್ಟ ಭರವಸೆ ಕೇಳುವುದು.

**ಕೊನೆಯ ಮಾತು**

ಕಾನೂನುಗಳಿವೆ; ಆದರೆ ಕಠಿಣ ಅನುಷ್ಠಾನ, ಜಾಗೃತ ನಾಗರಿಕತೆ ಇಲ್ಲದೆ ಫಲ ಸಿಗುವುದಿಲ್ಲ.

ಭಯ ಹುಟ್ಟಿಸುವುದು ಕೇವಲ ಶಿಕ್ಷೆ ಅಲ್ಲ ? ಪತ್ತೆ ಮಾಡುವ ಖಚಿತತೆ. " ನ್ಯಾಯವಾಗಿರಬೇಕು? ಎಂಬ ಸಂದೇಶ ಸಿಗುವಾಗಲೇ ಅಕ್ರಮ ಕಡಿಮೆಯಾಗುತ್ತದೆ.

ಜನಾರೋಗ್ಯವು ಐಶ್ವರ್ಯವಲ್ಲ, ಮೂಲಭೂತ ಹಕ್ಕು.

ಅದನ್ನು ಕಾಪಾಡಲು ಸರ್ಕಾರವೂ, ನಾಗರಿಕರೂ ಸಮಾನ ಹೊಣೆಗಾರರು.

**ಮತ್ತೊಂದು ಮನದ ಮಾತು ಮುಂದಿನ ವಾರ.**

# ಉರಿಝೋನದಲ್ಲಿ ಅರಳಿದ ಕಮಲ!?



ರೂಪ ಮಂಜುನಾಥ
ಹೊಳೆನರಸೀಪುರ

ಒಂದು ಕಾಲದಲ್ಲಿ ಮರುಭೂಮಿಯಾಗಿದ್ದ ಅಮೆರಿಕದ ರಾಜ್ಯ ಅರಿಝೋನ ಈಗ ಮಾನವ ಪ್ರಯತ್ನದಿಂದ ಹಸಿರಿನಿಂದ ಕಂಗೊಳಿಸುವ ಸುಂದರ ನಾಡಾಗಿದೆ. ಮನುಷ್ಯ ಏನೇ ಪ್ರಯತ್ನ ಮಾಡಿದರೂ ಪ್ರಕೃತಿ ಅವನನ್ನ ಮೀರಿ ಸೆಡ್ಡೊಡ್ಡಿ ನಿಲ್ಲುವುದೇನೋ ಸತ್ಯ. ಇಲ್ಲಿ ಬದುಕಲು ಏನು ಅನುಕೂಲ ಬೇಕೋ ಎಲ್ಲವನ್ನೂ ಮಾನವ ಮಾಡಿಕೊಂಡಿದ್ದರೂ ಬೇಸಿಗೆಯಲ್ಲಿ ಅರಿಝೋನ ಧಗಧಗ ಉರಿಯುತ್ತದೆ. ಅದಕ್ಕೇ ಅರಿಝೋನ ಬಹಳ ಜನರ ಬಾಯಲ್ಲಿ ಉರಿಝೋನವಾಗಿದೆ. ಇಂಥ ಉರಿಝೋನದಲ್ಲಿ ಅರಳಿರುವ ಕನ್ನಡದ ಕಮಲದ ಕಂಪಿನ ಘಮಲನ್ನು ತಾವು ಕೂಡ ಆಸ್ವಾದಿಸಲಿ ಎಂಬ ಸದುದ್ದೇಶದಿಂದ ಈ ಲೇಖನ ತಮ್ಮ ಮುಂದಿಡುತ್ತಿದ್ದೇನೆ.

ಮನುಷ್ಯ ತನ್ನ ಅನುಕೂಲ ಹೆಚ್ಚಾದಂತೆಲ್ಲಾ, ಐಶಾರಾಮಿ ಜೀವನ ಬಯಸುವುದು ಸಹಜ! ಅದೂ ವಿಶೇಷವಾಗಿ ಅನಿವಾಸೀ ಭಾರತೀಯರು ಭಾರತಕ್ಕೆ ವಿರಾಮದ ದಿನಗಳನ್ನು ಕಳೆಯಲು ಬಂದರೆ,ಬಂಧುಬಳಗ, ಗೆಳೆಯರೊಟ್ಟಿಗೆ ಗೆಟ್ ಟು ಗೆದರ್, ರೆಸಾರ್ಟು, ಹೈಫೈ ರೆಸ್ಟೋರೆಂಟು,ಶಾಪಿಂಗು, ಹೀಗೆ ಹಲವಾರು ರೀತಿಗಳಲ್ಲಿ ಸಮಯ ಮೋಜು ಮಸ್ತಿಯಲ್ಲಿ ಕಳೆದು ಆನಂದವಾಗಿ ವಿದೇಶಕ್ಕೆ ಹಿಂತಿರುಗುವುದು ಸಾಮಾನ್ಯ! ಆದರೆ, ಬೆಂಗಳೂರಿನಿಂದ ಅಮೆರಿಕಕ್ಕೆ ಹಾರಿರುವ ಕಮಲ ಅವರು ತಾಯ್ನಾಡಿಗೆ ಭೇಟಿ ನೀಡಿದಾಗ ಇಷ್ಟಪಟ್ಟು ಮಾಡುವ ಕೆಲಸವೆಂದರೆ, ಬೆಂಗಳೂರಿನ ಕೊಳಗೇರಿಯಲ್ಲಿನ ಮಕ್ಕಳಿಗೆ ಗಣಿತ ಪಾಠ ಮಾಡುವುದು, ಅವರಿಗೆ ತಿಂಡಿ ತಿನಿಸು, ಪುಸ್ತಕಗಳು ಮತ್ತಿತರ ಅವಶ್ಯ ಸಾಮಾನುಗಳನ್ನು ಕೊಡುವುದರಲ್ಲಿ ಆನಂದ ಪಡುವುದು. ಇಂಥ ಅಪರೂಪದ ವ್ಯಕ್ತಿಯನ್ನು ಕಂಡಾಗ, ಅವರ ಮೇಲಿದ್ದ ಗೌರವ ನಾಲ್ಕು ಪಟ್ಟು ಹೆಚ್ಚಾಗಿದ್ದು ಮಾತ್ರ ನಿಜ! "ಸೇವೆಯು ಮಲ್ಲಿಗೆ ಹೂವಿನಂತೆ; ಅದು ನೀಡುವವರ ಕೈಯಲ್ಲೂ ಸುಗಂಧವನ್ನು ಉಳಿಸುತ್ತದೆ, ಪಡೆಯುವವರ ಮನಸ್ಸನ್ನೂ ಅರಳಿಸುತ್ತದೆ." ಕಮಲ ಅವರು ನೀಡುವ ಜ್ಞಾನದಾನವು ಮಕ್ಕಳ ಭವಿಷ್ಯವನ್ನು ಬೆಳಗಿ ಬಂಗಾರವಾಗಿಸುವುದು ಸತ್ಯ!

ನಹಿ ಜ್ಞಾನೇ ಸದೃಶಮ್?, ಹೌದು, ಜ್ಞಾನಕ್ಕೆ ಸಮನಾದದ್ದು ಯಾವುದೂ ಇಲ್ಲ. ಜ್ಞಾನ ಹಂಚಿದಷ್ಟೂ ಹೆಚ್ಚಾಗುವ ಅದ್ಭುತ ಸಂಪತ್ತು!

ಕಮಲ ಅವರ ಕೆಲಸ ಇಷ್ಟಕ್ಕೇ ಸೀಮಿತವಲ್ಲ. ಸ್ವಭಾವವೇ ಹಾಗೆ ಎನ್ನುವಂತೆ ಎಲ್ಲರೊಂದಿಗೂ ಹೊಂದಿಕೊಳ್ಳುವ ಗುಣ. ಯಾರಿಗೆ ತೊಂದರೆ ಕಂಡರೂ ತಕ್ಷಣವೇ ತನ್ನ ಕೆಲಸಗಳನ್ನೂ ಬದಿಗಿರಿಸಿ ನೆರವಾಗುವುದು,ಸದಾ ಲವಲವಿಕೆಯಿಂದ ಏನಾದರೊಂದು ಹೊಸತನ ಹುಡುಕಿಕೊಂಡು ಸದಾ ಉಲ್ಲಾಸದಿಂದಿರುವುದು,ಸಮಾಜಮುಖಿ ಚಟುವಟಿಕೆಗಳಲ್ಲಿ ತೊಡಗಿರುವುದು,ಸ್ನೇಹಿತ ಸುಖದುಃಖಗಳಲ್ಲಿ ಭಾಗಿಯಾಗುವುದಾಗಲೀ, ಸಲಹೆ ಸೂಚನೆ ನೀಡುವುದಾಗಲಿ ಆಕೆಗೆ ಬಲು ಇಷ್ಟದ ಕೆಲಸ.ತನ್ನ ಸುತ್ತಮುತ್ತಲ ಎಲ್ಲರಿಗೂ ಅಚ್ಚುಮೆಚ್ಚಿನ ಗೆಳತಿಯಾಗಿ ಅಜಾತಶತ್ರು ಆಗಿರುವರೆಂದೇ ಹೇಳಬೇಕು.

ಬೆಂಗಳೂರಿನ ಕೊಳಗೇರಿಯ ಗಲ್ಲಿಗಳಲ್ಲಿ ಜ್ಞಾನದ ಜ್ಯೋತಿ ಬೆಳಗುವ ಕಮಲ ಅವರು "ಹನಿ ಹನಿ ಕೂಡಿದರೆ ಹಳ್ಳ, ತೆನೆ ತೆನೆ ಕೂಡಿದರೆ ಬಳ್ಳ" ಎಂಬಂತೆ ಸದ್ದಿಲ್ಲದೆ ಸಮಾಜಸೇವೆಯಲ್ಲಿ ತೊಡಗಿರುವ ಅಪರೂಪದ ರತ್ನ.

ಬೆಂಗಳೂರಿಗೆ ಬಂದಾಗ ಅವರು ರೆಸ್ಟೋರೆಂಟ್‌ಗಳ ಮೆನು ಕಾರ್ಡ್ ಹುಡುಕುವ ಬದಲು, ಕೊಳಗೇರಿ ಮಕ್ಕಳ ಗಣಿತದ ಪುಸ್ತಕಗಳನ್ನು ಹುಡುಕುತ್ತಾರೆ. ಮಕ್ಕಳಿಗೆ ಗಣಿತ ಪಾಠ ಮಾಡುವುದು, ಅವರಿಗೆ ಪುಸ್ತಕ–ತಿಂಡಿ ಹಂಚುವುದರಲ್ಲಿ ಅವರು ಕಾಣುವ ಆನಂದ ಕೋಟಿ ರೂಪಾಯಿ



ಕೊಟ್ಟರೂ ಸಿಗಲಾರದು. "ವಿದ್ಯೆಯೇ ಮಹಾಧನ" ಎಂಬುದನ್ನು ಅರಿತಿರುವ ಕಮಲ ಅವರು, ಆ ಮಕ್ಕಳಿಗೆ ಬರಿ ಅಕ್ಷರವನ್ನಷ್ಟೇ ಅಲ್ಲ, ಬದುಕಿನ ಭರವಸೆಯನ್ನೂ ನೀಡುತ್ತಿದ್ದಾರೆ. ಅವರ ಈ ಗುಣ ನೋಡಿದಾಗ "ಮಾಡಿದುಣ್ಣೋ ಮಹಾರಾಯ" ಎಂಬ ಮಾತಿನಂತೆ, ಅವರು ಬಿತ್ತುತ್ತಿರುವ ಒಳ್ಳೆಯ ಕೆಲಸದ ಬೀಜಗಳು ಮುಂದೆ ದೊಡ್ಡ ಫಸಲನ್ನೇ ನೀಡಲಿವೆ ಎಂಬುದು ಖಚಿತ.

ನಿವೃತ್ತಿಯ ನಂತರದ ಜೀವನವನ್ನು ಕೇವಲ ವಿಶ್ರಾಂತಿಗೆ ಮೀಸಲಿಡದೆ, ಅದನ್ನು ಸಮಾಜದ ಏಳಿಗೆಗೆ ಬಳಸುವ ಅಚಲ ನಿರ್ಧಾರ ಕಮಲ ಅವರದು. ನಮ್ಮ ದೇಶದ ಹೆಮ್ಮೆಯ 'ವೇದ ಗಣಿತ' (Vedic Maths) ಮತ್ತು ಆಧುನಿಕ 'ಅಬ್ಯಾಕಸ್' (Abacus) ಎರಡನ್ನೂ ಮೇಳೈಸಿ, ಮಕ್ಕಳಿಗೆ ಗಣಿತವನ್ನು ಸರಳವಾಗಿ ಮತ್ತು ಆಸಕ್ತಿದಾಯಕವಾಗಿ ಕಲಿಸುವ ಬೃಹತ್ ಯೋಜನೆಯನ್ನು ಅವರು ಹೊಂದಿದ್ದಾರೆ. "ಹಳೆಯ ಬೇರು ಹೊಸ ಚಿಗುರು" ಎನ್ನುವಂತೆ, ಪ್ರಾಚೀನ ಜ್ಞಾನವನ್ನು ಇಂದಿನ ತಂತ್ರಜ್ಞಾನದೊಂದಿಗೆ ಬೆರೆಸಿ ಮುಂದಿನ ಪೀಳಿಗೆಗೆ ನೀಡುವ ಅವರ ಈ 'ಗಣಿತದ ಕೊಡುಗೆ' ಅತ್ಯಂತ ಅಮೂಲ್ಯವಾದುದು.

**ವಿದ್ಯಾರ್ಥಿಗಳ ಭವಿಷ್ಯಕ್ಕೆ 'ರೆಸ್ಯೂಮೆ' ಮೆರುಗು:**

ಕಮಲ ಅವರ ಸೇವೆ ಕೇವಲ ಪಾಠಕ್ಕೆ ಸೀಮಿತವಾಗಿಲ್ಲ. ಅಮೆರಿಕದಂತಹ ದೇಶಗಳಲ್ಲಿ ಉನ್ನತ ವ್ಯಾಸಂಗಕ್ಕೆ ಸೇರಬಯಸುವ ವಿದ್ಯಾರ್ಥಿಗಳಿಗೆ 'ರೆಸ್ಯೂಮೆ' (Resume) ಅಥವಾ ಪ್ರೊಫೈಲ್ ಸಿದ್ಧಪಡಿಸುವುದು ದೊಡ್ಡ ಸವಾಲು. ಅಂತಹ ನೂರಾರು ವಿದ್ಯಾರ್ಥಿಗಳಿಗೆ ಅವರ ಶಕ್ತಿ ಮತ್ತು ಸಾಧನೆಗಳನ್ನು ಪ್ರತಿಬಿಂಬಿಸುವ ಆಕರ್ಷಕ ರೆಸ್ಯೂಮೆಗಳನ್ನು ಸಿದ್ಧಪಡಿಸಿಕೊಡುವ ಮೂಲಕ ಅವರ ವೃತ್ತಿಜೀವನಕ್ಕೆ ಭದ್ರ ಬುನಾದಿ ಹಾಕುತ್ತಿದ್ದಾರೆ. "ಕೈ ಕೆಸರಾದರೆ ಬಾಯಿ ಮೊಸರು" ಎಂಬಂತೆ, ಅವರ ಈ ನಿಸ್ವಾರ್ಥ ಶ್ರಮದಿಂದ ಎಷ್ಟೋ ಯುವಕ ಯುವತಿಯರು ಇಂದು ವಿದೇಶಿ ವಿಶ್ವವಿದ್ಯಾಲಯಗಳಲ್ಲಿ ತಮ್ಮ ಭವಿಷ್ಯ ಕಂಡುಕೊಳ್ಳುತ್ತಿರುವುದಕ್ಕೆ ಇವರ ಭಾಷಾ ಶ್ರೀಮಂತಿಕೆಯೂ ಕಾರಣ!



ಸದಾ ಹೊಸತನದ ಹುಡುಕಾಟದಲ್ಲಿರುವ ಕಮಲ ಅವರು, ಯಾರಿಗೆ ತೊಂದರೆಯಾದರೂ ತನ್ನ ಕೆಲಸಗಳನ್ನು ಬದಿಗಿಟ್ಟು ಓಡಿ ಬರುವ ಗುಣದವರು. ಸ್ನೇಹದ ವಿಚಾರಕ್ಕೆ ಬಂದರೆ ಅವರು ಅಪ್ಪಟ 'ಅಜಾತಶತ್ರು'. ತನ್ನ ಸುತ್ತಮುತ್ತಲ ಎಲ್ಲರಿಗೂ ಅಚ್ಚುಮೆಚ್ಚಿನ ಗೆಳತಿಯಾಗಿರುವ ಇವರು, "ಪರೋಪಕಾರಾರ್ಥಂ ಇದಂ ಶರೀರಂ" ಎಂಬ ಸಂಸ್ಕೃತೋಕ್ತಿಯನ್ನು ಅನ್ವಯಿಸಿಕೊಂಡು ಬದುಕುತ್ತಿದ್ದಾರೆ.ಮನುಷ್ಯ ಯಾವಾಗಲೂ ಸಂಬಂಧಗಳನ್ನು ಮುರಿಯುವ ಗೋಡೆಯಾಗದೆ, ಬಾಂಧವ್ಯವನ್ನು ಬೆಸೆಯುವ ಸೇತುವೆಯಾಗಬೇಕು ಎಂಬ ಹಿತೋಕ್ತಿಯನ್ನು ಅಕ್ಷರಶಃ ಪಾಲಿಸುತ್ತಾ, ಅದನ್ನೇ ತಮ್ಮ ಜೀವನದಲ್ಲಿ ಅನುಸರಿಸುತ್ತಿದ್ದಾರೆ.

ಅವರ ಸೇವಾ ಹಸಿವು ಕೇವಲ ಭಾರತಕ್ಕೆ ಮಾತ್ರ ಸೀಮಿತವಾಗಿಲ್ಲ. ಅಮೆರಿಕದ ಫೀನಿಕ್ಸ್‌ನಲ್ಲಿ ಲಯನ್ಸ್ ಕ್ಲಬ್‌ನ (Lions Club) ಮಹಿಳಾ ಶಾಖೆಯನ್ನು ಆರಂಭಿಸುವ ಮೂಲಕ ಅಲ್ಲಿಯೂ ನೂರಾರು ಮಹಿಳೆಯರನ್ನು ಸೇವಾ ಚಟುವಟಿಕೆಗಳಲ್ಲಿ ತೊಡಗಿಸಿದ್ದಾರೆ. "ಹನಿ ಹನಿ ಕೂಡಿದರೆ ಹಳ್ಳ" ಎಂಬಂತೆ, ಹತ್ತಾರು ಕೈಗಳನ್ನು ಒಗ್ಗೂಡಿಸಿ ಸಮಾಜಮುಖಿ ಕಾರ್ಯಗಳನ್ನು ನಡೆಸುತ್ತಿರುವ ಕಮಲ ಅವರು ನಿಜಕ್ಕೂ ಅಂತರಾಷ್ಟ್ರೀಯ ಮಟ್ಟದ ಸಂಘಟಕಿ.

"ಸೇವೆ ಮಾಡುವ ಕೈಗಳು ಪೂಜೆ ಮಾಡುವ ಕೈಗಳಿಗಿಂತಲೂ ಶ್ರೇಷ್ಠ?, ಎನ್ನುವಂತೆ, ಕಮಲ ಅವರ ನಿಸ್ವಾರ್ಥ ಸೇವೆಗೆ ಭಗವಂತನು ಸುಪ್ರೀತನಾಗುವುದರಲ್ಲಿ ಯಾವ ಸಂಶಯವೂ ಇಲ್ಲ.

ಸಂಪ್ರದಾಯದ ಸಿರಿವಂತಿಕೆಯಲ್ಲೂ ಸೈ ಎನಿಸಿಕೊಂಡಿರುವ ಕಮಲ ಅಪ್ಪಟ ಸದ್ಗೃಹಿಣಿ!

ಕಮಲ ಅವರ ವ್ಯಕ್ತಿತ್ವದ ಮತ್ತೊಂದು ಸುಂದರ ಮಗ್ಗುಲೆಂದರೆ ಅವರ ಸಂಸ್ಕಾರ ಮತ್ತು ಸಂಪ್ರದಾಯದ ಮೇಲಿರುವ ಅಚಲ ನಂಬಿಕೆ. ಅಮೆರಿಕದಂತಹ ಪಾಶ್ಚಿಮಾತ್ಯ ಸಂಸ್ಕೃತಿಯ ನಡುವೆ ದಶಕಗಳ ಕಾಲ ನೆಲೆಸಿದ್ದರೂ, ಮನೆಯ ಯಾವೊಂದು ಆಚಾರ–ವಿಚಾರಗಳನ್ನು ಅವರು ಕೈಬಿಟ್ಟಿಲ್ಲ. ಹಬ್ಬ–ಹರಿದಿನಗಳಿರಲಿ ಅಥವಾ ದೈನಂದಿನ ಪೂಜೆ–ಪುನಸ್ಕಾರಗಳಿರಲಿ, ಶ್ರದ್ಧೆಯಿಂದ ಪಾಲಿಸುವ ಇವರು "ಮನೆಯೇ ಮಂತ್ರಾಲಯ" ಎಂಬ ಮಾತಿಗೆ ನಿದರ್ಶನ. ಮದುವೆಯಾಗಿ ಬಂದ ಮನೆತನದ ಗೌರವವನ್ನು ಎತ್ತಿ ಹಿಡಿಯುತ್ತಾ, ಹಿರಿಯರ ಜವಾಬ್ದಾರಿಗಳನ್ನು ಅಚ್ಚುಕಟ್ಟಾಗಿ ನಿಭಾಯಿಸುವ ಸಮರ್ಥ ಸೊಸೆಯಾಗಿ, ಪ್ರೀತಿಯ ಹೆಂಡತಿಯಾಗಿ, ಮಮಕಾದ ಮಾತೆಯಾಗಿ, ಬಂಧುಬಾಂಧವರಿಗೆಲ್ಲಾ ಅಚ್ಚುಮೆಚ್ಚಾಗಿದ್ದಾರೆ.

ಕರ್ತವ್ಯದ ಹಾದಿಯಲ್ಲಿ ಸಮತೋಲನ ಕಾಪಾಡುತ್ತಾ

"ಹಿರಿಯಕ್ಕನ ಚಾಳಿ ಮನೆಮಂದಿಗೆಲ್ಲ" ಎಂಬಂತೆ, ಮನೆಯ ಹಿರಿಯರ ಆಶೋತ್ತರಗಳನ್ನು ಅರಿತು ನಡೆಯುವುದು, ಕುಟುಂಬದ ಪ್ರತಿಯೊಬ್ಬರ ಅಗತ್ಯಗಳನ್ನು ಪ್ರೀತಿಯಿಂದ ಪೂರೈಸುವುದು ಕಮಲ ಅವರ ಜನ್ಮಜಾತ ಗುಣ. ಒಂದೆಡೆ ವಿದೇಶದ ಲಯನ್ಸ್ ಕ್ಲಬ್‌ನ ನಾಯಕತ್ವ, ಇನ್ನೊಂದೆಡೆ ಕೊಳಗೇರಿ ಮಕ್ಕಳ ಜ್ಞಾನದಾನ?ಇವೆಲ್ಲದರ ನಡುವೆ ಮನೆಯ ಸಂಪ್ರದಾಯ ಮತ್ತು ಹಿರಿಯರ ಆರೈಕೆಯಲ್ಲಿ ಅವರು ತೋರುವ ಶ್ರದ್ಧೆ ಅಚ್ಚರಿ ಮೂಡಿಸುವಂತದ್ದು.

ಸಂಸ್ಕೃತಿ ಎಂದರೆ ಕೇವಲ ಹಳೆಯ ಆಚಾರವಲ್ಲ, ಅದು ಬದುಕಿನ ಸಂಸ್ಕಾರ. ವಿದೇಶದಲ್ಲಿದ್ದರೂ ಭಾರತೀಯ ಸಂಪ್ರದಾಯದ ಹಣತೆಯನ್ನು ಬೆಳಗುತ್ತಿರುವ ಕಮಲ ಅವರು, ಆಧುನಿಕತೆ ಮತ್ತು ಸಂಪ್ರದಾಯದ ನಡುವೆ ಅದ್ಭುತ ಸಮತೋಲನ ಕಾಯ್ದುಕೊಂಡಿರುವ 'ನವಯುಗದ ಸದ್ಗೃಹಿಣಿ'."

ಸದಾ ಹೊಸತನದ ಹುಡುಕಾಟದಲ್ಲಿರುವ ಕಮಲ ಅವರು, ಎಲ್ಲರಿಗೂ ಪ್ರೀತಿಯನ್ನೇ ಹಂಚುತ್ತಾ, ಅಸೂಯೆಯಿಂದ ದೂರವೇ ಉಳಿದು, ನಗು ನಗುತಾ ನಗಿಸುತ್ತಾ, ಗುಂಪಿನಲ್ಲಿ ಬೆರೆತು ಒಂದಾಗುತ್ತಾ, ಎಲ್ಲರಿಗೂ ಇಷ್ಟರಾಗಿ, ಶ್ರದ್ಧೆಯಿಂದ ಕೇಳುಗರಾಗಿ, "ಪರೋಪಕಾರಾರ್ಥಂ ಇದಂ ಶರೀರಂ" ಎಂಬ ಸಂಸ್ಕೃತೋಕ್ತಿಯನ್ನು ಅನ್ವಯಿಸಿಕೊಂಡು ಬದುಕುತ್ತಿದ್ದಾರೆ. ಇಂಥ ಅಪರೂಪದ ಮಹಿಳೆಯ ಸಂತತಿ ಸಾವಿರವಾಗಲಿ! ವಂದನೆಗಳು.

## ಭಾವದ ಹಕ್ಕಿ

ಹಂಗಿನ ಬದುಕು ಇದು
ಹಮ್ಮುಬಿಮ್ಮುಗಳ ಬಿಟ್ಟು ಬಿಡು
ರಂಗಿನ ರೆಕ್ಕೆಯ ಕಟ್ಟಿರಲು
ಇಷ್ಟ ಕಷ್ಟಗಳ ಹೊಂದಾಣಿಕೆಯಲಿ
ನಷ್ಟ ಅನಿಷ್ಟಗಳ ಮರೆತು ಬಿಡು

ಸರಿದ ಸಮಯವು ಮತ್ತೆ ಬರದು
ಕಾಲ ಸರಿದಂತೆ ಉತ್ತರವು ಸಿಗಲು
ನೆನಪುಗಳ ಚಕ್ರ ಸುತ್ತುತ್ತಿರಲು
ನಯನದಿಂದ ಭಾಷ್ಪ ನೆಲವ ಸೋಕಲು
ಮೆಲು ನಗುವೊಂದು ಅಧರದಿ ಬಿರಿಯಿತು

ಕಟ್ಟಿಟ್ಟ ಭಾವಗಳ ಸ್ವತಂತ್ರಗೊಳಿಸಿ
ಮನದ ಬೇಗುದಿಗೊಂದು ಅಲ್ಪವಿರಾಮ ನೀಡಿ
ಬಂಧಿತ ಪದಗಳ ಕವನ ಪೋಣಿಸಲು
ಭಾವ ಪಂಜರದ ಹಕ್ಕಿ ಹಾರಿತು
ಬಾಳ ಬಾನು ರಂಗು ರಂಗಾಯಿತು

## ಯಾರವರು?

ನಾನೀಗಿರಲಿಲ್ಲ ಮೊದಲು
ಬದಲಾಯಿಸಿದವರಾರು
ವದನದ ಚೆಲುವಿನ ನಗುವ
ಕಸಿದವರಾರು
ಮಾತು ಮೌನವಾಗಿ ದಿನಕಳೆಯಲು
ಪ್ರೌಢತೆಯ ಭಾವಕ್ಕೆ ತಾಳ್ಮೆ
ಕಲಿಸಿದವರಾರು

ಯಾರೆಂದು ಹೇಳಲಿ
ನನ್ನೊಳಗಿರುವ ನಾನೇ ಆಗಿರಬಹುದೇ
ಸಂಸಾರ ಸಮರಸ ಹೊಂದಾಣಿಕೆಗೆ
ಅನಿವಾರ್ಯವಾಯ್ತೆ?

ಬದಲಾದ ಬದುಕಿನಲಿ
ಮುಖವಾಡದ ನಗು
ಮಾತು ಮರೆತು ಮೌನ
ಗಂಭೀರಭಾವ
ಬಯಕೆಗಳ ಮೂಟೆ ಕಟ್ಟಿ
ಜವಬ್ಧಾರಿಯ ಹೊರೆ ಹೆಗಲ ಮೇಲೆ

ನಾನೇ ನಿರ್ಮಿಸಿದ ಬೇಲಿಯೊಳಗೆ
ಬಂಧಿ ನಾನು
ಹೊರಬರುವ ಆಸೆ ಆಕಾಂಕ್ಷೆ
ನೂರು ನೂರು
ಎಲ್ಲ ಸುಖವ ಬಲಿಗೊಡಬೇಕು
ನಾಳಿನ ಬೆಳಕ ನೋಡಲು.



ರೂಪ ಮಂಜುನಾಥ
ಹೊಳೆನರಸೀಪುರ

Published by Mihir Akash K.R Printed by M.S.Shivaprakash on behalf of Mihir Akash K.R. Printed at M.S. Shivaprakash, IDEAL OFFSET PRINTERS, #337, SLJ Temple Street, Old Town Mandya Dist-571401, Karnataka. Published from No 170, Nirvikalpa Road, E&F block, Ramakrishna Nagar, Mysore - 570022, Editor K.N Ravi,